ಬೀದರ ಜನಪದ ಹಾಡುಗಳು ಒಂದು ಅಧ್ಯಯನ

(ಕ.ರಾ.ಶಿ. ಸಂಸ್ಥೆ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ, ಇವರಿಗೆ ಎಂ.ಫಿಲ್ ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಸೂರೆ ಸಾವಿತ್ರಿಬಾಯಿ ಕಾಶಪ್ಪ

ಮಾರ್ಗದರ್ಶಕರು

ಡಾ. ಸೋಮನಾಥ ಯಾಳವಾರ

ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ

ಕನ್ನಡ ಸಂಶೋಧನ ಕೇಂದ್ರ, ಬೀದರ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

ಸೆಪ್ಟೆಂಬರ್ - ೨೦೦೮

ಬೀದರ ಜನಪದ ಹಾಡುಗಳು ಒಂದು ಅಧ್ಯಯನ

(ಕ.ರಾ.ಶಿ. ಸಂಸ್ಥೆ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ, ಇವರಿಗೆ ಎಂ.ಫಿಲ್ ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಸೂರೆ ಸಾವಿತ್ರಿಬಾಯಿ ಕಾಶಪ್ಪ

ಮಾರ್ಗದರ್ಶಕರು

ಡಾ. ಸೋಮನಾಥ ಯಾಳವಾರ

ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಕನ್ನಡ ಸಂಶೋಧನ ಕೇಂದ್ರ, ಬೀದರ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

ಸೆಪ್ಟೆಂಬರ್ - ೨೦೦೮

ಪ್ರಮಾಣ ಪತ್ರ

ಬೀದರ ಜನಪದ ಹಾಡುಗಳು ಒಂದು ಅಧ್ಯಯನ ಎಂಬ ನಿಬಂಧವನ್ನು ಡಾ. ಸೋಮನಾಥ ಯಾಳವಾರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್, ಪದವಿಗಾಗಿ ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಅವರಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಬೀದರ

ದಿನಾಂಕ : ೩೦/೦೯/೦೮

ಸೂರೆ ಸಾವಿತ್ರಿಬಾಯಿ ಕಾಶಪ್ಪ
ಎಂ.ಫಿಲ್ ವಿದ್ಯಾರ್ಥಿನಿ,
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಕನ್ನಡ ಸಂಶೋಧನ ಕೇಂದ್ರ, ಬೀದರ

ಮಾರ್ಗದರ್ಶಕರ ಪ್ರಮಾಣ ಪತ್ರ

ಬೀದರ ಜನಪದ ಹಾಡುಗಳು ಒಂದು ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸೂರೆ ಸಾವಿತ್ರಿಬಾಯಿ ಕಾಶಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಬೀದರ

ದಿನಾಂಕ : ೩೦/೦೯/೦೮

ಡಾ. ಸೋಮನಾಥ ಯಾಳವಾರ
ಮಾರ್ಗದರ್ಶಕರು
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಕನ್ನಡ ಸಂಶೋಧನ ಕೇಂದ್ರ, ಬೀದರ

ಪರಿವಿಡಿ

ಅಧ್ಯಾಯ - ೧

ಪೀಠಿಕೆ

ಅಧ್ಯಯನದ ಉದ್ದೇಶ

ಉಗಮ - ವಿಕಾಸ

ಸ್ವರೂಪ-ಲಕ್ಷಣ

ವ್ಯಾಪ್ತಿ

ಅಧ್ಯಾಯ - ೧

ಪೀಠಿಕೆ :

ಕರ್ನಾಟಕ ಸಾಹಿತ್ಯ ಮತ್ತು ಸಂಸ್ಕೃತಿಯ ನೆಲಬೀಡು ಗಡಿಭಾಗದಲ್ಲಿರುವ ಬೀದರ ತಾಲ್ಲೂಕ ಜನಪದ ಭಾಷೆ ಮತ್ತು ಸಂಸ್ಕೃತಿಗಳೆರಡರ ದೃಷ್ಠಿಯಿಂದ ಸಮ್ಮಿಶ್ರ ಸ್ವರೂಪ ಪಡೆದಂತಹ ಭಾಗ ಹಾಗೂ ಸಮ್ಮಿಶ್ರ ಭಾಷೆಗಳ ವಿಭಿನ್ನ ಜಾನಪದ ಗೀತೆಗಳ ತವರೂರು. ಜನಪದ ಗೀತೆಗಳ ಸಂಸ್ಕೃತಿ ಸ್ವರೂಪವನ್ನು ಅರಿತುಕೊಳ್ಳುವದು ಈ ಅಧ್ಯಯನದ ಮುಖ್ಯ ಧ್ಯೇಯವಾಗಿದೆ. ಜನಪದ ಗೀತೆಗಳು ಜನಪದ ಸಂಸ್ಕೃತಿಯ ಅಂಗ, ಜನಪದ ಗೀತೆ ನಗರ ಸಂಸ್ಕೃತಿಗಿಂತ ಭಿನ್ನವಾದ ಜನಪದ ಸಂಸ್ಕೃತಿಯ ಒಂದು ಅಂಗವಾಗಿದ್ದು, ಇದು ನಾಡು ನುಡಿಯ ಸಂಸ್ಕೃತಿಯ ಕೆಲವು ಮುಖಗಳನ್ನು ಮಾತ್ರ ಪ್ರತಿಬಿಂಬಿಸುತ್ತದೆ. ನಿರಂತರವಾಗಿ ಉಳಿದಂಥ ಸಾಹಿತ್ಯವನ್ನುಳ್ಳ ಕಾವ್ಯವನ್ನು ಜನಪದ ಗೀತೆ ಎಂದೆನಿಸುತ್ತದೆ.

ಜಾನಪದದಲ್ಲಿ ಪಟ್ಟಣದ ಶೈಕ್ಷಣಿಕ ಸಾಂಸ್ಕೃತಿಕ ಮುಂತಾದ ವೈವಿಧ್ಯಮಯವಾಗಿ ಕಾಣದಿರುವಂತಹ ಅಂಶಗಳನ್ನು ಸೂಚಿಸುತ್ತದೆ. ಹಳ್ಳಿಯ ಜೀವನ ಪದ್ಧತಿ ಹಾಗೂ ಬೌದ್ಧಿಕ ವಿಷಯಗಳು ಹಳ್ಳಿಗರಿಗೆಲ್ಲ ಸಮವಾಗಿದ್ದು ಏನೊಂದನ್ನು ಮಾಡಿದರೂ ಅದರಲ್ಲಿ ಎಲ್ಲರ ಪಾಲಿರುತ್ತದೆ. ಈ ಮಾತು ಜನಪದ ಹಾಡು ಮತ್ತು ಸಂಗೀತಕ್ಕೂ ಅನ್ವಯಿಸುತ್ತದೆ.

ಜನಪದ ಗೀತೆಗಳು ಜನಪದ ಸಂಗೀತದ ಲೇಪನವನ್ನು ಪಡೆದುಕೊಂಡೇ ಹುಟ್ಟಿರುವದರಿಂದ ಅವು ಕೇಳುಗರನ್ನು ಬಲು ಆಕರ್ಷಿಸುತ್ತವೆ. ಕೇಳಿದವರು ತಾವು ಸಹ ಕಲಿತು ಹಾಡುವಂತೆ ಪ್ರೇರೇಪಿಸುತ್ತವೆ. ಈ ಗೇಯತೆಯ ಗುಣ ಜಾನಪದ ಸಾಹಿತ್ಯದ ಇತರ ಪ್ರಕಾರಗಳಿಗಿಲ್ಲ. ಪ್ರಮುಖ ಜಾನಪದ ವಿದ್ವಾಂಸರಾದ ಡಾ. ಹಾ.ಮಾ. ನಾಯಕರು "ಸಂಪ್ರದಾಯಗಳಿಂದ ಕೂಡಿರುವುದೆಲ್ಲವು ಜಾನಪದ" ಎಂದರೆ ಬಿ.ಎಂ. ಶ್ರೀಯವರು ಜನವಾಣಿ ಬೇರು ಕವಿವಾಣಿ ಹೂ ಎಂದು ಕರೆದಿದ್ದಾರೆ. 'ಜಾನಪದ' ಎನ್ನುವುದು ಸಮ ಸಾಹಿತ್ಯದ ಹೆತ್ತತಾಯಿ ಜಾನಪದ ವಿದ್ವಾಂಸ ಬಾಗ್ಸ ಅವರು ಜಾನಪದವನ್ನು ಸ್ಥೂಲವಾಗಿ ನಾಲ್ಕು ಬಗೆಯದು ಎಂದು ವರ್ಗೀಕರಿಸಿದ್ದಾರೆ. ಸಾಹಿತ್ಯ ಬಗೆಯಲ್ಲಿ ಪುರಾಣ, ಜನಪದ ಕಥೆ, ಹಾಡು, ಭಾಷಿಕ ಬಗೆಯಲ್ಲಿ ಮಾತು, ಸನ್ನೆ, ಒಗಟು, ಗಾದೆ, ಒಡುಪು ಇತ್ಯಾದಿ.

ಜಾನಪದ ಎಂಬುದರ ಹರವು ಬಹಳ ವಿಸ್ತಾರವಾಗಿದೆ. ಇದರಲ್ಲಿ ಭವಿಷ್ಯದ ನಂಬಿಕೆಗಳು, ನೃತ್ಯ, ಸಂಗೀತ ಆಟ, ವಿನೋದ ನಾಟಕ, ಉಡುಗೊರೆ, ಅಡುಗೆ ಕಲೆ, ಕ್ರಿಯಾತ್ಮಕ ಬಗೆ, ಮದ್ದು, ಚಿಕಿತ್ಸೆ ಮುಂತಾದವೆಲ್ಲವನ್ನೂ ಒಳಗೊಂಡಿದೆ ಎನ್ನುವರು ಬಾಗ್ಸವರು.

ಜಾನಪದ ಗೀತೆಗಳಲ್ಲಿ ಹಲವು ಪ್ರಕಾರಗಳಿವೆ. ಮುಖ್ಯವಾಗಿ ಗಂಡಸರ ಹಾಡು, ಹೆಂಗಸರ ಹಾಡುಗಳು, ಮಕ್ಕಳ ಹಾಡುಗಳು, ಈ ಹಾಡುಗಳನ್ನು ಭೋದಿಸುವ ಯಾವ ತಂತ್ರವೂ ಇಲ್ಲ. ಇವೆಲ್ಲವನ್ನು ಕೇಳುದರ ಮೂಲಕವೇ ಕಲಿಯಲಾಗುತ್ತವೆ. ಇಲ್ಲಿ ಶ್ರವಣವೇ ಕಲಿಕೆಯ ಪ್ರಮುಖ ಮಾಧ್ಯಮ. ಇವು ತಲೆಮಾರಿನಿಂವ ತಲೆಮಾರಿಗೆ ಹಾಯ್ದು ಬರುತ್ತವೆ. ಜನಪದ ಹಾಡುಗನಿಗೆ ಇವುಗಳ ವಿನ್ಯಾಸ ಮತ್ತು ರಚನೆಗೆ ಸಂಬಂಧಿಸಿದಂತೆ, ಪ್ರಜ್ಞಾಪೂರ್ವಕವಾದ ಅರಿವು ಇರುವುದಿಲ್ಲ. ಈ ಹಾಡುಗಳ ಕಲಾತ್ಮಕತೆಗೆ ಅಥವಾ ವಿಶ್ಲೇಷಣೆ ಸಂಬಂಧಿಸಿದ ಯಾವುದೊಂದು ಸಿದ್ಧಾಂತವೂ ಅವನ ತಲೆಯಲ್ಲಿರುವುದಿಲ್ಲ. ತಾಂತ್ರಿಕವಾಗಿ ಅತ್ಯಂತ ಸುಸಂಬಂಧ್ಧವಾದ ನಮ್ಮ ಸಂಗೀತಾಭ್ಯಾಸದ ಮುಖ್ಯ ಲಕ್ಷಣಗಳಾದ ಸತತ ಅಭ್ಯಾಸ ಮತ್ತು ಪೂರ್ವ ಪ್ರದರ್ಶನಗಳು ಪೂರ್ವ ಸಿದ್ಧತೆಗಳು ಇಲ್ಲವೇ ಇಲ್ಲ.

ಕನ್ನಡ ಭಾಷೆಗೆ ಸಾವಿರಾರೂ ವರ್ಷಗಳ ಇತಿಹಾಸ ಹೊಂದಿದೆ. ಈ ಭಾಷೆಯಲ್ಲಿನ ಜನಪದ ಸಾಹಿತ್ಯವು ವೈವಿಧ್ಯದಲ್ಲಿ, ನಿರೂಪಣೆಯಲ್ಲಿ ವಸ್ತು ವಿನ್ಯಾಸದಲ್ಲಿ ಸಮೃದ್ಧವಾಗಿದೆ. ಕನ್ನಡ ಮಾತನ್ನಾಡುವ ತೀರ ಹಿಂದುಳಿದ ಬುಡಕಟ್ಟು ಜನಾಂಗದಿಂದ ಅತಿ ಮುಂದುವರಿದ ಪಂಗಡಗಳವರೆಗೂ ಸಮಾಜದ ಎಲ್ಲಾ ವರ್ಗಗಳಲ್ಲೂ ಜನಪದ ಹಾಡುಗಳಿವೆ., ಜನಪದ ಹಾಡುಗಳು ಹಾಡುವಾಗ ಮತ್ತು ಕೇಳುವಾಗ ಕರಳನ್ನು ಕಲಕಿ ಮನಸ್ಸು ಮಿಡಿಯುತ್ತದೆ. ಅಂತರಂಗದ ಕದ ತಟ್ಟಿ ಮಾರ್ದನಿಗೊಡುತ್ತದೆ. ಈ ಹಾಡುಗಳ ಕಥಾವಸ್ತು ನಮ್ಮ ಹಳ್ಳಿಗಾಡಿನ ಗಂಡು ಹೆಣ್ಣುಗಳೆರಡರ ಜೀವನ ಸಾರವನ್ನೇ ಹೊರ ಹೊಮ್ಮಿಸುತ್ತಿರುವ ಈ ಜಾನಪದ ಹಾಡುಗಳು ಅವರನ್ನು ತಣಿಸಿ ಹುರಿದುಂಬಿಸುತ್ತವೆ.

ಇಡಿಯಾಗಿ ಜಾನಪದ ಹಾಡುಗಳ ಹಿಂದೆ ಮನರಂಜನೆ ಜೊತೆಗೆ ನೀತಿಯ ಮಾರ್ಗವನ್ನು ಕಲ್ಪಿಸಿಕೊಡುತ್ತವೆ. ಬೀದರ ತಾಲ್ಲೂಕಿನಲ್ಲಿ ಅಪಾರವಾದ ಹಾಗೂ ವೈವಿಧ್ಯಮಯವಾದ ಸುಂದರವಾದ ಜಾನಪದ ಹಾಡುಗಳಿವೆ. ಯಾವ ಆಡಂಬರತೆಯಿಲ್ಲದೆ ಸರಳತೆಯಿಂದ ವಿಜೃಂಭಿಸುತ್ತಿರುವ ಜಾನಪದ ಹಾಡುಗಳು ಜನತೆಯದ ಭಾವೈಕ್ಯವನ್ನು ಸಾಧಿಸುವದರಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿವೆ.

ಅಧ್ಯಯನದ ಉದ್ದೇಶ :

ಜನಪದ ಸಾಹಿತ್ಯ ಸರ್ವ ಸಾಹಿತ್ಯಕ್ಕೆ ತಾಯಿಬೇರು, ಈ ಸಾಹಿತ್ಯದಲ್ಲಿ ಅನೇಕ ಪ್ರಕಾರಗಳಿವೆ. ಹಲವು ರೂಪಗಳಿವೆ. ಅವುಗಳಲ್ಲಿ ಒಂದು ಪ್ರಕಾರ ಜನಪದ ಹಾಡು. ಇಂದು ಹಾಡುಗಳ ಅಧ್ಯಯನದ ಅವಶ್ಯಕತೆವೇನಿದೆ? ಎಂಬ ಪ್ರಶ್ನೆಗೆ ಉತ್ತರಿಸಲು ಕಷ್ಟವಾದರೂ ಹೀಗೆ ಹೇಳಬಹುದು. ಇಂದಿನ ಪ್ರಗತಿಪರ ಸಮಾಜದಲ್ಲಿ ಆಧುನಿಕ ಮನರಂಜನೆಯ ಸಾಧನೆಗಳಾದ ರೇಡಿಯೋ, ದೂರದರ್ಶನ, ದೂರದರ್ಶನದ ವಾಹಿನಿಗಳು, ಚಲನಚಿತ್ರ ವರ್ತಮಾನ ಪತ್ರಿಕೆಗಳು

ವಿಶೇಷವಾಗಿ ಪಾಶ್ಚಾತ್ಯ ಸಂಸ್ಕೃತಿ ಮುಂತಾದ ಪ್ರಭಾವಗಳಿಂದಾಗಿ ಜಾನಪದ ಸಾಹಿತ್ಯ, ಸಂಗೀತ ಹಾಡುಗಳಿಗೆ ತಾತ್ಸಾರ, ತಿರಸ್ಕಾರ, ಭಾವನೆ ತಳೆದಿರುತ್ತಾರೆ. ಸಂಖ್ಯೆಯೇ ಹೆಚ್ಚಾಗಿದೆ. ಇದರಿಂದ ಜನಪದ ಸಾಹಿತ್ಯ ಹಳಸುಹೋಗುತ್ತಿದೆ ನಮ್ಮಿಂದ ಮಾಯಾವಾಗುತ್ತಿದೆ. ಮಾಯವಾಗುತ್ತಿರುವ ಜಾನಪದ ಸಾಹಿತ್ಯ ಸಂಸ್ಕೃತಿ ಕಥೆ, ಹಾಡುಗಳು, ಗಾದೆಗಳು, ಬಯಲಾಟ, ಒಗಟುಗಳು, ಒಡಮಗಳು, ಮುಂದಿನ ಪೀಳಿಗೆಗೆ ತಿಳಿಯಬೇಕಾದರೆ, ನಮ್ಮ ಮೂಲ ಸಂಸ್ಕೃತಿ ಸಾಹಿತ್ಯ ಬೆಳೆಸಬೇಕಾದರೆ, ಹಿಂದಿನ ಸಮಾಜದ ಸ್ಥಿತಿ–ಗತಿ ಮುಂತಾದ ವಿಷಯಗಳ ಅರಿವು ಉಂಟಾಗಬೇಕಾದರೆ ಜಾನಪದ ಸಾಹಿತ್ಯದ ಕ್ರಮಬದ್ಧವಾದ ಅಧ್ಯಯನ ಇಂದು ಅವಶ್ಯಕವೂ ಹೌದು ಪ್ರಸ್ತುತವು ಹೌದು.

ಜಾನಪದ ವಿದ್ವಾಂಸನಾದ ಡಬ್ಲ್ಯೂ.ಜೆ. ಥಾಮ್ಸನು ಜಾನಪದ ಅಧ್ಯಯನದ ಅವಶ್ಯಕತೆಯನ್ನು ಕುರಿತ "ಫೋಕಲೋರ" (Folklore) ಎಂಬ ಶಬ್ದ ಸೃಷ್ಟಿಸಿ, ಪ್ರಸಾರ ಮಾಡಿದ ಅಂದಿನಿಂದ ಇಂದಿನವರೆಗೆ ಜಾನಪದೀಯ ವಿಷಯಗಳಲ್ಲಿ ಆಸಕ್ತರಾಗಿರುವ ವಿದ್ವಾಂಸರೆಲ್ಲರೂ ಜಾನಪದ ಸಾಹಿತ್ಯದ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ. ಜಾನಪದದ ಬಗ್ಗೆ ಮೂಗು ಮುರಿಯುವರಿಗೆ ಅದರ ಮಹತ್ವವನ್ನು ತಿಳಿಸಿದ್ದಾರೆ ಹೊರದೇಶದ ನಾಲ್ವರು ಜಾನಪದ ಪಂಡಿತರು ಜಾನಪದ ಅಧ್ಯಯನದ ಗುರಿ ಮತ್ತು ಮಹತ್ವ ಪ್ರತಿಪಾದಿಸಿ ಜಾನಪದ ವಿಜ್ಞಾನ ಮಾನವ ಜನಾಂಗದಲ್ಲಿ ಬಹುಸಂಖ್ಯಾಕರಾದ ಜಾನಪದ–ಜನಸಾಮಾನ್ಯರ ಸಂಸ್ಕೃತಿಕ, ಐತಿಹಾಸಿಕ, ಸಾಹಿತ್ಯಿಕ ಮುಂತಾದ ಮೌಲ್ಯಗಳನ್ನು ತೆರೆದು ತೋರಿಸುವಲ್ಲಿ ತೋರಿಸುವದರಲ್ಲಿ ಯಶಸ್ವಿಯಾಗಿದ್ದಾರೆ.

ಜಾನಪದ ಸಾಹಿತ್ಯ ಅನಾದಿಕಾಲದಿಂದಲೂ ಭೂಮಿ ತಾಯಿಗೆ ಹೊಂದಿಕೊಂಡಿರುವ ಮನುಕುಲದ ಪರಂಪರೆ ಸಂಬಂಧಿಸಿದ ಅಧ್ಯಯನವಾಗಿರುವದರಿಂದ ಮತ್ತು ಅತ್ಯಂತ ಶ್ರಮಪೂರ್ಣವಾದ ಜೀತದ ಕೆಲಸ ಕಾರ್ಯ ಮಾಡಿ ಮಣ್ಣಿನಿಂದ ಅನ್ನ ಬೆಳೆದು ನೀಡುವಂಥ ಪವಿತ್ರ ಕಾರ್ಯದಲ್ಲಿ ತೊಡಗಿರುವ ಸಾಮಾನ್ಯ ಜನತೆಗೆ ಸಂಬಂಧಿಸಿರುವದರಿಂದ ಅಧ್ಯಯನ ಅತಿ ಮುಖ್ಯವಾಗಿದೆ. ವೀರರೂ, ಶೂರರೂ, ಧೀರರೂ, ಕಲೆಗಾರರೂ ಮುಂತಾದವರ ಕುರಿತು ಚರಿತ್ರೆಗಳು ಸಾಕಷ್ಟು ಸಮೃದ್ಧವಾಗಿ ದೊರೆಯುತ್ತವೆ. ಹೊಲದಲ್ಲಿ ಸದಾ ಕೈಯಲ್ಲಿ ಗುದ್ದಲಿ, ಪೌಡಿ, ಫಿಕಾಸು ಹಿಡಿದುಕೊಂಡು ಸದಾ ದುಡಿಯುವ ಹಾಗೂ ನಮಗೆಲ್ಲಾ ಅನ್ನ ಕೊಡುವ ಅನ್ನದಾತ. ಇಂಥ ಜನರ ಸುಖ ದುಃಖ ಸಾಹಿತ್ಯ–ಸಂಸ್ಕೃತಿ, ಜೀವನದ ರೀತಿ ನೀತಿಗಳ ಕಡೆಗೆ ನಾವು ನೋಡಬೇಕಾಗಿದೆ ಏಕೆಂದರೆ ಅನ್ನ ಕೊಡುವ ವ್ಯಕ್ತಿಗೆ ದ್ರೋಹಬಗೆದಂತಾಗುವದಂತೂ ವಾಸ್ತವಿಕ ಅನ್ನವೇ ಇಲ್ಲವೆಂದರೆ, ನಾವು ಸಮಾಜದಲ್ಲಿ ಬದುಕಲು ಸಾಧ್ಯವೇ ಇಲ್ಲ. ಇಂಥ ಹತ್ತಾರು ಕಾರಣಾಂತರಗಳಿಂದ ಅಧ್ಯಯನದ ಅವಶ್ಯಕತೆ ಪ್ರಸ್ತುತವೆನಿಸುತ್ತದೆ.

ಜನಪದ ಅಧ್ಯಯನ ಬೆಳಕಿಗೆ ತರುವಂಥ ಜನತೆಯ ಸಂಸ್ಕೃತಿಯನ್ನು ನಮ್ಮ ಸಂಸ್ಕೃತಿಯೊಂದಿಗೆ ಹೋಲಿಸಿ ನೋಡಿದಾಗ ಅದು ತೀರ ಅಲ್ಪವಾಗಿ ಕ್ಷುಲಕ್ಕವಾಗಿ ಕಾಣಬಹುದು. ಆದರೆ ಆ ಸಂಸ್ಕೃತಿಗೆ ತನ್ನ ಸಮಸ್ತ ಜನತೆಯ ಜೀವನ ದರ್ಶನವನ್ನೂ ಒಳಗೊಳ್ಳುವಂಥ

ಅಪೂರ್ವ ಸತ್ವ ಅತ್ಯಂತ ವ್ಯಾಪಕ ಶಕ್ತಿ, ಇದ್ದಿತು. ಆ ಸಂಸ್ಕೃತಿ ನಮ್ಮ ಸಂಸ್ಕೃತಿಯಂತೆ ಕೆಲವೇ ಮಂದಿ ಪ್ರತಿಷ್ಠಿತ ಜನವರ್ಗದ ಸೃಷ್ಟಿಯಾಗಿರದೆ, ಸ್ವಯಂ ಸ್ಫೂರ್ತಿದಾಯದಾಗಿತ್ತು. ಆಧುನಿಕ ಸಂಸ್ಕೃತಿಯಂತೆ ಅನುಕರಣಾತ್ಮಕ, ವಿದೇಶಿಯ ಹಾಗೂ ಎಲ್ಲವೂ ಹೇರಲ್ಪಟ್ಟ ಗುಣದಿಂದ ಕೂಡಿದ್ದಾಗಿರಲಿಲ್ಲಾ.

ವಿಶ್ವವಿಖ್ಯಾತ ಜಾನಪದ ವಿದ್ವಾಂಸರಲ್ಲಿ ಒಬ್ಬರಾದ ಅಲೆಕ್ಸಾಂಡರ ಎಚ್. ಕ್ರಾಪೆ ಅವರು ಜಾನಪದ ವಿಜ್ಞಾನದ ಸ್ವರೂಪ ಮತ್ತು ಅದರ ಮಹತ್ವ ಹಾಗೂ ಜಾನಪದ ವಿಜ್ಞಾನದ ಸ್ವರೂಪ ಮತ್ತು ಅದರ ಮಹತ್ವ ಹಾಗೂ ಅದರ ಅಧ್ಯಯನದ ಅವಶ್ಯಕತೆ ಮುಂತಾದ ವಿಚಾರ ಕುರಿತು ಸಮರ್ಪಕವಾಗಿ ವಿಶ್ಲೇಷಣೆ ಮಾಡಿದ್ದಾರೆ. ಈ ಮಾತನ್ನು "ಸ್ಟಾಂಡರ್ಡ್ ಡಿಕ್ಸನರಿ ಆಫ್ ಫೋಕಲೋರ" ನಲ್ಲಿ ಕಾಣಬಹುದು. ಇದೇ ಬಗೆಯಲ್ಲಿ ಇನ್ನೊಬ್ಬ ತಜ್ಞ ಅಧ್ಯಯನದ ಉದ್ದೇಶ ವಿವಿಧ ಪರಂಪರೆಗಳ ತೌಲನಿಕ ವಿವೇಚನೆಯ ಮುಖಾಂತರ ಸೊಗಸಾಗಿ ಸೂಚಿಸಿದ್ದಾರೆ. ಆತನ ಪ್ರಸಿದ್ಧ ಗ್ರಂಥ (Custam and mith) ಎಂಬುದರಲ್ಲಿ ಜಾನಪದ ಅಧ್ಯಯನದ ಲಾಭವನ್ನು ವಿಸ್ತಾರವಾಗಿ ವಿವರಿಸಿರುವುದು ಗಮನಾರ್ಹವಾಗಿದೆ.

ಜನಪದ ಹಾಡುಗಳಾದ ಕುಟ್ಟುವ ಹಾಡು, ಬೀಸುವ ಹಾಡು, ಸೋಬಾನೆ ಹಾಡು, ಭೂಲಾಯಿ ಹಾಡು, ಹಂತಿ ಹಾಡು, ಭೂತೇರ ಹಾಡು, ಲಾವಣಿಗಳು ಮುಂತಾದ ಸಾಹಿತ್ಯಂಶಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಹಿಂದಿನ ಸಾಹಿತ್ಯ ಸಂಸ್ಕೃತಿ ನಶಿಸಿಹೋಗದಂತೆ ಮಾಡಬೇಕಾದರೆ, ಮುಂದಿನ ಪೀಳಿಗೆಗೆ ತಿಳಿಸಬೇಕಾದರೆ ಜನಪದ ಸಾಹಿತ್ಯದ ಅಧ್ಯಯನ ತುಂಬಾ ಅವಶ್ಯಕ ಮತ್ತು ಅಗತ್ಯ.ವಾಗಿದೆ.

ಉಗಮ – ವಿಕಾಸ :

ಜಾನಪದ ಹಾಡುಗಳ ಹುಟ್ಟು–ಬೆಳವಣಿಗೆಯನ್ನು ಕುರಿತು ನಿರ್ದಿಷ್ಟವಾಗಿ ಹೇಳುವುದು ಕಷ್ಟಸಾಧ್ಯ. ಹಾಡುಗಳು ಪರಂಪರಾನುಗತವಾದ ಸಂಸ್ಕೃತಿಯ ಸಾಗದಂತಿವೆ. ಇವುಗಳ ನೈಜ ಸೌಂದರ್ಯವನ್ನು ಸ್ಪಷ್ಟವಾಗಿ ಅರಿಯಲು ಶಕ್ತರಾದ ವ್ಯಾಖ್ಯಾನಕಾರರು ಬೇಕಾಗುತ್ತಾರೆ. ಸಾಮಾನ್ಯವಾಗಿ ಈ ಜನಪದ ಹಾಡುಗಳ ಉಗಮ ವಿಕಾಸ ಕುರಿತಾಗಲಿ ಇವುಗಳ ಕರ್ತೃಗಳನ್ನಾಗಲಿ ಗೊತ್ತುಪಡಿಸುವುದು ಅಸಾಧ್ಯವೆಂದು ಹೇಳಬಹುದು.

ವಿದ್ವಾಂಸರ ಅಭಿಮತದಂತೆ ಮಾತಿಗಿಂತ ಮೊದಲು ಹಾಡೇ ಹುಟ್ಟಿಕೊಂಡಿದೆ ಎಂಬುದನ್ನು ನಾವು ಒಪ್ಪಲೆಬೇಕಾಗಿದೆ. ಏಕೆಂದರೆ ಅನೇಕಬಗೆ ಆಧಾರಗಳಿವೆ. ಮನುಷ್ಯನ ಭಾವನಗಳು ಅಥವಾ ಯೋಜನೆಗಳು ತೀವ್ರಗೊಂಡು ತುಂಬಿಬಂದಾಗ ಈ ಭಾವನೆಗಳಿಗೆ ಹಾಡುಗಳ ಮೂಲಕ ರೂಪಕೊಡುವ ಪ್ರವೃತ್ತಿ ಸಾಮಾನ್ಯವಾಗಿ ಎಲ್ಲರಲ್ಲೂ ಸಾಮಾನ್ಯವಾಗಿ ಕಂಡುಬರುತ್ತದೆ. ಪ್ರಾಚೀನ ಸಮಾಜದಲ್ಲಿ ಯಾವುದೇ ಬಗೆಯ ಮನರಂಜನೆವಿರಲಿಲ್ಲ. ದಿನನಿತಕ್ಯ

ಕೆಲಸ ಮಾಡಿ ದುಡಿದು ರಾತ್ರಿ ಹೊತ್ತು ತಮ್ಮ ದಣಿವನ್ನು ಬೇಸರವನ್ನು ಕಳೆಯಲು ಹಾಡಿನ ಮೊರೆಹೋಗುವ ಸಂಪ್ರದಾಯವಿತ್ತು.

ಈ ಹಾಡುಗಳು ಕಿವಿಯಿಂದ-ಕಿವಿಗೆ ಬಾಯಿಂದ ಬಾಯಿಗೆ ಊರಿಂದ ಊರಿಗೆ ಪ್ರಸಾರವಾಗಿ ವ್ಯಾಪಿಸಿರಬೇಕು. ಸಭೆ ಸಮಾರಂಭಕ್ಕೆ ಹತ್ತಾರು ಜನ ಸೇರಿ ಅಲ್ಲಿ ಯಾರೋ ಒಬ್ಬರು ಹಾಡಿದ ಹಾಡನ್ನು ಕೇಳಿ ತಮ್ಮ ಊರಲ್ಲಿ ಹಾಡುವುದು ಆಯಾ ದೇಶ ಸಮಾಜ-ಸಂಸ್ಕೃತಿ, ಸಮಯ ಸಂದರ್ಭಕ್ಕೆ ತಕ್ಕಂತೆ ಹಾಡುಗಳನ್ನು ಹಾಡಿರಬೇಕು. ಹೀಗೆ ಕಾಲಾನೂಗಟ್ಟಲೇ ಬೆಳೆದು ಬಂದು ಬೇರೆ-ಬೇರೆ ರೂಪಗಳನ್ನು ಪಡೆದುಕೊಂಡಿರಬೇಕು. ಆಯಾ ಸಮಯದಲ್ಲಿ ಹಾಡುವ ಹಾಡುಗಳಿಗೆ ಆಯಾ ಸಮಯ ಸಂಪ್ರದಾಯದೆ ಹೆಸರು ಕೊಟ್ಟಿರಬೇಕು. ಉದಾ: ಮದುವೆ ಸಂದರ್ಭದಲ್ಲಿ ಹಾಡಿದ ಹಾಡುಗಳಿಗೆಗೆ ಮದುವೆ ಹಾಡುಗಳು, ಸೋಬಾನೆ ಸಮಯದಲ್ಲಿ ಹಾಡುವ ಹಾಡುಗಳಿಗೆ ಸೋಬಾನೆ ಹಾಡುಗಳು ಕೆಲಸದ ಸಮಯದಲ್ಲಿ ಹಾಡುವ ಹಾಡುಗಳಿಗೆ ಕೆಲಸದ ಹಾಡುಗಳು ಡೊಳ್ಳು ವಾದ್ಯಗಳೊಂದಿಗೆ ಹಾಡುವ ಹಾಡುಗಳಿಗೆ ಡೊಳ್ಳಿನ ಹಾಡುಗಳು ಹೀಗೆ ವಿವಿಧ ಹೆಸರುಗಳನ್ನು ಪಡೆದುಕೊಂಡು ಅಂದಿನಿಂದ ಇಂದಿನವರೆಗೆ ಆಯಾದೇಶ ಸಮಾಜ ಸಂಸ್ಕೃತಿಯಲ್ಲಿ ಜಾನಪದ ಹಾಡುಗಳು ಹಾಸುಹೊಕ್ಕಾಗಿ ನಿಂತುಕೊಂಡಿವೆ. ಈ ಹಾಡುಗಳು ಜನಪದರಿಗಲ್ಲದೆ ಶಿಷ್ಟರ ಬಾಳಿಗೂ ನಂದಾದೀಪವಾಗಿ ಬೆಳಕನ್ನು ನೀಡುತ್ತಿವೆ.

ಜಾನಪದ ಹಾಡುಗಳ ಉಗಮದ ಬಗ್ಗೆ ಹೇಳುವದಂತೂ ಆಗಲಾರದ ಮಾತೇ ಸರಿ. ಮಾನವ ತಿಳುವಳಿಕೆ ಎಂದು ಬಂತೊ ಸಿಡಿಲು, ಮಳೆಯ ಧ್ವನಿ ಮುಂತಾದ ಶಬ್ದಗಳಿಗೆ ಎಂದು ಬೆರಗಾದನೋ ಅವನ ಮನಸ್ಸಿಗೆ ಎಂದು ಬೇಸರ ಬಂತೋ, ಅಂದೇ ಅವನ ಧ್ವನಿ ಹೊರಡಿರಬೇಕು. ಹೀಗೆ ಹಲವಾರು ಶತಮಾನಗಳು ಕಳೆದ ನಂತರ ಸಮಾಜ ಬದಲಾವಣೆ ಆದಂತೆ, ಬುದ್ಧಿ ಬೆಳವಣಿಗೆ ಹೆಚ್ಚಾದಂತೆ, ಮಾನವ ನಿರ್ದಿಷ್ಟವಾಗಿ ಕ್ರಮಬದ್ಧವಾಗಿ ಹಾಡಲು ಕಲಿತಿರಬೇಕು. ಆ ಕ್ರಮಬದ್ಧತೆ ಧ್ವನಿಯೇ, ಮುಂದೆ ಹಾಡುಗಳು ಎಂದು ಕರೆಸಿಕೊಳ್ಳಲಿಕ್ಕೆ ಕಾರಣವಾಗಿರಬೇಕೆಂದು ಅನಿಸುತ್ತದೆ.

ಸ್ವರೂಪ-ಲಕ್ಷಣ :

ಜಾನಪದ ಹಾಡುಗಳೆಂದರೇನು? ಎನ್ನುವ ಪ್ರಶ್ನೆಗೆ ಸಮಂಜಸವಾದ ವ್ಯಾಖ್ಯೆಯನ್ನು ಕನ್ನಡ ಜಾನಪದ ವಿದ್ವಾಂಸರು ಕೊಡುವ ಗೋಜಿಗೆ ಹೋಗಿಲ್ಲವೆಂಬಂತೆ ಕಂಡುಬರುತ್ತದೆ. ಜನ ಸಾಮಾನ್ಯರು ಹಾಡುವ ಹಾಡುಗಳೇ ಜನಪದ ಹಾಡುಗಳು ಎಂಬುದೂ ಎಲ್ಲರಿಗೂ ಹೊಳೆಯುವಂತದ್ದು. ಹೆಂಗಸರ ಹಾಡುಗಳಲ್ಲಿ ಮುಖ್ಯವಾಗಿ ಕುಟ್ಟುವ ಪದಗಳು, ಬೀಸುವ ಕಲ್ಲಿನ ಪದಗಳು, ಸೋಬಾನೆಯ ಪದಗಳು, ಜೋಗುಳ ಪದಗಳು ಮುಂತಾದವುಗಳು, ಇನ್ನು ಗಂಡಸರ ಹಾಡುಗಳಲ್ಲಿ ಮುಖ್ಯವಾಗಿ ಹಂತಿ ಹಾಡುಗಳು, ಬಿತ್ತನೆಯ ಹಾಡುಗಳು, ಸುಗ್ಗಿಯ

ಹಾಡುಗಳು, ಭಜನೆಯ ಹಾಡುಗಳು, ಕೋಲಾಟದ ಹಾಡುಗಳು, ಜಾತ್ರೆಯ ಹಾಡುಗಳು ಲಾವಣಿ ಹಾಡುಗಳು ಮೊದಲಾದ ಪ್ರಕಾರಗಳಿವೆ.

ಜಾನಪದ ಹಾಡುಗಳ ಯಾವ ಚರಣವನ್ನು ಹಿಡಿದು ನೋಡಿದರೂ ಹಾಡಿಕೊಂಡು ಅನುಭವಿಸಿದರೂ ಒಂದು ಮಾತು ದೈಗ್ಗೋಚರವಾಗುವದು. ಒಂದು ಬಿಡಿ ಪದ್ಯದಲ್ಲಿ ಕೂಡ ಒಂದು ಪರ್ಯಾಯ ಕವನದಲ್ಲಿ ಕೂಡ ನೆಲ-ವನದ ತುಂಬ ಬಾಳು ಹೃದ್ಯಮಯವಾಗುವುದು. ಒಡಕುತನ, ಹರಕುತನ, ಹೊಲೆಹಾದರ, ಕೊಲೆಗಡುಕತನ, ಕೊಲೆ, ಸುಲಿಗೆ, ಸುಳ್ಳು, ಚಾಡಿ ಮೊದಲಾದ ಹೇಯ ಅಂಶಗಳ ಕುರಿತು ಇಲ್ಲೊಂದು-ಅಲ್ಲೊಂದು ಲೋಕಾನುಭವದ ಮಾತುಗಳು ನುಣುಚಿ ಬರುವವು.

ಈ ಹಾಡುಗಳನ್ನು ಒಬ್ಬರು ರಚನೆ ಮಾಡಿದ ಹಾಡಾಗಿದ್ದು ಇನ್ನೊಬ್ಬರ ಬಾಯಿಗೆ ಹೋಗಿ ಹಾಡಿನಲ್ಲಿ ಅನೇಕ ಬದಲಾವಣೆಗಳು ಕಾಣತ್ತೇವೆ. ನುಡಿಯಲ್ಲಿ ಶಬ್ದಗಳು ಹೆಚ್ಚು-ಕಡಿಮೆಯಾಗುತ್ತವೆ. ಈ ಹಾಡುಗಳು ಬಾಯಿಂದ-ಬಾಯಿಗೆ ಹರಿದು, ಬಂದಾಗ ಮೂಲದ ಜನಪದ ಕವಿಯ ಅಂಕಿತ ತೆಗೆಯ ಬೇಕಾದ ಮುದ್ರಿಕೆ ಬೇರೆ ಧಾಟಿಯಲ್ಲಿ ಹಾಡಿಕೊಳ್ಳುತ್ತಾರೆ. ಕೆಲವು ವೇಳೆ ಮುಂದಿನ ನುಡಿ ನೆನಪಿಗೆ ಬಾರದಿದ್ದಾಗ ತಾವೇ ತಮ್ಮ ಒಂದೆರಡು ಸಾಲನ್ನು ಸೇರಿಸಿ ಹಾಡನ್ನು ಪೂರ್ತಿಗೊಳಿಸುತ್ತಾರೆ.

ಜನಪದ ಸಂಸ್ಕೃತಿ ಹೇಗೆ ನಾಗರಿಕತೆ ಸಂಸ್ಕೃತಿಯಿಂದ ಭಿನ್ನವಾಗಿದೆಯೋ ಜನಪದ (ಹಾಡುಗಳು) ಸಂಗೀತ ಕೂಡ ನಾಗರಿಕವಾದ ಶಿಷ್ಟಕಾವ್ಯ. ಜನಪ್ರಿಯ ಗೀತೆ ಹಾಗೂ ಶಿಷ್ಟ ಸಂಗೀತಗಳಿಗಿಂತವೂ ಭಿನ್ನವಾಗಿರುತ್ತದೆ. "ಜನಪದ ಹಾಡು ಜನಸಾಮಾನ್ಯರ ಸಮುದಾಯದ ಸಾಂಸ್ಕೃತಿಕ ಸಂಪತ್ತು" ಜನಪದ ಸಮಾಜದಲ್ಲಿ ಬದುಕುವ ಜಾನಪದ ಜೀವನಕ್ರಮ. ಆಚರಣೆಗಳು, ಸಂಪ್ರದಾಯಗಳು ಹಾಗೂ ಜಾನಪದ ಹಾಡುಗಳು ಸ್ಥಳೀಯವಾದ, ಸ್ವಜಾತೀಯವಾದ ತಮ್ಮ ಇಡೀ ಗುಂಪಿಗೆ ಸಾಮಾನ್ಯವಾಗಿ ತಿಳಿಯುವಂಥವು. ಅವು ಆ ಸಮಾಜದೊಳಗಡೆ ಸಮಸ್ತರಲ್ಲಿಯೂ ಹಂಚಿಕೆಯಾಗುವಂಥವು. ಇಂಥ ಜನಪದ ಸಮುದಾಯದ ಒಬ್ಬ ವ್ಯಕ್ತಿಯ ಸಾಂಸ್ಕೃತಿಕ ಗುಣಾದರ್ಶಗಳು ಆತನ ನೆರೆಯವರ ಗುಣದರ್ಶಗಳಿಗೆ ಅತ್ಯಂತ ಸಾಮಾನ್ಯವಾಗಿ ಅನ್ವಯಿಸುತ್ತವೆ.

ಜಾನಪದ ಹಾಡುಗಳ ಸ್ವರೂಪ ಲಕ್ಷಣ ಕುರಿತು ಹೀಗೆ ಹೇಳಬಹುದು. ಹೆಚ್ಚಾಗಿ ತ್ರಿಪದಿಯಲ್ಲಿಯೇ ಇರುತ್ತವೆ. ಒಂದೇ ಹಾಡು ನೂರೊಂದು ಧಾಟಿಯಲ್ಲಿ ಹಾಡಬಹುದು. ಭಾಷೆ ಗ್ರಾಮ್ಯ, ಅವರಾಡುವ ಉಪಭಾಷೆಯಾಗಿದ್ದು, ಪ್ರಾಸಬರಬಹುದು, ಬಿಡಬಹುದು, ನಿರ್ದಿಷ್ಟ ನಿಯಮಗಳಿಲ್ಲ. ವಸ್ತುಭಾವ ಪ್ರಪಂಚ ದಿನನಿತ್ಯದ ಜೀವನಕ್ಕೆ ಸಂಬಂಧ ಪಟ್ಟದ್ದು ಇನ್ನೊಬ್ಬರಿಂದಲೇ ಕೇಳಿಯೇ ಕಲಿಯುತ್ತಾರೆ. ಹೊಸ ಹೊಸ ವಿವರ ಸೇರಿಸುವ ಅಲಂಕರಿಸುವ ಯಾವ ಅವಕಾಶವನ್ನೂ ಬಿಡುವುದಿಲ್ಲ ಹಾಗೂ ಹಾಡುಗಳಿಗೆ ನಿರ್ದಿಷ್ಟ ಆರಂಭವಿಲ್ಲ, ಅಂತ್ಯವಿಲ್ಲ.

ಹಾಡುಗಳಲ್ಲಿ ಅಧ್ಯಾತ್ಮ ಅಷ್ಟಕ್ಕೆ ಸೀಮಿತ ಸಮಯವಿದ್ದಾಗ ಮನಸ್ಸಿಗೆ ಬೇಸರ ಬಂದಾಗ ಮಾತ್ರ ಹಾಡುಗಳು ಹಾಡುವರು.

ಜನಪದ ಹಾಡುಗಳು ಜೀವನ ಶ್ರದ್ಧೆಯಿಂದ ಹುಟ್ಟಿ ಅದು ಪೀಳಿಗೆಯ ಮನರಂಜನೆಯ ಜೊತೆಗೆ ಅವರವರ ಜೀವನ ಸುಗಮವಾಗಿ ಸಾಗಿಸಲು ಜನಪದ ಹಡುಗಳು ಪ್ರಮುಖವಾಗಿವೆ. ಒಟ್ಟಿನ ಮೇಲೆ ಜನಪದ ಹಾಡುಗಳ ಸ್ವರೂಪ-ಲಕ್ಷಣ ಹೀಗೆ ಎಂದು ಹೇಳುವುದು ಕಷ್ಟಸಾಧ್ಯವೇ ಆಗಿದೆ.

ವ್ಯಾಪ್ತಿ :

ಮಾನವನ ಬದುಕು ರಸಮಯವಾಗಿಯೂ ಒಮ್ಮೊಮ್ಮೆ ನಿರಸವಾಗಿಯೂ ಇರುತ್ತದೆ. ರಸಮಯವಾದಾಗ ಮನದ ಮಡಿಲಿನಿಂದ ಹಾಡುಗಳು ಹೊರಡುತ್ತವೆ ಅದರಂತೆಯೇ ಮಾನವನಲ್ಲಿ ತನ್ನದೇ ಆದ ಒಂದು ಬಗೆಯ ಜಾನಪದ ಹಾಡುಗಳು ಇನ್ನು ಕಾಣಬಹುದಾಗಿದೆ. ಬಡವರಿಂದ ಶ್ರೀಮಂತರವರೆಗೆ ಹಳ್ಳಿಯಿಂದ ದಿಲ್ಲಿಯವರೆಗೆ ದೇಶದಿಂದ ವಿದೇಶದವರೆಗೆ, ವಿಶಿಷ್ಟ ಬಗೆಗಳಲ್ಲಿ ಹಾಡುಗಳು ಹಾಡುವ ಸಂಪ್ರದಾಯಗಳು ಸಾಕ್ಷಿಯಾಗಿ ನಿಂತುಕೊಂಡಿದ ಸಮಜದ ಪ್ರತಿಯೊಂದು ಕುಟುಂಬದ ಸದಸ್ಯರು ಜನಪದ ಹಾಡುಗಳ ಸವಿಯನ್ನು ಅರಿತವರಾಗಿರುತ್ತಾರೆ.

ಸಮಾಜದ ಪ್ರತಿಯೊಂದು ಹಾಡುಗಳಿಗೆ ಜನಪದ ಹಾಡುಗಳೇ ಮೂಲ ತಾಯಿಬೇರಾಗಿವೆ. ಹಿಂದು, ಕ್ರಿಶ್ಚನ, ಸಿಖ್ ಮುಸ್ಲಿಂ, ಬುಡಕಟ್ಟು ಜನಾಂಗ ಆದಿವಾಸಿಗಳಲ್ಲಿಯೂ ಬೇರೆ-ಬೇರೆ ವಿಧಿ-ವಿಧಾನ ಸಮಯ ಸಂದರ್ಭಗಳಲ್ಲಿ ಜನಪದ ಹಾಡುಗಳನ್ನು ಹಾಡುವ ಪರಂಪರೆ ಬೆಳೆದುಕೊಂಡು ಬಂದಿದೆ. ವಿಶೇಷವಾಗಿ ಕನ್ನಡ ಜನಪದ ಗೀತೆಗಳು ಕಾವೇರಿಯಿಂದಲೂ ಗೋದಾವರಿವರೆಗಿನ ವಿಷಯವೆಲ್ಲವೂ ಕನ್ನಡ ಜನಪದವೆಂದು ಭಾವಿಸಿದ ಕವಿರಾಜಮಾರ್ಗಕಾರ ಕನ್ನಡ ವಿಸ್ತಾರವನ್ನು ಸಾರಿದ್ದು ನಿಜ. ಆದರೆ ಜನಪದ ಒಂದೇ ಆಗಿದ್ದರೂ ಜನಪದ ಭಾಷೆ ಸಾಹಿತ್ಯ ಬೇರೆ ಬಗೆಯದೆಂದು ಆತನ ಅಭಿಪ್ರಾಯ, ಆಕಾಲದಲ್ಲಿಯೂ ನಮ್ಮ ನಿದರ್ಶನಕ್ಕೆ ಬರುವ ಮನರಂಜನೆಯ ಮಾಧ್ಯಮವೆಂದರೆ ಜನಪದ ಹಾಡುಗಳೇ ಆಗಿವೆ.

ಎಲ್ಲಾ ಸಾಹಿತ್ಯದಲ್ಲಿ ಮಾರ್ಗ ಮತ್ತು ದೇಶಿ ಎಂಬ ಎರಡು ಭಾಷಾ ಪ್ರಕಾರಗಳನ್ನು ನಾವು ನೋಡುತ್ತೇವೆ. ಮಾರ್ಗೀವೆಂಬುದು ಪಂಡಿತರ ಸುಲಬದ್ಧವಾದ ನಾಗರಿಕಭಾಷೆ. ದೇಶಿಯೆಂಬುದು ಜನಸಾಮಾನ್ಯರ ನಿತ್ಯದ ಬಳಕೆಯಲ್ಲಿ ರೂಪಗೊಳ್ಳುತ್ತ ನಡೆದ ರೂಢ ಭಾಷೆ. ನಮ್ಮ ನಾಡಿನ ಅರಮನೆ-ಗುರುಮನೆಗಲಲ್ಲಿ ಮಾರ್ಗಿಯ ಭಾಷೆ ಪುರಸ್ಕಾರವನ್ನು ಪಡೆದು, ವಾಙ್ಮಯ ನಿರ್ಮಿತಿಗೆ ಕಾರಣವಾಯಿತು. ಜನಸಾಮಾನ್ಯರ ಜೀವನ ಸಹಜವಾದ ರೂಢಭಾಷಿ

ಜನಪದ ವಾಙ್ಮಯವನ್ನು ಸೃಷ್ಟಿಸಿತ್ತು. ಒಂದೇ ಮಾತಿನಲ್ಲಿ ಹೇಳಬೇಕಾದರೆ ಸಾಮಾನ್ಯ ಜನತೆಯ ಭಾಷೆಯನ್ನೇ ಇಂದಿನ ಜನಪದ ಭಾಷೆಯೆಂದು ನಾವು ಹೇಳುತ್ತಿರೆವೆವು.

ಭಾಷೆ ಮತ್ತು ಹಾಡುಗಳು ಒಂದೇ ನಾಣ್ಯದ ಎರಡು ಮುಖಗಳೆಂದೇ ಹೇಳಬೇಕಾಗುತ್ತದೆ. ಏಕೆಂದರೆ ಒಂದಕ್ಕೊಂಡು ಅತಿ ಸಮೀಪದ ಸಂಬಂಧ ಹೊಂದಿವೆ. ದೇ. ಜವರೇಗೌಡರ ಅಭಿಪ್ರಾಯದಲ್ಲಿ "ಬಾಲಕೃಷ್ಣ ಬಾಯಲ್ಲಿ ಸಮಸ್ತ ಬ್ರಹ್ಮಾಂಡವೇ ಅಡಗಿದಂತೆ ಜಾನಪದದಲ್ಲಿ ಎಲ್ಲವೂ ಅಡಗಿದೆ. ಎನ್ನುವರು. ಸಹಜವಾಗಿಯೂ ಜನಪದ ಸಾಹಿತ್ಯದಲ್ಲಿ ಸರ್ವ ವಿಷಯಗಳು ಒಳಗೊಂಡಿವೆ. ಅವೆಲ್ಲವನ್ನೂ ಒಡಿಸಿ ಹೇಳುವದು ಕಷ್ಟಸಾಧ್ಯದ ಕೆಲಸ. ಜನಪದ ಹಾಡುಗಳನ್ನು ಪ್ರತಿಯೊಂದು ಕುಟುಂಬ ಜನಾಂಗ, ಸಮಾಜದಲ್ಲಿ ಕೇಳಬಹುದಾಗಿದೆ. ಒಟ್ಟಿನಲ್ಲಿ ಜನಪದ ಹಾಡುಗಳು ವಿಶ್ವದ ಪ್ರತಿಯೊಂದು ಸಮಾಜದಲ್ಲಿ ಕಾಣಬಹುದಾದರೂ ಆಯಾ ಸಮಾಜ ದೇಶ ವಿದೇಶಗಳಲ್ಲಿ ತಮ್ಮದೇ ಆದ ಸ್ವರೂಪವನ್ನು ಪಡೆದುಕೊಂಡು ಜೀವಂತವಾಗಿವೆ.

ಅಧ್ಯಾಯ-೨

ಬೀದರನ ವೈಶಿಷ್ಟ್ಯ
ಸಾಮಾಜಿಕ ಜನಜೀವನ
ಬೀದರನ ಭಾಷೆಗಳು
ಜೀವನೋಪಾಯಗಳು
ಜನಪದ ಸಂಪತ್ತು

ಅಧ್ಯಾಯ-೨

ಬೀದರನ ವೈಶಿಷ್ಟ್ಯ :

ಬೀದರ ತಾಲ್ಲೂಕ ಕರ್ನಾಟಕ ರಾಜ್ಯದ ಕಿರೀಟ. ಹಲವಾರು ರಾಜವಂಶಗಳ ಆಳ್ವಿಕೆಗೆ ಒಳಪಟ್ಟಿದ್ದ ಬೀದರಿಗೆ ತನ್ನದೇ ಆದ ವಿಶಿಷ್ಟ ಇತಿಹಾಸವದೆ. ಬೀದರ ಜಿಲ್ಲೆಯಲ್ಲಿ ಐದು ತಾಲ್ಲೂಕುಗಳಿವೆ. ಅವುಗಳಲ್ಲಿ ಬೀದರ ತಾಲ್ಲೂಕು ಒಂದು. ಬೀದರ ಹೆಸರಿಗೆ ಪುರಾಣಗಳಲ್ಲಿ ಉಲ್ಲೇಖಗಳಿವೆ. ಆ ಕಾಲದ ವಿದರ್ಭ ನಗರವೇ ಇಂದಿನ ಬೀದರ (ಬಿದರೆ) ಎಂದು ಹೇಳುತ್ತಾರೆ.

ಬೀದರ ತಾಲ್ಲೂಕು ಜಿಲ್ಲೆಯನ್ನು ಅನೇಕ ರಾಜಮನೆತನಗಳು ಆಳ್ವಿಕೆ ನಡೆಸುತ್ತಿದ್ದಾರೆ. ಶಾತವಾಹನರು, ಬಾದಾಮಿಯ ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಯಕ್ಯರು, ಆಳಿದರು. ಇದರಿಂದ ಬೀದರ ತಾಲ್ಲೂಕ ಇವರೆಲ್ಲರ ಆಳ್ವಿಕೆಯ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. ೧೫ನೇ ಶತಮಾನದಲ್ಲಿ ಬಹುಮನಿ ಸುಲ್ತಾನರು ಬೀದರ ನಗರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಬೀದರಿನ ಹವಮಾನ, ಪರಿಸರ ಬಹಮನಿ ಸುಲ್ತಾನ ಅಹಮ್ಮದ ಶಹನನ್ನು ಆಕರ್ಷಿಸಿತ್ತು. ಇವನ ಕಾಲದಲ್ಲಿ ಬೀದರ ದೊಡ್ಡ ಶೈಕ್ಷಣಿಕ ಹಾಗೂ ಧಾರ್ಮಿಕ ಕೇಂದ್ರವಾಗಿ ಬೆಳಗಿತ್ತು. ಬಹಮನಿ ಸುಲ್ತಾನ ಮೂರನೆಯ ಅಹಮ್ಮದಶಹ ಇವನ ಮಂತ್ರಿ ಮಹಮ್ಮದ ಗವಾನ ಕ್ರಿ.ಶ.೧೪೭೨ರಲ್ಲಿ ಒಯಿದು ವಿಶ್ವವಿದ್ಯಲಯವನ್ನು ಕಟ್ಟಿಸಿದ. ಅವನೊಬ್ಬ ದಕ್ಷ, ಪ್ರಮಾಣಿಕ ಮಂತ್ರಿಯೂ, ಶಿಕ್ಷಣ ಪ್ರೇಮಿಯು ಆಗಿದ್ದನ್ನು ಆ ಸಮಯದಲ್ಲಿ ಬೀದರೆಯನ್ನು ಸಂದರ್ಶಿಸಿದ ವಿದೇಶಿ ಪ್ರವಾಸಿ ನಿಕಟಿನ್ ಬೀದರನ್ನು ಸೊಗಸಾದ ನಗರ ಎಂದು ವರ್ಣಿಸಿದ್ದಾರೆ.

ಅನೇಕ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿದ ಬೀದರ ಕ್ರಿ.ಶ. ೧೫೨೭ರಲ್ಲಿ ಬಹಮನಿ ರಾಜ್ಯ ಪತನಗೊಂಡು ತರುವಾಯ ಆದಿಲ್‌ಶಾಹಿ ಬರಿದಶಾಹಿ, ನಿಜಾಮರು ಪ್ರಮುಖರು ನಿಜಾಮರ ಕಾಲದಿಂದ ಬೀದರ ಹೈದ್ರಬಾದ ಸಂಸ್ಥಾನದಲ್ಲಿತ್ತು. ೧೯೫೬ರಲ್ಲಿ ಬೀದರ ಸಂಪೂರ್ಣವಾಗಿ ಕರ್ನಾಟಕ ರಾಜ್ಯದಲ್ಲಿ ವಿಲೀನಗೊಂಡಿತ್ತು. ಬೀದರ ಪುಣ್ಯಭೂಮಿ. ಹಲವು ಸಾಧು ಸಂತರು ಮಹಾಪುರುಷರ ನೆಲೆಸಿದ್ದ ಪವಿತ್ರಸ್ಥಳ. ಭಕ್ತಿ ಭಂಡಾರಿ, ಬಸವಣ್ಣನವರು ಆಧ್ಯಾತ್ಮದ ಅನುಭವ ಮಂಟಪವನ್ನು ಬಸವಕಲ್ಯಾಣ ಸ್ಥಾಪಿಸಿದರು ಬೀದರನಲ್ಲಿ ಸಿಖ್ ಧರ್ಮಗುರು ಗುರುನಾನಕರು ಯೋಗ ಶಕ್ತಿಯಿಂದ ಉದ್ಭವಿಸಿದ ನೀರಿನಝುರಿ 'ನಾನಕಝುರಾ' ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ. ಬೀದರ ಕೋಟಿಯಂತೆ ಅಲ್ಲಿಯೂ ಹಲವಾರು ಪುರಾತನ ಕಟ್ಟಡಗಳಿವೆ. ದರ್ಗಗಳು ಖಂಡೋಬ ದೇವಸ್ಥಾನವಿರುವ ಖಾನಾಪುರ ಹಿಂದೂ-ಮುಸ್ಲಿಂ ಮತ್ತು ಸಿಖ್ಖರಿಂದ ಒಡಗೂಡಿ ಒಂದು ತ್ರಿವೇಣಿ ಸಂಗಮವೆನ್ನುದರಲ್ಲಿ ಅತಿಶಯೋಕ್ತಿಯಾಗಲಾರದು. ಬೀದರನಲ್ಲಿ ಉರ್ದು ಮತ್ತು ಕನ್ನಡ ಮಿಶ್ರ ಭಾಷೆ ಸಂಸ್ಕೃತಿ ಇದೆ.

ಸಾಮಾಜಿಕ ಜನಜೀವನ :

ಬೀದರಿನ ಪರಿಸರ, ಹವಾಗುಣ, ನೀರು, ಮಣ್ಣುಗಳೆಲ್ಲವೂ ಆರೋಗ್ಯಕರವಾಗಿವೆ. ಇಲ್ಲಿನ ನೆಲದ ಬಣ್ಣ ಕೆಂಪು ಅಂದರೆ ಕೆಂಪು ಮಣ್ಣಿನಿಂದ ಕೂಡಿದೆ. ಬೀದರ ಜಿಲ್ಲೆ ಮತ್ತು ಬೀದರ ತಾಲ್ಲೂಕ ಕೆಂಪು ಮಣ್ಣಿನಿಂದ ಕೂಡಿದೆ. ಉಳಿದ ತಾಲ್ಲೂಕಗಳು ಬಿಳಿ ಮಣ್ಣು ಕರಿಮಣ್ಣಿನಿಂದ ಕೂಡಿದೆ. ಬೀದರ ತಾಲ್ಲೂಕಗಳಲ್ಲಿರುವ ಮನೆಗಳನ್ನು ಕೆಂಪುಕಲ್ಲಿನಿಂದ ಕಟ್ಟಿದ್ದು ಕಂಡುಬರುತ್ತದೆ. ಉಳಿದ ಇತರ ನಾಲ್ಕು ತಾಲ್ಲೂಕಗಳಲ್ಲಿ ಕರಿಕಲ್ಲುಗಳಿಂದ ಕಟ್ಟಿದ ಮನೆಗಳಿವೆ. ಹಿಂದುಳಿದ ವರ್ಗದವರು, ಬಡವರು ಇರುವ ಮನೆಗಳನ್ನು ಹೆಸರಿಗೆ ಮಾತ್ರ ಮನೆಗಳೆಂದು ಕರೆಯಬಹುದು. ಬೀದರ ತಾಲ್ಲೂಕಿನ ಯಾವ ಹಳ್ಳಿಯೂ ಒಂದು ಯೋಜನೆ ಶಿಸ್ತಿನಿಂದ ಕಟ್ಟಿದ ಮನೆಗಳು ಕಣ್ಣಿಗೆ ಕಾಣುವುದಿಲ್ಲ. ತಮ್ಮ ಅನುಕೂಲತೆ ಮತ್ತು ಅಗತ್ಯಗನುಗುಣವಾಗಿ ಕಟ್ಟಿಕೊಂಡಿದ್ದು ಕಂಡುಬರುತ್ತದೆ.

ವಿಶೇಷವಾಗಿ ಬೀದರ ತಾಲ್ಲೂಕಿನಲ್ಲಿ ಬಹಳಷ್ಟು ಹಳ್ಳಿಗಳು, ಗ್ರಾಮಗಳು ಅನೇಕ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ರಸ್ತೆಗಳು ವಿದ್ಯುತ್, ಕುಡಿಯುವ ನೀರು, ಶಾಲೆಗಳು ಹೀಗೆ ಅನೇಕ ಅನುಕೂಲತೆಗಳಿಲ್ಲದೆ ಬಿಕೋ ಎನ್ನುತ್ತಿವೆ. ತಾಲ್ಲೂಕದ ಜನರು ಕೃಷಿಯನ್ನೇ ಮುಖ್ಯವಾದ ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಜೋಳ, ಹೆಸರು, ಕಡಲೆ, ಕಬ್ಬು ಮುಂತಾದ ಬೆಳೆಗಳನ್ನು ಬೆಳೆಸುತ್ತಾರೆ. ಹೈನುಗಾರಿಕೆಯನ್ನು ಮಾಡುತ್ತಾರೆ. ಯುಗಾದಿ, ದೀಪಾವಳಿ, ಶ್ರಾವಣ, ದಸರಾ, ಬಸವಜಯಂತಿ ನಾಗರ ಪಂಚಮಿ, ಬುದ್ಧ ಜಯಂತಿ ಮೊದಲಾದ ಹಬ್ಬ ಹರಿದಿನಗಳು ಅತಿ ವಿಜೃಂಭಣೆಯಿಂದ ಆಚರಿಸುತ್ತಾರೆ. ಹಿಂದೂ ಧರ್ಮದಲ್ಲಿನ ಉಪಜಾತಿಗಳಾದ ವೀರಶೈವ, ಕುರಬರು ಕಬ್ಬಲಿಗರು, ಜೈನರು, ಮೊದಲಾದ ಜನರು ಪರಸ್ಪರ ಸಾಮರಸ್ಯದಿಂದ ಜೀವಿಸುತ್ತಾರೆ.

ಬೀದರ ತಾಲ್ಲೂಕಿನಲ್ಲಿ ಅನೇಕ ಬುಡಕಟ್ಟು ಜನಾಂಗಗಳು ಅಲ್ಲಲ್ಲಿ ವಾಸವಾಗಿದ್ದಾರೆ. ಇವರೆಲ್ಲರೂ ತಮ್ಮದೇ ಆದ ವಿಶಿಷ್ಟ ಸಾಮಾಜಿಕ ಜೀವನವನ್ನು ಬೆಳೆಸಿಕೊಂಡು ಬಂದಿದ್ದಾರೆ. ತಾಲ್ಲೂಕಿನ ಎಲ್ಲ ಗ್ರಾಮಗಳಲ್ಲಿ ಜಾತಿ ಪದ್ಧತಿ ಅಸ್ಪೃಶ್ಯತೆಯ ಪಿಡುಗು ಇನ್ನು ಕಡಿಮೆಯಾಗಿಲ್ಲ. ಈ ಜನರಲ್ಲಿ ಶಿಕ್ಷಣದ ಪ್ರಾಮುಖ್ಯತೆ ಕಡಿಮೆಯಾಗಿದ್ದು ಮಡಿ-ಮೈಲಿಗೆಯು ತುಂಬಾ ಮನೆಮಾಡಿಕೊಂಡಿದೆ. ದೇವರು, ಧರ್ಮದ ಬಗ್ಗೆ ಅಪಾರ ನಂಬಿಕೆ. ಹೆಣ್ಣು ದೇವತೆಗಳಾದ ಎಲ್ಲಮ್ಮ, ಲಕ್ಷ್ಮಿ, ಮೋಚಮ್ಮ ದೇವತೆಗಳಿಗೆ ಕುರಿ-ಆಡುಗಳ ಬಲಿಕೊಡುವ ಪದ್ಧತಿ ರೂಢುತಲ್ಲಿದೆ. ಕೂಲಿ ಮಾಡುವ ಹೆಂಗಸರು ಗಂಡಸರಲ್ಲಿ ಕೆಲವರು ಸಿಂದಿ ಸರಾಯಿ ಕುಡಿಯುವ ಚಟಮಾಡಿಕೊಂಡಿದ್ದಾರೆ. ಮನರಂಜನೆಗಾಗಿ ಚಲನ ಚಿತ್ರ ಮಂದಿರಗಳಿಗೆ ಹೋಗಿ ಚಿತ್ರಗಳನ್ನು ನೋಡುತ್ತಾರೆ. ಹಬ್ಬ-ಜಾತ್ರೆಗಳ ಸಂದರ್ಭದಲ್ಲಿ ದೊಡ್ಡಾಟ-ಸಣ್ಣಾಟ, ಕೋಲಾಟ, ಭುಲಾಯಿಹಾಡು, ಭಜನೆಹಾಡು, ಲಾವಣಿ ಪದಗಳು, ಗೀಗೀಪದಗಳು, ಲಂಬಾಣಿ ಕುಣಿತ,

ನಂದಿಕೋಲು ಮುಮತಾದ ಜನಪದ ಕಲೆಗಳು ಜನರ ಬೇಸರ ಕಳೆಯುವ ಕಲೆಗಳ ಮಾಧ್ಯಮಗಳಾಗಿವೆ.

ಬೀದರ ತಾಲ್ಲೂಕಿನಲ್ಲಿ ನೂರಕ್ಕಿಂತ ಹೆಚ್ಚು ಗ್ರಾಮಗಳಿವೆ. ಅರ್ಧದಷ್ಟು ಗ್ರಾಮಗಳು ತೀರ ಹಿಂದುಳಿದಿವೆ. ತಾಲ್ಲೂಕಿನ ವಿಸ್ತೀರ್ಣ ೧೨೫೩ ಚದರ ಕಿ.ಮೀಗಳು ಇದೆ. ತಾಲ್ಲೂಕಿನ ಅಂತರ್ಜಲ ಸಂಪತ್ತು ಗಣನೀಯವಾಗಿದ್ದು ತಾಲ್ಲೂಕಿನ ಸರಸಾರಿ ವಾರ್ಷಿಕ ಮಳೆ ೧೦೭.೫ ಮಿಲಿ ಮೀ ಇರುತ್ತದೆ. ಬೀದರ ತಾಲ್ಲೂಕಿನ ಆಡಳಿತ ಕೇಂದ್ರ ಬೀದರ ಪಟ್ಟಣ ಜಿಲ್ಲೆಯ ಆಗಿದೆ.

ಬೀದರನ ಭಾಷೆಗಳು :

ಬೀದರ ತಾಲ್ಲೂಕು ಜಿಲ್ಲೆಯು ಗಡಿನಾಡು. ಆಂಧ್ರ ಮತ್ತು ಮಹಾರಾಷ್ಟ್ರ ಅಕ್ಕಪಕ್ಕದ ರಾಜ್ಯಗಳು ಅಂತೆಯೇ ಈ ಜಿಲ್ಲೆಯ ಭಾಷೆಯೂ ಕೂಡ ಸಮ್ಮಿಶ್ರವಾದುದು. ಕರ್ನಾಟಕದಲ್ಲಿ ಉಳಿದ ಜಿಲ್ಲೆಗಳಿಗಿಂತ ಭಿನ್ನ ಹಾಗೂ ವೈಶಿಷ್ಟ್ಯಪೂರ್ಣ. ಜಿಲ್ಲೆಗೆ ಹೊಂದಿಕೊಂಡ ಬೀದರ ತಾಲ್ಲೂಕದಲ್ಲಿಯೂ ಈ ಭಾಷಾ ಭಿನ್ನತೆಯನ್ನು ಗಮನಿಸಬಹುದು. ಕನ್ನಡ ತಾಯ್ನುಡಿಯಗಿದ್ದರೂ ಉರ್ದು-ಹಿಂದಿ-ಮರಾಠಿ ಭಾಷೆಗಳನ್ನಾಡುವ ಜನರಿದ್ದಾರೆ. ಕೆಲವು ಕಡೆ ತೆಲಗು ಮಾತನಾಡುತ್ತಾರೆ. ವ್ಯವಹಾ್ರ ಉರ್ದು ಮತ್ತು ಮರಾಠಿಯಲ್ಲಿದ್ದರೆ ಲೆಕ್ಕ ಪತ್ರದ ಬರವಣಿಗೆ ಮೋಡಿ ಮತ್ತು ಕನ್ನಡ ಭಾಷೆಯಲ್ಲಿ ಒಂದು ಸಮಯದಲ್ಲಿ ಗಂಡುಮೆಟ್ಟಿನ ನಾಡೆಂದು ಕ್ರಾಂತಿಯ ಕಹಳೆಯನ್ನೂದಿದ ಕೇಂದ್ರವೆಂದೂ ಪ್ರಸಿದ್ಧವಾದ ಬೀದರನಲ್ಲಿ ಕನ್ನಡ ಉಳಿದಿರುವುದೇ ಪುಣ್ಯ ಎನ್ನುವ ಪರಿಸ್ಥಿಯೂ ಇದೆ.

ಭಾಷಾ ದೃಷ್ಟಿಯಿಂದ ನೋಡಿದರೆ ತಾಲ್ಲೂಕಿನಲ್ಲಾಡುವ ಭಾಷೆ ಸಮ್ಮಿಶ್ರವಾಗಿದೆ. ಅಂಗಡಿ ಮುಂಗಟ್ಟುಗಳಲ್ಲಿ ವ್ಯಾಪಾರ ಮಾಡುವಾಗ ಜನರ ನಾಲಿಗೆಯ ಮೇಲೆ ಉರ್ದು ಭಾಷೆ ನಲಿದಾಡುತ್ತದೆ. ಉರ್ದು, ಅರೆಬಿಕ ಮುಂತಾದ ಭಾಷೆಯ ಪದಗಳ ಬಳಕೆ ಜನರಲ್ಲಿ ಹೆಚ್ಚಾಗಿದೆ. ದವಾಖಾನಿ, ಜಬರದಸ್ತ ಜರಾ, ಖುಲ್ಲಾ, ಥೋಡೆ ಇತ್ಯಾದಿ ಅಚ್ಚಗನ್ನಡ, ಗ್ರಾಂಥಿಕ ಭಾಷೆ ಬಳಕೆ ಕಡಿಮೆ. ಕನ್ನಡ ಮಾತನಾಡುತ್ತಿದ್ದರೂ ಬಳಕೆಯಲ್ಲಾಗುವ ಪದಗಳು ಹೆಚ್ಚಾಗಿ ಉರ್ದು ಮತ್ತು ಮರಾಠಿ ಭಾಷೆಯ ಪದಗಳು ಸ್ವಾತಂತ್ರ್ಯ ಪೂರ್ವದ ನಿಜಾಮ ಕಾಲದ ಜನರು ಉರ್ದು ಮತ್ತು ಮರಾಠಿಯಲ್ಲಿ ಮಾತಾಡುತ್ತಾರೆ. ಬರೆಯುತ್ತಾರೆ, ಓದುತ್ತಾರೆ. ಆದರೆ ಕನ್ನಡ ಭಾಷೆ ಮಾತ್ರ ಮನೆಯಲ್ಲಿ ಬಳಸಿಕೊಳ್ಳುವರು.

ಬೀದರ ತಾಲ್ಲೂಕಿನಲ್ಲಿ ಮುಸ್ಲಿಂರು ೧0% ಉರ್ದುವಿನಲ್ಲಿ ಮಾತನಾಡುತ್ತಾರೆ. ಹಿಂದುಗಳು ೬0% ಹಿಂದಿಯಲ್ಲಿ ಭಾಷೆಯನ್ನಾಡುತ್ತಾರೆ. ತಾಲ್ಲೂಕಿನ ಜನರ ಆಡುಭಾಷೆ ಕನ್ನಡವೇ ಆಗಿದೆ.

ಆಂಧ್ರದ ಗಡಿ ಜಿಲ್ಲೆಯಾದ ಬೀದರ ಹೈದ್ರಬಾದ ನಗರಕ್ಕೆ ತುಮಬಾ ಸಮೀಪವಾಗಿರುವುದರಿಂದ ಬೀದರನ ಜನಸಂಪರ್ಕ ಅತಿ ಹೆಚ್ಚಾಗಿದೆ. ಆದ್ದರಿಮದ ತೆಲಗು ಪ್ರಭಾವ ಬೀದರ ಕನ್ನಡಿಗರ ಮೆಲೆ ನಿಧಾನವಾಗಿ ಆಗುತ್ತಿದಂತೆ ಕಂಡುಬರುತ್ತಿದೆ. ಲಿಂಗಾಯರು, ಕ್ರಿಶ್ಚನರು, ಕುರುಬರು, ಬ್ರಾಹ್ಮಣರು ಮುಂತಾದವರು ೪೦% ಕನ್ನಡ ಭಾಷೆಯನ್ನು ಬಳಸುತ್ತಾರೆ. ಉಳಿದ ೬೦% ಹಿಂದಿ ಮತ್ತು ಇತರ ಭಾಷೆಗಳಾದ ಮರಾಠಿ ಮತ್ತು ತೆಲಗು ಬಳಸುವರು.

ಜೀವನೋಪಾಯಗಳು :

ಬೀದರ ತಾಲ್ಲೂಕಿನ ಜನರ ಜೀವನ ತುಂಬಾ ಸರಳ ಮತ್ತು ಸಾಮಾನ್ಯ. ಗಂಡು ಮೆಟ್ಟಿದ ನಾಡಿನ ಈ ಜನರು ಸದೃಢಕಾಯದವರು, ಆರೋಗ್ಯವಂತರು ಆಗಿದ್ದಾರೆ. ನಂಬಿಕಸ್ಥರು, ಪ್ರಮಾಣಿಕರು, ಸರಳ ಉಡುಗೆ-ತೊಡುಗೆ, ಗಂಡಡಸರು ಧೋತರ ಉಟ್ಟು ಶರ್ಟು (ಖಮೀಜ) ಹಾಕುವರು. ಹೆಣ್ಣು ಮಕ್ಕಳು ಸೀರೆಯನ್ನುಟ್ಟು ಕೆಲಸದ ಸಮಯದಲ್ಲಿ ಹೆಚ್ಚಾಗಿ ಕಚ್ಚೆ ಹಾಕುವರು. ಸ್ತ್ರೀಯರು ಆಭರಣಗಳನ್ನು ಧರಿಸುತ್ತಾರೆ. ಮುಸ್ಲಿಂ ಮಹಿಳೆಯರು ಬುರಖಾ ಹಾಕಿಕೊಳ್ಳುತ್ತಾರೆ. ಮುಸ್ಲಿಂ ಪುರುಷರು ಪೈಜಾಮ ಮತ್ತು ಮೇಲೆ ಅಂಗಿಯನ್ನು ಹಾಕಿಕೊಲ್ಲುತ್ತಾರೆ. ಜಾತ್ರೆ, ಉತ್ಸವ, ಮದುವೆ-ಮುಂಜಿ ಮೊದಲಾದ ಸಂಭ್ರಮದ ಸಮಯದಲ್ಲಿ ಪುರುಷರು ಮತ್ತು ಸ್ತ್ರೀಯರು ಭರ್ಜರಿಯಾಗಿ ಉಡುಪು ಧರಿಸುತ್ತಾರೆ. ಹಳ್ಳಿ ಜನರೆಲ್ಲ ಎದ್ದು ಕಾಣುವ ಪ್ರಮುಖ ಅಂಶವೆಂದರೆ ಹೆಚ್ಚು ಪ್ರಮಾಣದಲ್ಲಿ ಗಂಡಸರು ಮಾತ್ರ ಚಡವ ಮೆಟ್ಟುಗಳನ್ನು ಹಾಕಿಕೊಂಡಿರುವುದು ಕಂಡುಬರುತ್ತದೆ.

ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಾ ಬಂದಿವೆ. ಎಲ್ಲ ಸಂದರ್ಭದಲ್ಲಿ ವೇಷ ಹಾಕುವದು ಮತ್ತು ಹಲಗೆ ಬಾರಿಸುವುದು ಸಾಮಾನ್ಯ. ಗಂಡಸರು ಕೋಲಾಟವನ್ನು ಆಡುತ್ತಾರೆ. ವಿವಿಧ ಬಗೆಯ ವೇಷ ಹಾಕಿ, ಬಣ್ಣ ಹಾಕಿಕೊಂಡು ಕುಣಿಯುತ್ತಾರೆ, ನಲಿದಾಡುತ್ತಾರೆ.

ತಾಲ್ಲೂಕಿನ ಜಾನಪದ ಕಲೆಗಳು ವೈವಿಧ್ಯಮಯವಾಗಿವೆ. ಭಜನೆ ಹಾಕುವದು, ಬುಲಾಯಿ ಹಾಡು, ಗೊಂದಲಿಗರ ಹಾಡು, ಗೀಗೀ ಪದ, ನಂದಿಕೋಲು, ಲಾವಣಿ ಈ ಮೊದಲಾದವುಗಳು ವಿಶೇಷ ಕಲೆಗಳಾಗಿವೆ. ಬೀದಿನಾಟಕ ಮಾಡುತ್ತಾರೆ. ನಾಟಕದ ಮೂಲಕ ಅನ್ಯಾಯಗಳ ವಿರುದ್ಧ ಪ್ರತಿಭಟಿಸುವಂತೆ ಜನರಲ್ಲಿ ಎಚ್ಚರಿಕೆಯನ್ನು ಮೂಡಿಸುತ್ತಾರೆ. ಸಮಾಜದ ದೃಷ್ಟಿಯಿಂದ ಜನಜೀವನ ಸಮೃದ್ಧವಾಗಿದೆ ಮತ್ತು ಸುಖಮಯವಾಗಿದೆ.

ತಾಲ್ಲೂಕಿನ ಜನರು ಹೆಚ್ಚಾಗಿ ಮತೀಯ ಆಧಾರದ ಮೇಲೆ ಕೆಲಸಗಳನ್ನು ನಿರ್ವಹಿಸುತ್ತಾರೆ. ಮುಸ್ಲಿಂರು ಅಂಗಡಿ, ಮಾಂಸದ ಅಂಗಡಿಗಳನ್ನು ನಡೆಸುತ್ತಾರೆ. ಲಿಂಗಾಯತರು

ವ್ಯಾಪಾರ ಮಾಡುತ್ತಾರೆ. ಬಡಿಗರು ಕಟ್ಟಿಗೆ ಕೆಲಸ, ಕುರುಬರು ಕುರಿ ಕಾಯುವುದು, ಅಗಸರು ಬಟ್ಟೆ ಒಗೆಯುವುದು ಮುಂದ ಕಸುಬು ಉಪಕಸುಬುಗಳನ್ನು ಮಾಡುತ್ತಾರೆ. ಮೇಲ್ಕಂಡವರಲ್ಲಿಯೇ ಕೆಲವರು ವ್ಯವಸಾಯ ಮಾಡಲು ಮುಂದಾಳತ್ವವನ್ನು ವಹಿಸುತ್ತಾರೆ. ಕಬ್ಬು, ಹೆಸರು ಕಡಲೆ, ಶೇಂಗಾ, ಎಳ್ಳು, ಕುಸುಬಿ, ಹೇಬ್ರಿಡಜೋಳ ಮುಂತಾದ ಬೆಳೆಗಳು ಬೆಳಸಿ ಅವುಗಳನ್ನು ಮಾರಿ ಬಂದಂತ ಹಣದಿಂದ ತಮ್ಮ ಸಂಸಾರ ನಡೆಸುತ್ತಾರೆ.

ವರ್ತಮಾನ ಸ್ಥಿತಿಯಲ್ಲಿ ಮಳೆಯ ಏರು ಪೇರಿನಿಂದಾಗಿ ಕೆಲವು ಬೆಳೆಗಳ ಪ್ರಮಾಣ ಕಡಿಮೆಯಾಗಿದೆ. ಬೆಳೆಗಳು ಅನೇಕ ರೋಗಕ್ಕೆ ತುತ್ತಾಗಿವೆ. ಒಟ್ಟಿನಲ್ಲಿ ವ್ಯವಸಾಯ, ವ್ಯಾಪಾರ, ಇನ್ನಿತರೆ ಆಧಾರಗಳ ಮೇಲೆ ತಾಲ್ಲೂಕಿನ ಜನರು ತಮ್ಮ ಸಂಸಾರ ನಡೆಸುವಲ್ಲಿ ಯಶಸ್ವಿಯಾಗಿದ್ದಾರೆ.

ಜನಪದ ಸಂಪತ್ತು :

ಜಾನಪದ ಎಂಬುದು ಜನರ ಬಾಯಿಂದ ಬಾಯಿಗೆ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿರುವ ಗ್ರಾಮೀಣ ಜನರ ಜ್ಞಾನ ಸಂಪತ್ತು. ಅಕ್ಷರ ಜ್ಞಾನವಿಲ್ಲದೆ ಹಳ್ಳಿಗಾಡಿನ ಜನರ ಈ ಸಂಪತ್ತನ್ನು ಯಾರು ಗೌರವಿಸಲಿಲ್ಲ. ಇದರ ಕ್ರಮಬದ್ಧವಾದ ಅಧ್ಯಯನ ಮಾಡಲು ಯಾರು ಮುಂದೆ ಬಂದಿಲ್ಲವೆಂಬಂತೆ ತೋರುತ್ತದೆ. ಜಾನಪದ ಸಾಹಿತ್ಯ ರೂಪಗಳಾದ ಹಾಡುಗಳು, ಲಾವಣಿಗಳು, ಒಗಟು-ಒಡಮು, ಕಥೆಗಳು ಮುಂತಾದವುಗಳ ಅಧ್ಯಯನ ಇಂದು ತುಂಬಾ ಅಗತ್ಯವಾಗಿದೆ. ಕನ್ನಡಿಗರ ಸಂಸ್ಕೃತಿಯ ಕೇಂದ್ರವೆನಿಸಿದ ಬೀದರ ಜಿಲ್ಲೆಯ ತಾಲ್ಲೂಕವಾದ ಬಸವಕಲ್ಯಾಣ ೧೨ನೇ ಶತಮಾನದಲ್ಲಿ ಕಲ್ಯಾಣ ಕ್ರಾಂತಿಯ ಕೇಂದ್ರ ಇಲ್ಲಿ ಅನೇಕ ಶರಣ-ಶರಣೆಯರು ಆಗಿ ಹೋದಂತ ನಾಡು. ಜಾನಪದ ಸಾಹಿತ್ಯದ ಪ್ರಭಾವ ವಚನಗಳ ಮೇಲೆ ತುಂಬಾ ಗಾಢವಾಗಿ ಆಗಿದೆ. ಎಂಬುದನ್ನು ಶರಣರ ವಚನಗಳಿಂದ ತಿಳಿದುಬರುತ್ತದೆ.

ಜಾನಪದ ಹಾಡುಗಳಲ್ಲಿ ಅನೇಕ ಪ್ರಕಾರಗಳಿವೆ. ಗಂಡರ ಹಾಡುಗಳು, ಹೆಂಗಸರ ಹಾಡುಗಳು, ಮಕ್ಕಳ ಹಾಡುಗಳು ಹೆಂಗಸರು ಹಾಡುವ ಹಾಡುಗಳಲ್ಲಿ ಒಂದಾದ ಸೋಬಾನೆ ಹಾಡುಗಳಲ್ಲಿ ಶರಣೀಯರ ಪ್ರಸ್ತಾಪಗಳು ಅಲ್ಲಲ್ಲಿ ಬರುತ್ತವೆ. ಇಂಥ ಹಾಡುಗಳು ಶರಣರಿಂದಲೇ ಅಥವಾ ಅವರಗಿಂತಲೂ ಪೂರ್ವದಲ್ಲಿಯೇ ಬೆಳಕಿಗೆ ಬಂದಿರಬೇಕೆಂದು ತೋರುತ್ತದೆ. ಕೂಡ ಮಾಡಬಹುದು. ೧೨ನೇ ಶತಮಾನದ ಶರಣರ ಮೇಲೆ ಅನೇಕ ಸುದೀರ್ಘವಾದ ಜನಪದ ಕಾವ್ಯಗಳು ಲಭ್ಯವಾಗುತ್ತವೆ. ತತ್ವಪದಗಳ ನೆಲೆಬೀಡಾದ ಬೀದರ ಎಂದು ಈಗಾಗಲೇ ಸಾಬೀತಾಗಿದೆ. ಅಲ್ಲಮ ಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣಾ, ಬಸವಣ್ಣಾ, ಅಂಬಿಗರ ಚೌಡಯ್ಯ ಮುಂತಾದವರ ಕುರಿತು ಜನಪದ ಹಾಡುಗಳನ್ನು ಶಿಷ್ಟರೂ, ಜನಸಾಮಾನ್ಯರೂ ಹಾಡುತ್ತಾರೆ.

ಜನಪದ ಕಾವ್ಯಗಳು ಕೇವಲ ಶರಣರಿಗೆ ಮಾತ್ರ ಸೀಮಿತವಾಗಿಲ್ಲ. ಕಲ್ಯಾಣದ ಪತನದ ನಂತರ ಬೀದರನ್ನು ಬಹಮನಿ ಸುಲ್ತಾನರು, ಹೈದ್ರಬಾದಿನ ನಿಜಾಮರು ಈ ಪ್ರದೇಶವನ್ನು ಅನೇಕ ವರ್ಷಗಳ ಕಾಲ ಆಳಿದರು. ಈ ಕಾರಣದಿಂದಾಗಿಯೇ ಇಲ್ಲಿ ಅನ್ಯ ಭಾಷೆಗಳ, ಸಂಸ್ಕೃತಿಗಳ ದಾಳಿಯನ್ನು ಎದುರಿಸಬೇಕಾದ ಅನಿವಾರ್ಯತೆ ಬಂದಿತು. ಹೀಗೆ ಹತ್ತಾರು ಕಾರಣಗಳಿಂದ ಬೀದರ ತಾಲ್ಲೂಕಿನ ಅಧ್ಯಯನ ಅವಶ್ಯವಾಗಿದೆ. ಭೂತೇರು ಎಂಬ ವೃತ್ತಿಕಾಯಕ ಸಂಪ್ರದಾಯವೊಂದು ತಾಲ್ಲೂಕಿನ ಜಾನಪದ ಸಾಹಿತ್ಯದ ಮೈಲುಗಲ್ಲಾಗಿದೆ. ಎಲ್ಲಮ್ಮನ ಕುರಿತು ಜನಪದ ಕಾವ್ಯವೂ ಪರಶುರಾಮ ಎಂಬ ಪುರಾಣ ಮೂಲದ ಹೆಸರೊಂದನ್ನು ಬಿಟ್ಟರೆ ಮಿಕ್ಕ ಅಂಶಗಳಲ್ಲಿ ವಿಶಿಷ್ಟ ಜನಪದ ಕಥೆಯಾಗಿಯೇ ಇದೆ.

ಜಾನಪದ ಸಾಹಿತ್ಯದಲ್ಲಿ ಅನೇಕ ಪ್ರಕಾರ ಬೇಧಗಳಿವೆ. ಅವುಗಳಲ್ಲಿ ಲಾವಣಿ ಸಾಹಿತ್ಯ ಕೂಡ ಒಂದು. ಇಲ್ಲಿನ ಲವಣಿ ಹಾಡುಗಳಲ್ಲಿ ಹಿಂದೂ–ಮುಸ್ಲಿಂರ ನಡುವಿನ ಸುಮಧುರ ಸಾಮರಸ್ಯವನ್ನು ಕಾಣಬಹುದು. ಹಾಡಿನ ಕಥಾವಸ್ತು ಎಲ್ಲ ಧರ್ಮವರು, ಆದರಿಸಬಹುದಾದ ಲೌಕಿಕ ಗುಣವನ್ನುಳ್ಳ ರಚನೆಗಳು, ರಾಮ–ಸೀತೆಯರ ವನವಾಸ, ಅಹಲ್ಯೆಯ ಪ್ರಸಂಗ, ಕೌರವ–ಪಾಂಡವರ ಜಗಳ ಮುಂತಾದ ಪೌರಾಣಿಕ ಕಥಾವಸ್ತುವನ್ನೊಳಗೊಂಡ ಲಾವಣಿಗಳು ಇಲ್ಲಿ ಕಂಡು ಬರುವುದು ಗಮನಾರ್ಹ.

"ಶರಣು ಶರಣು ಸರ್ವರಿಗೂ ಶರಣು ಇರಲಿತುಸಾ"

'ಸಭಿಕರ ಮುಂದ ಸಣ್ಣ ಕೂಸ ಸಾರಿ ನಾನು ಹೇಳತ್ತೀನಿ ಸವಿಸ್ತಾರ'

" ಧರಿ ಬೀದರ ದೊಳಗ ರಾಮವ್ವ ಪತಿವ್ರತೆ

ಗಂಡು ಹೆಣ್ಣು ಕುರಿತ ಲಾವಣಿ ಹಾಡಿನಲ್ಲಿ ಹೊಸ ತಿರುಳನ್ನು ಪಡೆದುಕೊಂಡಿದೆ. ನಮ್ಮಲ್ಲಿ ಇಂಥ ಲಾವಣಿಗೆ ಮತ್ತು ಜನಪದ ಲಾವಣಿಕಾರರಿಗೆ ಕೊರತೆ ಎಂಬುದಿಲ್ಲ. ಅನೇಕಾನೇಕ ಲಾವಣಿಕಾರರೂ ಬೀದರ ತಾಲ್ಲೂಕಿನಲ್ಲಿ ಕಾಣಬಹುದಾಗಿದೆ.

ಬೀದರ ತಾಲ್ಲೂಕಿನ ಪ್ರಮುಖ ಜಾನಪದ ಲಾವಣಿಕಾರ ಕವಿಗಳಾದ ಶ್ರೀ ಲಾಡಿ ಮದನಸಾ(೧೮೧೦–೧೮೯೦), ಭದ್ರಪ್ಪಗೌಡ ಕೋಹಿನೂರ(೧೮೭೦–೪೭), ನನ್ನ ಸಾಹೇಬ (೧೮೭೪) ಬಸವಣಪ್ಪ ಹರಕುಡ (೧೯೧೪–೧೯೭೪) ಸಿದ್ಧಪ್ರಭ ಧುಮ್ಮನಸೂರ (೧೮೮೭–೭೭) ಮುಂತಾದವರು ಜಾನಪದ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಭುಲಾಯಿ ಪದಗಳಂತು ಪ್ರತಿವರ್ಷ ಹೆಣ್ಣು ಮಕ್ಕಳು ನಾಗರ ಪಂಚಮಿ ಸಮಯದಲ್ಲಿ ಹಾಡುವ ಸಂಪ್ರದಾಯ. ಬೀದರ ತಾಲ್ಲೂಕಿನ ಜನಪದ ಮಹಿಳೆಯರು ಭುಲಾಯಿ ಹಾಡುಗಳ ಗಣಿಗಳಾಗಿದ್ದಾರೆ. ಕೋಲಾಟ ತಾಲ್ಲೂಕಿನ ಜನಪದ ರಂಜನೆಯ ಸಾಧನವಷ್ಟೇ ಅಲ್ಲ. ಧಾರ್ಮಿಕ ಸಂಪ್ರದಾಯವೂ ಹೌದು. ಜೊತೆಗೆ ಸ್ವಂತಿಕೆಯನ್ನು ತೋರುವ ಇತರ ಸರಕುಗಳ ಮೇಲೆ ಶರಣರ ಸಾಹಿತ್ಯದ ಅಚ್ಚಿದೆ. ತತ್ವಪದ, ಕಾಲಜ್ಞಾನ, ಕುಟ್ಟುವ ಪದ ಮುಂತಾದ ಕಲೆಗಳು ಭಾಲ್ಕಿ ತಾಲ್ಲೂಕಿನ ಧನ್ನೂರ,

ಭಾತಂಬ್ರಾ, ಔರಾದ ತಾಲ್ಲೂಕಿನ ಕುಸನೂರು, ಮುಧೋಳ, ವಡಗಾಂವ, ಬೀದರ ತಾಲ್ಲೂಕಿನ ಬೆನಕನಳ್ಳಿ ಗ್ರಾಮದಲ್ಲಿ ಕಂಡುಬರುತ್ತವೆ. ಕಲೆಯನ್ನೆ ಮುಖ್ಯ ವೃತಿಯನ್ನಾಗಿಸಿಕೊಂಡ ಈ ಕಲಾವಿದರೂ ಈಗ ಇದನ್ನು ಉಪಕಸುಬನ್ನಾಗಿಸಿ ಕೊಂಡಿದ್ದಾರೆ. ಆದರೂ ಗೊಂದಲಿ ಹಾಕುವ; ಸಂಪ್ರದಾಯ ಇನ್ನೂ ಉಳಿದುಕೊಂಡಿದೆ.

ಜನಪದ ಹಾಡುಗಳಲ್ಲಿ ಗಂಡಸರ ಹಾಡುಗಳು ಇವೆ. ಅವುಗಳೆಂದರೆ ಹಂತಿಯ ಹಾಡುಗಳು, ಸುಗ್ಗಿಯ ಸಂದರ್ಭದಲ್ಲಿ ತಪ್ಪದೇ ಈ ಹಾಡುಗಳು ಹಾಡುವ ಪರಂಪರೆ ಇದೆ. ಜಾನಪದ ಸಾಹಿತ್ಯದ ಬೆಳೆ ಕಣ್ಮರೆಯಾಗುತ್ತಿದರೂ ತಾಲ್ಲೂಕಿನಲ್ಲಿ ಜೋಗುಳ ಪದಗಳು, ಮದುವೆಯ ಪದಗಳು, ಕುಟ್ಟುವ, ಬೀಸುವ, ಸೋಬಾನೆ, ಜೋಕುಮಾರ ಪದಗಳು, ಮುಗಡಿ ಹಾಕುವುದು, ಹಚ್ಚೆಯ ಮೊದಲಾದ ಹಾಡುಗಳು ಗರತಿಯರ ಬಾಯಲ್ಲಿ ಇನ್ನು ಇವೆ. ಹಂತಿ ಮೊಹರಂ ಕೋಲಟ, ಡೊಳ್ಳಿನ ಹಾಡು ಹೋಳಿ ಲಾವಣಿ ಹಾಡುಗಳು ಗಂಡಸರಲ್ಲಿ ಹಾಡುತ್ತಾರೆ.

ಬೀದರ ತಾಲ್ಲೂಕ ಜನಪದ ಹಾಡುಗಳು ಮತ್ತು ಅನುಭಾವ ಸಾಹಿತ್ಯದ ತವರು ಮನೆಯಾಗಿದೆ. ಅದರ ವೈಶಿಷ್ಟ್ಯವನ್ನು ತತ್ವಪದ ಕಾಲಜ್ಞಾನ, ಕುಟ್ಟುವ, ಬೀಸುವ ಪದಗಳಲ್ಲಿ ಅನುಭಾವದ ತಿರುಳನ್ನು ಕಾಣಬಹುದಾಗಿದೆ. ಕುಟ್ಟುವ ಪದಗಳಲ್ಲಿ ಬೆಡಗಿನ ಪದಗಳನ್ನು ಕಾಣುತ್ತೇವೆ. ಬೀದರ ತಾಲ್ಲೂಕಿನಲ್ಲಿ ಪ್ರಚಲಿತವಿರುವ ಕಟ್ಟುವ ಪದಗಳಿಗಿಂತ ಭಿನ್ನವಾಗಿರುವುದನ್ನು ಕಾಣುತ್ತೇವೆ. ನಮಗೆ ತಿಳಿದಿರುವಂತೆ ಲವಣಿ ಹಾಡುಗಳಲ್ಲಿ ಸಮಾಜದ ದಿನನಿತ್ಯದ ಸಮಸ್ಯೆಗಳನ್ನು ವಸ್ತುವನ್ನೊಳಗೊಂಡ ಲಾವಣಿಗಳನ್ನು ಕಾಣುತ್ತೇವೆ. ಬೀದರ ತಾಲ್ಲೂಕಿನ ಲಾವಣಿಗಳಲ್ಲಿ ಜಿಲ್ಲೆಯಲ್ಲಿ ಬಂದೊದಗಿರುವ ನಿತ್ಯ ಸತ್ಯವಾದ ಬರಗಾಲದ ಚಿತ್ರಣವನ್ನು ಒಳಗೊಂಡಿರುವ ಅನೇಕ ಲಾವಣಿ ಹಾಡುಗಳಿವೆ.

ಬೀದರ ಸಂಮಿಶ್ರ ಭಾಷೆಗಳ–ಸಂಸ್ಕೃತಿಗಳ ಜಾನಪದ ಹಾಡುಗಳ ತವರೂರು. ಇದು ಅನೇಕ ಹೊಸ ಸಂಪ್ರದಾಯಗಳ ಮೆಲೆ ಬೆಳಕು ಚೆಲ್ಲುತ್ತದೆ. ಬೀದರ ಭಾಗದ ಜಾನಪದ ಹಾಡು ಸಾಹಿತ್ಯ ವೈವಿಧ್ಯ ಮತ್ತು ಶ್ರೀಮಂತಿಕೆಯ ಕಡೆ ನಮ್ಮ ಆಸಕ್ತಿಯನ್ನು ಸೆಳೆಯುತ್ತದೆ. ಹೀಗಿರುವುದರಿಂದಲೇ ಜಾನಪದ ಕ್ಷೇತ್ರಕಾರ್ಯ ಕೈಗೊಂಡು ಬೀದರ ತಾಲ್ಲೂಕಿನ ಜಾನಪದ ಹಾಡುಗಳ ಸಂಗ್ರಹದ ಜೊತಗೆ ಸಂಪ್ರದಾಯ ಮತ್ತು ಸಾಹಿತ್ಯಿಕ, ಸಾಂಸ್ಕೃತಿಕ ಕುರಿತು ಪ್ರಸ್ತುತ ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ-೩

ಬೀದರ ಜನಪದ ಹಾಡುಗಳು ಸಾಂಸ್ಕೃತಿಕ ಅಧ್ಯಯನ

ಕುಟ್ಟುವ ಹಾಡು
ಬೀಸುವ ಹಾಡು
ಹಚ್ಚೆಯ ಹಾಡು
ಜೋಗುಳ ಹಾಡು
ಹಂತಿ ಹಾಡು
ಭೂತೇರ ಹಾಡು
ಮದುವೆಯ ಹಾಡು
ಕೋಲಾಟದ ಹಾಡು
ಮೊಹರಂ ಹಾಡು
ಭಜನೆ ಹಾಡು
ಜೋಕುಮಾರನ ಹಾಡು
ಸತ್ತವರ ಹಾಡು
ಗೊಂದಲಿಗರ ಹಾಡು
ಕಾಲಜ್ಞಾನ ಹಾಡು
ಬಾಳಸಂತರ ಹಾಡು
ಭುರ್ ಭುರ್ ಪೋಚಮ್ಮ ಹಾಡು
ಬುಲಾಯಿ ಹಾಡು

ಅಧ್ಯಾಯ–೩

ಬೀದರ ಜನಪದ ಹಾಡುಗಳು ಸಾಂಸ್ಕೃತಿಕ ಅಧ್ಯಯನ

ಮನಷ್ಯನ ಜೀವನ ಎಲ್ಲ ಜೀವಿಗಳ ಜೀವನಕ್ಕಿಂತ ಭಿನ್ನ ಮತ್ತು ವಿಶಿಷ್ಟ ಅವನು ತನ್ನ ಜೀವಿತದಲ್ಲಿ ಕಷ್ಟ ನೋವು ನಲಿವು ಮುಂತಾದ ಏರುಪೇರುಗಳನ್ನು ಕಾಣುತ್ತಾನೆ. ತನ್ನ ಕಷ್ಟ ಸುಖದಲ್ಲೂ ಸಂದರ್ಭ ಸನ್ನಿವೇಷಗಳಲ್ಲೂ ಅನೇಕ ಕಾರ್ಯಕ್ರಮಗಳಲ್ಲಿ ಸಮಾರಂಭಗಳಲ್ಲಿ ಹಬ್ಬ ಹರಿದಿನಗಳಲ್ಲಿ ಪಾಲ್ಗೊಂಡು ಜೀವನದ ಆನಂದದಾಯಕ ಕ್ಷಣಗಳನ್ನು ಅನುಭವಿಸುತ್ತಾನೆ. ತನ್ನ ಮನರಂಜನೆಗಾಗಿ ತಾನೇ ಅನೇಕ ಧಾರ್ಮಿಕ ಸಾಂಸ್ಕೃತಿಕ ಮಾಧ್ಯಮಗಳಾದ ಹಬ್ಬ ಹುಣ್ಣಿಮೆಗಳ ಆಚರಣೆಯನ್ನು ಜಾರಿಗೆ ತಂದಿದ್ದಾನೆ. ಇಂತ ಆಚರಣೆಗಳ ಸಂದರ್ಭದಲ್ಲಿ ಸ್ವತಃ ಹಾಡುಗಳ ರಚಿಸಿ ಹಾಡುತ್ತಾರೆ. ಇಂತ ಜಾನಪದ ಹಾಡುಗಳನ್ನು ಆಯಾ ಕೆಲಸ–ಕಾರ್ಯಕ್ಕೆ ಹಬ್ಬಕೆ ಸಂಬಂಧಿಸಿದ ಸಂದರ್ಭದಲ್ಲಿ ಹಾಡುವ ಪರಿಪಾಠ ಇದೆ.

ಹಳ್ಳಿಗಾಡಿನ ಜಾನಪದೀಯ ಜನರು ಹೋದಲ್ಲಿ, ಮನೆಯಲ್ಲಿ ಕೆಲಸ ಕಾರ್ಯ ಮಾಡುತ್ತಿದಾಗಲೂ ಅವರ ಬಾಯಿಂದ ಸುಶ್ರಾವ್ಯವಾದ ಹಾಡುಗಳು ಹೊರಹೊಮ್ಮಿತ್ತಿದ್ದವು. ಅವುಗಳ ಕಥಾವಸ್ತು ಪ್ರಚಲಿತ ಸಮಸ್ಯೆಗಳು, ಆಳಿಹೋದ ಅರಸರು, ಸಮಾಜದ ಪ್ರಭಾವಿ ವ್ಯಕ್ತಿಗಳು, ಧಾರ್ಮಿಕ ಪೌರಾಣಿಕ ಸತ್ಯ ಸಂಗತಿಗಳು, ಗತಿಸಿಹೋದ ಘಟನೆಗಳು ಅಥವಾ ಅವರ ಜೀವನಾನುಭವವೇ ಸುಸಂಬದ್ಧ ರಾಗ ತಕ್ಕವಾದ ತಾಳ ಮತ್ತು ಬಾಯಿ ಮಾಧ್ಯಮದ ಮೂಲಕ ಹೊರಹೊಮ್ಮುತ್ತಿದ್ದವು. ಇಂಥ ಜಾನಪದ ಹಾಡುಗಳನ್ನು ಕಟ್ಟುವಾಗ, ಬೀಸುವಾಗ, ಭುಲಾಯಿ ಹಾಕುವಾಗ, ಹಂತಿ ಹೊಡೆಯುವಾಗ, ಗೊಂದಲಿ ಹಾಕುವಾಗ, ಜೋಗುಳ ಹಾಡುವಾಗ, ಡೊಳ್ಳು ಬಾರಿಸುವಾಗ, ಕೋಲಾಟ ಆಡುವಾಗ, ಭೂತೇರ ಆಟ ಆಡುವಾಗ, ಮೊಹರಂ ಹಬ್ಬದ ಸಂದರ್ಭದಲ್ಲಿ ಹೀಗೆ ಹತ್ತು ಹಲವು ಸನ್ನಿವೇಶದಲ್ಲಿ ಕಾಣಬಹುದು.

ಕುಟ್ಟುವ ಹಾಡು

ರಾಗಿ ಭತ್ತ, ಇನ್ನಾವುದೇ ಕುಟ್ಟುವ ಧಾನ್ಯಗಳನ್ನು ಒರಳಲ್ಲಿ (ಒಳ್ಳಲ್ಲಿ) ಹಾಕಿ ಒನಕೆಯಿಂದ ಕುಟ್ಟುವ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಹಾಡುವ ಹಾಡೆ ಕುಟ್ಟುವ ಹಾಡುಗಳೆಂದು ಕರೆಯುವರು. ಭತ್ತ (ಅಕ್ಕಿ) ಕುಟ್ಟುವವರು ಕುಟ್ಟುವ ಪದಗಳನ್ನು ಹಾಡುವ ಸಂಪ್ರದಾಯ ಆ ಕಾಲದಲ್ಲಿ ಕುಟ್ಟುವ ಬೀಸುವ ಯಂತ್ರಗಳಿರದಿದ್ದರಿಂದ ಹೆಂಗಳೆಯರು ಮನೆಯಲ್ಲಿ ಮನೆಗೆ ಬೇಕಾದ ಅಕ್ಕಿಗಾಗಿ ಭತ್ತ ಕುಟ್ಟುತ್ತಿದ್ದುದ್ದು ಸಾಮಾನ್ಯ. ಸಮಾರಾಧನೆ ಮದುವೆಯಂತ ಸಾಮಾಜಿಕ ಕಾರ್ಯಗಳಿಗಾಗಿಯೂ ಕುಟ್ಟುವ ಸಂದರ್ಭಗಳು ಬರುತಿದ್ದವು. ಈಚೆಗೆ ಯಾಂತ್ರಿಕ ಪ್ರಗತಿಯಿಂದಾಗಿ ಭತ್ತ ಕುಟ್ಟುವ ಕಾಯಕ ಮರೆಯಾಗಿ ಹೋಗಿದೆ. ಅದರ ಜೊತೆಯಲ್ಲಿಯೇ ಹಾಡುಗಳು ಕೂಡ ಮಾಯವಾಗಿವೆ.

ಒರಳಲ್ಲಿ ಭತ್ತ ಹಾಕಿ ಒನಕೆ ಹಿಡಿದು ಜಾನಪದ ಗರತಿ ಕುಟ್ಟುವಾಗ ಹಾಡುತ್ತಿದ್ದ ರಚನೆ ಹೀಗಿದೆ.

ಓ ಮನಂತ ಕುಟ್ಟಾನು ಬಾರೆಽ
ಸೋಮನಂತ ಬೀಸಾನು ಬಾರೆ. . . .
ಓಂ ಸೋಂ ಎರಡಕ್ಷರ ತಿಳಿಯಬೇಕ ನಾರಿ

ಹಾಕವ್ವ ಯಾರಿ
ಹಾಕವ್ವ ಯಾರಿ

ಊರಕೀಲಿ ಯಾವಾಗ ಆವಾಗ ದೊರೆದಾತು
ಓಮನ ಸೋಮನ ಎರಡಕ್ಕಷರ ತಿಳಿದಾರೆ ನಾರಿ
ಗುರಕೀಲಿ ದೊರೆತಾರ ದುರಗುಣ ಅಳಿಬೇಕ ಮಾಯ ಪರಪಂಚ ತಿಳಿಯಬೇಕ ನಾರಿ

ಪರಪಂಚಯ ಕಳವಿ ಕಟ್ಟಿ ಪರಮಾತ್ಮನೆಂಬ ಅಕ್ಕಿ
ತೊಳಸಿ ಗಿನಿಯಾನಂಬ ವಣಕಿಲಿ ಕುಟ್ಟಬೇಕೆ ನಾರಿ
ಅಲಲ್ಲಿಂದೆ ಅಕ್ಕಿಯ ತರಸಿ ಉಸುಕನಾಯ್ದು
ನಿಜವನ್ನ ನೀರ ಇಡುವಬೇಕ ನಾರಿ
ಅಂಗೈದೊಳ ಹದನ ಮಾಡಿ ಗಡಗಿ ತಕ್ಕವ್ವ
ಮೂರ ಗುಂಡಿ ವಲಿಯ ಹೂಡಿ ಇದುವ ಬೇಕಸಾರಿ ಸುವ್ವ ಸುವ್ವ

ಕಾಮಕ್ಕಿರುವ ಕಿಚ್ಚ ಹಚ್ಚಿ ದುರಣಿಗೋಣ ಹುಲ್ಲ ಹಾಕಿ
ಗುರುವಮಂತ್ರ ಬೆಂಕಿ ಹಚ್ಚಿ ಸುಡವಬೇಕೆ ನಾರಿ

ಸನ್ಮಾಲಿಂದೆ ಅಡಕಿ ವಡೆದು ಸತ್ತೆಗುರುವಿನ ಪಾದಹಿಡಿದು
ಗುರವಸ್ತರೆಲ್ಲ ಕೂಡ ಮುಗಿಯಬೇಕನಾರಿ ಸುವ್ವ. . ಸುವ್ವ. . ಸುವ್ವ . .

ಹೀಗೆ ಕುಟ್ಟುವಾಗ ಹಾಡುವರು ಹಾಡಿನ ಪಲ್ಲವೆಂದರೆ ಸುವ್ವ. . . ಸುವ್ವ. . . ಸುವ್ವ. . ಎಂದಿರುತ್ತದೆ. ಹಾಡು ಲಯಬದ್ದವಾಗಿ ಸಾಗುತ್ತದೆ. ಇಂಥ ಬಿಡಿ ಬಿಡಿ ಹಾಡುಗಳ ಜೊತೆಗೆ ಕಥನ ಗೀತೆಗಳನ್ನು ಹಾಡುತ್ತಿದ್ದುದಾಗಿ ತಿಳಿದು ಬರುತ್ತದೆ. ಬಯಲ ನಾಡಿನಲ್ಲಿ ಕುಳಿತು ಕುಟ್ಟುತ್ತಿದ್ದರೆ ಮಲೆನಾಡಿನಲ್ಲಿ ನಿಂತು ಕುಟ್ಟುವದು ವಿಶೇಷ. ಈ ಹಾಡುಗಳೇ ಕೇಳುವುದೇ ಒಂದು ಸೊಗಸು. ತಾಲ್ಲೂಕಿನ ತುಂಬೆಲ್ಲಾ ಹೆಚ್ಚಾಗಿ ಒಬ್ಬರು ಹಾಡುವರಾದರೆ ಒಬ್ಬರು ಧ್ವನಿ ಕೊಡುವರು. ಇತ್ತಿತ್ತಲಾಗಿ ಕುಟ್ಟುವ ಪದಗಳು ಕೂಡ ಮರೆಯಾಗುತ್ತಲಿ ಅವುಗಳನ್ನು ಸಂಗ್ರಹಿಸುವ ಪ್ರಯತ್ನ ಮಾಡಬೇಕಾಗಿದೆ.

ಬೀಸುವ ಹಾಡು

ಗ್ರಾಮೀಣ ದೈನಂದಿನ ಬದುಕು ಬೀಸು ಕಾಯಕದಿಂದ ಆರಂಭವಾಗುತ್ತದೆ. ಬೀಸುವ ಕಲ್ಲು ನಡೆಯುತ್ತಿದ್ದರೆ ಮನೆಯಲ್ಲಿ ಎಲ್ಲವೂ ಸರಿಯಾಗಿದೆ ಎಂದೇ ಅರ್ಥ. ಪ್ರತಿನಿತ್ಯ ಅಕ್ಕಿ-ರಾಗಿ-ಜೋಳ ಮುಂತಾದ ಧಾನಗಳನ್ನು ಬೀಸಿ ಅಣಿಗೊಳಿಸಿಕೊಂಡರೆ ಆ ದಿನದ ಅಗತ್ಯಗಳು ಪೂರೈಕೆಗೊಳ್ಳುತ್ತವೆ. ಈ ಬೀಸುವ ಕಾಯಕದಲ್ಲಿ ಏನಾದರೂ ಅಡ್ಡಿ ಆತಂಕಗಳು ಕಾಣಿಸಿಕೊಂಡರೆ ಬದುಕೇ ದುಸ್ತರವಾದಂತೆ ಅದಕ್ಕಾಗಿಯೇ ಬೀಸುವ ಕಲ್ಲನ್ನು ಕುರಿತು ಜಾನಪದ ಗರತಿ ಹೀಗಿ ಹಾಡಿದ್ದಾಳೆ.

ಕಂಡುಗ ರಾಗಿ ಬೀಸೊ ನನ ಮುತ್ತಿನ ರಾಗಿ ಕಲ್ಲೆ
ಚಂಡೆ ತಂದಿವ್ನಿ ಕೊರಳಿಗೆ ನಮ್ಮನಿಗಿ
ಕಂಚಗ ಸಾಲಲ್ಲಿ ಇಡಬಾರೊ

ರಾಗಿಯ ಕಲ್ಲಿಗೆ ರನ್ನದ ಕೈಗೂಟ
ರಮದೇವರೆಂಬೊ ಹಿಡಿಗೂಟ-ಹಿಡಕೊಂಡ
ರಾಜದೇವನ ಕೊರಳಿಗೆ

ಕಲ್ಲ ಕೊಟ್ಟಮ್ಮಗೆ ಎಲ್ಲ ಭಾಗ್ಯವು ಬರಲಿ
ಕಲ್ಲತ್ತಿ ಮೇಲೆ ಮಗ-ಬರಲಿ-ನಮ್ಮನಿಗಿ
ಮಲ್ಲಿಗೆ ಮುಡಿಯೇ ಸೊಸೆಬರಲಿ

ಕಲ್ಲ ಕೊಟ್ಟಮ್ಮಗೆ ಎಲ್ಲ ಭಾಗ್ಯವು ಬರಲಿ
ಕಲ್ಲತ್ತಿ ಮೇಲೆ ಮಗ-ಬರಲಿ-ನಮ್ಮನಿಗಿ
ಮಲ್ಲಿಗೆ ಮುಡಿಯೋ ಸೊಸೆಬರಲಿ

ಬೀಸುವ ಕಲ್ಲಿಗಿ. . . . ಬಿಳಿಮುತ್ತ ರ್‍ಯಾವಳ
ಬೇಸ್ಯಾಗಿ ಹೊಯ್ಯೊ ಹೊಳೆಗಾರ. . . . ಬೀಸುವ ಕಲ್ಲಗಿ
ಬೇಸ್ಯಾಗಿ ಹೊಯ್ಯೊ ಹೊಳೆಗಾರ ನಮ್ಮನಿಗಿ
ಬೀಸಾಕ ಬರತಾವ ಗೆಳೆದೇರು. . . ಬೀಸುವ ಕಲ್ಲಿಗಿ

ಬೀಸುವ ಕಲ್ಲಿಗಿ ಬಿಳಿಮುತ್ತ ರ್‍ಯಾವಳ
ಬೇಸಾಗಿ ಹೊಯ್ಯೊ ಹೊಳೆಗಾರ

ಬೇಸಾಗಿ ನೀ ಹೊಯ್ಯೋ ಹೊಳೆಗಾರ ನಮ್ಮನೀಗಿ
ಬಿಸಾಕ ಬರತಾರ ಗೆಳೆದೇರು . . . .

ಕಲ್ಲಿಗಿ ಮುಕ್ಕಾಕಿ : ಬಲ್ಲಿದನ ನೆನದೇನು
ಸೊಲ್ಲ ಕೇಳಾಕ ಶಿವಬಂದ

ಬೀಸುವ ಕಲ್ಲು ಜನಪದರಿಗೆ ಜೀವನಧಾರ ವಸ್ತು, ಕಲ್ಲಮ್ಮ ತಾಯಿಯ ಕರುಣೆಯಿಂದಲೇ ಕಲ್ಲು ಹಿಡಿದಾಕೆಗೆ ಮಗ ಸೊಸೆಯರು ಬರುತ್ತಾರೆ. ಸುಖ ಸಂತೋಷ ಲಭಿಸುತ್ತದೆ. ಬದುಕು ಹಸನಾಗವುದು, ಬೆಳಗುವುದು, ಕಲ್ಲು ಹಿಡಿಯುವುದರಿಂದ ಅದಕ್ಕಾಗಿಯೇ ಬೀಸುವ ಕಲ್ಲನ್ನು ಗ್ರರತಿ ತಾಯಿ ಕಲ್ಲಮ್ಮ ಎಂದು ಕರೆದಿದ್ದಾಳೆ.

ಕೆಲ ವರ್ಷಗಳ ಹಿಂದೆ ಮದಿವೆ ಸಮಯದಲ್ಲಿ ದಿವಸಗಳಲ್ಲಿ ಹಾಡು ಹೇಳಿಸುತ್ತಾ, ಸ್ತ್ರೀಯರಿಗೆ ಬೀಸುವ ಕುಟ್ಟುವ ಶಾಸ್ತ್ರ ಮಾಡಿಸುವುದರಲ್ಲಿ ಹಿಂದೆ ಹೆಣ್ಣನ್ನು ಆಯ್ಕೆ ಮಾಡುತ್ತಿದ್ದ ರೀತಿಯ ಪರಿಚಯವಾಗುವದರ ಜೊತೆಗೆ ಈ ಕಾಯಕಗಳ ಬಗೆಗೆ ಹಿಂದಿನವರಿಗೆ ಎಂಥ ಹೆಗ್ಗಳಿಕೆ ಮತ್ತು ಪವಿತ್ರ ಭಾವನೆ ಇತ್ತೆಂದು ಹಿರಿಯರ ಹಾಡುಗಳಿಂದ ತಿಳಿದುಬರುತ್ತದೆ.

ಬೀಸುವಾಗ ಹೇಳುವ ಬಾಂಧವ್ಯಪರ ಗೀತೆಗಳೆಲ್ಲ ಹೆಣ್ಣಿನ ಬದುಕನ್ನು ಚಿತ್ರಿಸುತ್ತದೆ. ಬಾಲ್ಯದಲ್ಲಿ ತಾಯಿ ತಂದೆಯರೊಂದಿಗೆ ಯೌವ್ವನದಲ್ಲಿ ಪುರುಷನೊಂದಿಗೆ ಮುಪ್ಪಿನಲ್ಲಿ ಮಕ್ಕಳೊಂದಿಗೆ ಬಾಳುವೆ ನಡೆಸುವ ಹೆಣ್ಣಿನ ಜೀವನ ವಿವಿಧ ಸ್ತರದ ಶೀಲ ವರ್ತನೆಯ ಚಿತ್ರ ಇಲ್ಲಿದೆ. ಒಟ್ಟಿನಲ್ಲಿ ಗರತಿಯ ಬದುಕಿನ ಹಿರಿಮೆಯನ್ನು ಸಾರುವ ಗೀತೆಗಳಾಗಿವೆ. ಬೀಸುವ ಹಾಡುಗಳು. ಸ್ತ್ರೀಯರ ಹಾಡುಗಳಲ್ಲಿಯೇ ಬೀಸುವ ಪದಗಳಿಗೆ ಮಹತ್ವದ ಸ್ಥಾನವಿದೆ. ಇಂದು ಹಿಟ್ಟು ಮಾಡುವ ಮತ್ತು ಅಕ್ಕಿ ಮಾಡುವ ಹತ್ತಾರು ಬಗೆಯ ಯಂತ್ರಗಳು ಒಂದು ಹಳ್ಳಿಗಳ ಪ್ರವೇಶ ಪಡೆದಿರುವುದರಿಂದ ಕುಟ್ಟುವ ಮತ್ತು ಬೀಸುವ ಕೆಲಸಗಳು ಮಾಯವಾಗಿವೆ. ವಿಶೇಷವಾಗಿ ಇಂದಿನ ಮಕ್ಕಳು ಕೂಡ ಆಲಸ್ಯದಿಂದ ಕೂಡಿದವರಾಗಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಗೆ ಮರುಳಾಗಿದ್ದಾರೆ. ಅವುಗಳೊಂದಿಗೆ ಹಾಡುಗಳೂ ಕೂಡ ಹಳ್ಳಿಗಳಲ್ಲಿ ಕಣ್ಮರೆಯಾಗಿವೆ.

ಹಚ್ಚೆಯ ಹಾಡುಗಳು

ಹೆಣ್ಣು ಮಕ್ಕಳು ತಮ್ಮ ತಮ್ಮ ದೇಹದ ಬೇರೆ ಬೇರೆ ಭಾಗಗಳಲ್ಲಿ ಚಿತ್ರ ಚಿತ್ತಾರ ಬರೆಸಿಕೊಳ್ಳುವ, ಹಚ್ಚೆ ಎಂದು ಹೆಸರು. ಮದಿವೆ ಮಾಡಿಕೊಳ್ಳುವ ಸಂದರ್ಭದಲ್ಲಿ ಹಚ್ಚೆ ಹಾಕಿಕೊಳ್ಳುವ ಸಂಪ್ರದಾಯ. ಐದೆ ಅಣಚೆಯಿಲ್ಲದವಳಿಂಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ? ಎಂಬ ಬಸವಣ್ಣನವರ ಮಾತು ಇದರ ಪಾವಿತ್ರ್ಯವನ್ನೂ, ಪ್ರಾಚೀನತೆಯನ್ನು ೧೨ನೇ ಶತಮಾನದಷ್ಟು ಹಿಂದೆ ಒಯ್ಯುತ್ತದೆ. ಹಸಿರು ಮೊನೆಗಳ ಸೂಜಿಗಳ ಮೂಲಕ ಹಚ್ಚೆ ಹಾಕುವ ವಿಧಾನ. ಇದರಿಮದ ನೆತ್ತರ ಸುರಿದು ಅಸಾಧ್ಯ ವೇದನೆಯುಂತಾಗುತ್ತದೆ. ಈ ವೇದನೆಯನ್ನು ಮರೆಯಲು ಹಚ್ಚೆ ಹಚ್ಚುವವರು ಮಂಗಳ ಹಾಡುಗಳ ಜೊತೆಗೆ ಹಾಸ್ಯದ ಪದಗಳು ಹೇಳುವರು.

> "ಗಂಗವ್ವ ಚುಚ್ಚಾಕೊಂಡ ಹಣಚಿ ಬಿಟ್ಟು
> ಗರತಿನ ಅಂತ
> ಕುಂಕುಮ ಅಂತ ಕುಂಕುಮ ತಂತ"

ಇತ್ಯಾದಿ ಗಂಗವ್ವ ಪಾಠಕ್ಕೆ ಬದಲು ಹಣಚಿ ಚುಚ್ಚಿಸಿ ಕೊಳ್ಳುವವನ ಹೆಸರನ್ನು ಅವಳಿಗೆ ಒಳ್ಳೆಯ ವೃತ್ತಿ. ಸಕಲ ಸೌಭಾಗ್ಯ ಲಭಿಸಲಿ ಎಂಬ ಆಶಯದ ಪದಗಳನ್ನು ಹಾಡುತ್ತಾರೆ. ಅವಳಲ್ಲಿ ಭಾವುಕತೆಯನ್ನು ತುಂಬಿ ನೋವನ್ನು ಮರೆಸುತ್ತಾರೆ.

ಹಾಸ್ಯದ ಹಾಡುಗಳನ್ನು ಹೇಳುವದು ಸಾಮಾನ್ಯವಾಗಿ ಹಚ್ಚೆ ಹಾಕುವ ಸಣ್ಣ ಮಕ್ಕಳಿಗೆ ಚುಚ್ಚುವಾಗ

> ಉಳಾಗಡ್ಡಿ ತಿನ್ನಬ್ಯಾಡ
> ಗಂಡ ಬರ್ತಾನ ಅಳಬ್ಯಾಡ
> ಕುಂಡಿ ಮ್ಯಾಲೆ ಹೊಡಿತಾನೆ
> ಕಡ್ಡಿ ತಂದ ಕುರು ಕುರು
> ಡುಸ ಬಿಟ್ಟ ಮುರು ಮುರು

ಹೀಗೆ ಹಾಸ್ಯದ ಪದಗಳನ್ನು ಹಾಡಿ ನೋವನ್ನು ಮರೆಮಾಚಿಸುವ ಸಂಪ್ರದಾಯವಿದೆ.

ಹಚ್ಚೆ ಹಾಕುವವರು ಸಾಮಾನ್ಯವಾಗಿ ಕಟಬ ಸ್ತ್ರೀಯರು, ಗೊಂದಲಿಗರು, ಒಡ್ಡರು, ಬೀದರ ತಾಲ್ಲೂಕಿನ ಅನೇಕ ಕಡೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇದೊಂದು ವೃತ್ತಿಯನ್ನಾಗಿ ಕೆಲವರು ಮಾಡಿಕೊಂಡಿದ್ದಾರೆ. ಈ ಕಲೆ ಅವರವರ ಮೂಲ ಜಾತಿಯ ಕಸಬಲ್ಲ. ಕಟಬ

ಕುಲದವರು ಮಾತ್ರ ಇದನ್ನು ವೃತ್ತಿಯನ್ನಾಗಿ ಕಲೆಯಾಗಿ ಬಳಸಿಕೊಂಡು ಉಳಿಸಿಕೊಂಡು ಬಂದಿರುವ ಪದ್ಧತಿ ಇದೆ.

ಜೋಗುಳ ಹಾಡು

ಎಳೆಯ ಹಸುಮಕ್ಕಳನ್ನು ಮಲಗಿಸಲು ಸಮಾಧಾನ ಹೇಳುವ ಸಂತಸದ ಹಾಡುಗಳೇ ಜೋಗುಳ ಹಾಡುಗಳೆನ್ನುವರು. ತೊಟ್ಟಿಲ ಹಾಡು, ಲಾಲಿಪದ ಮೊದಲಾದ ಹೆಸರುಗಳೂ ಇದಕ್ಕಿವೆ. ತಾಯಿ ತನ್ನ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ತೂಗುತ್ತಾ ಈ ಹಾಡು ಯಾವುದೇ ಧಾಟಿ ಅಥವಾ ಭಾಷೆಯಲ್ಲಿರಲಿ ಅವು ಜೋಗುಳ ಹಾಡುಗಳೆಂದೇ ಕರೆಸಿಕೊಳ್ಳುತ್ತವೆ. ಹಾಡಿನಲ್ಲಿ ನೀನು ಮಲಗು, ನೀನು ಸುರಕ್ಷಿತವಾಗಿದ್ದೇಯ ಎಲ್ಲವೂ ಸರಿಯಾಗಿದೆ. ಎಂಬ ಮಾಮಾಗಳು ಪ್ರಧಾನವಾಗಿರುತ್ತವೆ. ಕೆಲವು ಸಂದರ್ಭದಲ್ಲಿ ತಾಯಿ ಜೋಗುಳ ಹಾಡನ್ನು ಹಾಡುವಾಗ ಮಗುವಿನ ಸೌಂದರ್ಯವನ್ನು ವರ್ಣಿಸುವ ವಿವರಗಳು ದೊರಕುತ್ತವೆ. ದೇವರು ನಕ್ಷತ್ರ ಮತ್ತು ರತ್ನ, ಹವಳ ಚಂದ್ರ ರಾಜಕುಮಾರ ಇತ್ಯಾದಿಗಳಿಗೆ ಮಗವನ್ನು ಹೋಲಿಸಿ ಮಗುವಿನಲ್ಲಿ ಉಜ್ವಲ ಸೌಂದರ್ಯವನ್ನು ತಾಯಿ ಕಾಣುತ್ತಾಳೆ.

ಜೋ. . . ಜೋ. . . ಶ್ರೀಕಂದ ಜೋ. . . ಜೋ . . .
ಕಂದ ಶ್ರೀ ಜೋ. . . ನಂದಶ್ರೀ ಜೋ
ಪ್ರೀತಿಯ ಶಿವಕಂದ ಜೋ. . . ಜೋ. . .

ಭುವನ ಪಾವನ ಮೂರ್ತಿ ಜೋ
ಶಿವನ ಶಿಶುವೆ ಕೀರ್ತಿ ಜೋ
ಕವಿದ ಕತ್ತಲೇ ಕಳೆಯ ಬಂದ-ಕವಿಯೇ
ಜೋ. . . ಭವಿಯೋ ಜೋ. . .
ಗಿಳಿಯ ತುಂಬಿದ ಹೊಳೆಯಲ್ಲ ಜೋ
ಬೆಳೆಯ ಹೊನ್ನಿನ ಮಳೆಯೇ ಜೋ
ಇಳೆಯ ಧರ್ಮ ಬೆಳಗಬಂದ ಹೊಳೆವ
ಆಗಿದ ಜ್ಯೋತಿ ಜೋ . . .

ಶಾಂತಿ ಶಕ್ತಿ ಶಶಿಯೇ ಜೋ
ಕಾಂತಿ ಭಾಸುರ ಉದಯ ಜೋ
ಶಾಂತಿ-ಕಾಂತಿ ತುಂಬಿ ನಿಂತ ಕ್ರಾಂತಿ ಕನ್ನಡ
ಕವಿಯೇ ಜೋ . . .

ನಂದ-ನಂದಿ ರೂಪನೇ ಜೋ
ಚಂದ ಚಲುವ ದೀಪವೇ ಜೋ
ಮಂದಹಾಸ ಮಧುರ ನಗೆಯ ಕಂದ

ಬಸವರಾಜನೇ ಜೋ . . . .

ಭಕ್ತ ಸಿರಿಯ ಹೊರೆಯ ಜೋ
ಮುಕ್ತಿ ಮಕುರ ಮನೆಯೆ ಜೋ
ಮಂಗಲಾಂಗ ಮಗುವೆ ಜೋ
ಸಂಗನಬಸವನೇ ಜೋ

ಹಾಡು ಹಾಡಿದರೂ ಹಾಡಿನ ಅರ್ಥ-ಗುರುತು ಇರದೇ ಹೋದರೂ ತಂದೆ-ತಾಯಿಗಳು ಜೋಗುಳ ಹಾಡು ಹಾಡುವ ಸಂಪ್ರದಾಯ ಉಂಟು. ನಮ್ಮ ಹಾಡಿನ ಯಾವುದೇ ಭಾಗವನ್ನು ಕತ್ತರಿಸುವ ಅವಶ್ಯಕತೆಯನ್ನು ಕಾಣುವುದಿಲ್ಲ. ತಮ್ಮ ಅರಿವಿನನುಸಾರ ಅದರಲ್ಲಿರುವ ರಕ್ತವನ್ನು ಹೆಪ್ಪುಗಟ್ಟಿಸುವ ಹಾಗೂ ಸಮಾಧಾನ ಗೊಲಿಸುವ ಭಾವವನ್ನು ಬಳಸಿಕೊಳ್ಳುತ್ತಾರೆ. ಯಾವುದೇ ರೀತಿಯ ಜನಪದ ಹಾಡುಗಳಿಗಿಂತ ಜೋಗುಳದ ಹಾಡುಗಳು ಬಹುಕಾಲ ಉಳಿಯುವಂತೆ ಕಂಡುಬರುತ್ತವೆ. ಏಕೆಂದರೆ ಎಲ್ಲಿಯವರೆಗೆ ಮಕ್ಕಳು ಅಳುತ್ತಾರೋ, ತಾಯಂದಿರ ದನಿ ಅವುಗಳನ್ನು ಸಮಾಧಾನ ಗೊಳಿಸುತ್ತದೋ ಅಲ್ಲಿಯವರೆಗೆ ಅಂಥ ದನಿ ಹಾಗೂ ಪದಗಳು ಒಬ್ಬರಿಂದೊಬ್ಬರಿಗೆ ಹರಿದು ಹೋಗುತ್ತದೆ.

ಹಂತಿಯ ಹಾಡು

ಹೊಲದಲ್ಲಿ ಫಸಲುಗಳ ಕೊಯ್ಯುವುದು ಆದ ಮೇಲೆ ಇರುವ ಕೆಲಸ ರಾಶಿ. ಹೊಲದ ರಾಶಿ ಸಮಯದಲ್ಲಿ ಹಂತಿ ಕಟ್ಟಿದಾಗ ಹಾಡುವ ಪದಗಳೇ ಹಂತಿ ಹಾಡುಗಳು. ಕಣದ ಮಧ್ಯದಲ್ಲಿ ನೆಟ್ಟ ಮೇಟಿ ಕಂಬದ ಸುತ್ತಲೂ ವರ್ತುಲಾಕಾರದಲ್ಲಿ ಹರದಿಟ್ಟ ಜೋಳದ ತೆನೆಗಳನ್ನು ಎತ್ತುಗಳ ಏಣಿಯಿಂದ ತುಳಿಸುವ ವಿಧಾನಕ್ಕೆ ಹಂತಿ ಎಂದು ಕರೆಯುತ್ತಾರೆ. ಹಂತಿ ಪದಕ್ಕೆ "ಪಂಕ್ತಿ" ಸಾಲು, ಸರತಿ ಎಂದು ಬೇರೆ ಬೇರೆ ಅರ್ಥಗಳಿವೆ.

ಹಂತಿ ಹಾಡುಗಳು ಹಾಡುವುದರಲ್ಲಿ ಪುರುಷರದೇ ಮೇಲುಗೈ ಕೆಲವು ಸಮಯದಲ್ಲಿ ಸ್ತ್ರೀಯರೂ ಕೂಡ ಹಾಡುವುದುಂಟು. ಹಂತಿ ಹಾಡುಗಳಿಗೆ ಒಳಗಾದ ವಸ್ತು ವಿಷಯಗಳೇ ಇಲ್ಲ. ಸಾಂಸ್ಕೃತಿಕ ವೀರರ, ಇತಿಹಾಸ ಪುರುಷರ, ಪುರಾಣ ವ್ಯಕ್ತಿಗಳ, ದೇವಾನುದೇವತೆಗಳ ಐತಿಹ್ಯ ಪೂರ್ಣವಾದ ಯಾವ ವಸ್ತುವನ್ನಾದರೂ ಕಥೆ ಕಟ್ಟಿ ಹಾಡುತ್ತಾರೆ. ಮಹಾಭಾರತ ರಾಮಾಯಣದ ಕಡೆಗೆ ಆದರ್ಶಪ್ರಾಯರು ಹರಿಶ್ಚಂದ್ರ ಮಹಾರಾಜನ ವಿಧಿ ವಿಧಾನಗಳನ್ನು ಕಥೆರೂಪದಲ್ಲಿ ಹಾಡುವಂತೆ ಪಾಂಡವರ ವನವಾಸ ಪ್ರಸಂಗ ಕುರಿತು ಅನುಕಂಪವನ್ನು ದುರ್ಯೋಧನ, ರಾವಣ, ಕೀಚಕರಂಥ, ದುಷ್ಟರ ಬಗೆಗಿನ ತಮ್ಮ ರೊಚ್ಚನ್ನೂ ಹಾಡಿನಲ್ಲಿ ಮೂರ್ತಮತ್ತಾಗಿಸಿದ್ದಾರೆ. ಶಿವಶರಣರ ರಚನೆಗಳು ಹೀಗಿವೆ.

ಪ್ರಶ್ನೆ : ಸಣ್ಣವನ ಸಣ್ಣ ಕುಂಡಿ ದೊಡ್ಡವನ ದೊಡ್ಡ ಕುಂಡಿ
ಒಬ್ಬವ ಕುಂಡಿ ಮೊದಲೆಲ್ಲೊ. . . .
ಉತ್ತರ : ಸೂಜೀಗಿ ಸಣ್ಣಕುಂಡಿ ಡಬ್ಬಣಕ ದೊಡ್ಡ ಕುಂಡಿ ಕುಡಸೆರಿ ಕುಂಡಿಮೊದಲಿಲ್ಲೋ

ಹೀಗ ಹಾಡಿನ ಮಧ್ಯೆ-ಮಧ್ಯದಲ್ಲಿ ಒಲ್ಲೈ . . . ಒಲ್ಲೈ . . . ಎಂಬ ಪಲ್ಲ ಬರುತ್ತದೆ. ಈ ಹಾಡುಗಳು ರಂಜನೆ ಮತ್ತು ಆಕರ್ಷಣೆಗಳಿಂದ ಕೂಡಿವೆ. ಕಂಕಿ ತೆಗೆವಾಗ ಹಾಡುವ ಹಾಡು ಕೆಲವು ಚಟುವಟಿಕೆಗಳನ್ನೊಳಗೊಂಡ ಭಾಗ ಚುಟುಕುಗಳು ಶೃಂಗಾರ ಹಾಸ್ಯದ ಹೊನಲನ್ನೇ ಹರಿಸುತ್ತವೆ.

ಯಾಕೋ. . . ಬಸವ ಮೆಲ್ಲಗೆ ನಡದೋ
ತಳಕಾಲಿನ ಮದನ ಮೊಳಕಾಲಿಗೆ ಬಂತು. . .
ವಲ್ಲ್ಯಾ . . . ವಲ್ಲ್ಯಾ . . .
ಚಲೋನ . . . ಪೊಲ್ಲ್ಯಾ . . .

ಊಲ್ಲ್ಯಾ . ಊಲ್ಲ್ಯಾ . . . . . .
ಚಲ್ಲಂ ಪೊಲ್ಲ್ಯಾ . . . .

ಖಳ ಹ್ಯಾಂಗ ಮಾಡಬೇಕು ? . . .
ಸೂರ್ಯಚಂದ್ರ ಮಹಾಂಗಖಳ ಮಾಡಬೇಕು
ಜೋಳ ಹ್ಯಾಂಗ ಕಿತ್ತಬೇಕು
ಉತ್ತುತ್ತಿ ಆಡಿದಂಗ ಜೋಳ ಕಿತ್ತಬೇಕೋ . . .
ಸೂಡ ಹ್ಯಾಂಗ . . . . ಕಟ್ಟಬೇಕೋ. . . .
ಭಣಮಿ ಹ್ಯಾಂಗ ಹಾಕುಬೇಕು
ಭಂಡೆಲ್ಯಂಗ ಭಣಮೆ ಒಟ್ಟಬೇಕು
ಗೂಡ ಹ್ಯಾಂಗ ಮುರಿಬೇಕು . . .
ಕೈಲಿ ಬಾಯಲ್ಲಿ ಗೂಡ ಮುರಿಬೇಕು

ಹೀಗೆ ರೈತರ ಮಧುರ ಭಾವನೆಗಳು ಹಂತಿ ಹಾಡುಗಳ ಮೂಲಕ ಪ್ರಾರಂಭಗೊಳ್ಳುತ್ತವೆ. ಹೊಲದಲ್ಲಿ ರಾಶಿ ಮಾಡುವಾಗ ಬೇಸರ ಕಳೆಯಲೆಂದು ಶ್ರಮವನ್ನು ಮರೆಯಲೆಂದು ಹಾಡಿಕೊಳ್ಳುವುದುಂಟು. ಆನಪದ ಜೀವನದಲ್ಲಿ ಪ್ರತಿಯೊಂದಕ್ಕೂ ಒಂದು ವಿಶಿಷ್ಟ ಸಂಪ್ರದಾಯವೆಂಬಂತೆ, ಪ್ರಾರಂಭದ ನಿರ್ದಿಷ್ಟ ರೂಪ ಬಳಕೆಯಲ್ಲಿರುವುದರಿಂದ ಈ ಹಾಡುಗಳೂ ಆ ಮಾತಿಗೆ ಹೊರತಾಗಿಲ್ಲ.

ಒಟ್ಟಾರೆ ಹಂತಿ ಹಾಡುಗಳನ್ನು ಹೊಲದ ರಾಶಿಯ ಸಮಯದಲ್ಲಿಯೇ ಹೆಚ್ಚು ಹಾಡುವರು. ಆದರೆ ಇತ್ತೀಚಿನ ಆಧುನಿಕ ಯಂತ್ರಗಳ ಬಳಕೆ ಮೂಲಕ ರಾಶಿ ಮಾಡುತ್ತಿರುವುದರಿಂದ ಹಂತಿ ಹಾಡುಗಳು ನಮ್ಮಿಂದ ಕಣ್ಮರೆಯಾಗುತ್ತಿರುವುದು ದುರದುಷ್ಟಕರ ಎನಿಸಿದೆ.

ಭೂತೇರ ಹಾಡು

ಭೂತೇರ ವೃತ್ತಿಗಾಯಕರು ಬೀದರ ಜಿಲ್ಲೆಯಾದ್ಯಾಂತ ಅಲ್ಲದೇ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಕನ್ನಡ ಜಾನಪದ ಒಂದು ವೃತ್ತಿಗಾಯಕ ಸಂಪ್ರದಾಯ. ಇವರಿಗೆ ಈ ಹೆಸರು ಹೇಗೆ ಬಂತು? ಎಂಬ ಸ್ಪಷ್ಟ ಉತ್ತರವಿಲ್ಲ. ಹೆಣ್ಣು ದೇವತೆಯಾದ ಎಲ್ಲಮ್ಮ ತಾಯಿಗೆ ಧೂಪ ಹಾಕುವರು ಧೂಪೇರು ಈ ಶಬ್ದವೇ ಮುಂದೆ ಭೂತೇರ ಆಗಿರಬಹುದೆಂದು ಕ್ಯಾತನಹಳ್ಳಿ ರಾಮಣ್ಣನವರು ತಮ್ಮ ಸಂಪಾದಿತ ಗ್ರಂಥ ಬೀದರ ಜಿಲ್ಲೆಯ ಜನಪದ ಗೀತೆಗಳು ಎಂಬುದರಲ್ಲಿ ಉಲ್ಲೇಖಿಸಿದ್ದಾರೆ.

ಈ ಭೂತೇರು ಐದಾರು ಜನರ ಒಂದು ಮೇಳವನ್ನು ಮಾಡಿಕೊಂಡಿರುತ್ತಾರೆ. ಅವರು ಗಂಡಸರೇ ಇರಬಹುದು. ಇಲ್ಲವೆ ಹೆಂಗಸರೆ ಇರಬಹುದು. ಇಷ್ಟೇ ಜನರು ಇರಬೇಕೆಂಬ ನಿಯಮ ಕೂಡ ಇಲ್ಲ. ಐದು ಜನರಲ್ಲಿ ಒಬ್ಬವನು ತನ್ನ ಶರೀರದ ಮೇಲೆ ಕರಡಿಗೆಯಿಂದ ಕೂಡಿದ ಬಟ್ಟೆ ಧರಿಸುತ್ತಾನೆ. ಕೈಯಲ್ಲಿ ದೀವಟಿಗೆಯನ್ನು ಹಿಡಿದುಕೊಂಡಿರುತ್ತಾನೆ. ಎರಡನೆಯವನು ತಂತಿವಾದ್ಯ ನುಡಿಸುತ್ತಿರುತ್ತಾನೆ. (ಅದಕ್ಕೆ ತುಂತುಣಿ ಎನ್ನುವರು) ಮೂರನೆಯವನು ಚರ್ಮವಾದ್ಯ ನುಡಿಸುವನು. ಇನ್ನಿಬ್ಬರು ಹಸ್ತದಲ್ಲಿ ತಾಳಗಳನ್ನು ಹಿಡಿದುಕೊಂಡು ಭಾರಿಸುವರು. ಉಳಿದ ನಾಲ್ಕು ಜನರ ವೇಷಭೂಷಣ ಎಂದಿನಂತೆ ಸಾಮಾನ್ಯವಾಗಿರುತ್ತದೆ. ಮನೆಯಿಂದ ಮನೆಗೆ ಅಡ್ಯಾಡಿ ಆಯಾ ಮನೆಯವರು ಕೊಟ್ಟಂಥ ದವಸ ದಾನ್ಯಗಳನ್ನು ಪಡೆದುಕೊಳ್ಳುವರು. ತಮ್ಮ ಉಪಜೀವನ ನಡೆಸುತ್ತಿರುತ್ತಾರೆ. ಭೂತೇರ ಹಾಡುಗಳು ಹೆಚ್ಚಾಗಿ ಎಲ್ಲಮ್ಮನನ್ನು ಕುರಿತಾಗಿರುತ್ತವೆ.

ಬಂಜೀಯನೆಂಬುದು ಶಬುದ ಕೇಳ್ಯಾರ ಎಲ್ಲಮ್ಮ
ದುಕ್ಕ ಮಾಡೂತ ಕುಂತಾಳೆಲ್ಲಮ್ಮ
ದುಕ್ಕನೆ ಮಾಡುತ ಕುಂತಾಳೊ ಎಲ್ಲಮ್ಮ
ಚಿಂತಿ ಮಾಡುತ ಎದ್ದಾಳೆಲ್ಲಮ್ಮ
ಚಿಂತೀನಿ ಮಾಡುತ ಎದ್ದು ತಾ ನಡದಾಳ
ತನ್ನ ಮನಿಗೆ ತಾ ಬಂದಾಳೆಲ್ಲಮ್ಮ
ಕುಟ್ಟವರ ಮನಿಗಿ ಕುಟ್ಟಲ್ಲಿ ಹೋದರೆ
ಗೊಡ್ಡಿ ಹೊಂಟಾಳೆಂದು ತಟ್ಟಿ ಮುಟ್ಟಾರೆ
ಬೀಸುವರ ಮನಿಗಿ ಬೀಸಲ್ಲಿ ಹೋದಾರೆ
ಬಂಜಿ ಹೊಂಟಾಳ ಬಾಗಲು ಮುಚ್ಚಾರಿ
ಬಂಜಿಯ ನೆಳ್ಳ ಬಿಳಬ್ಯಾಡದು ಅಂತಾರೆ
ಚಿಂತಿ ಮಾಡುತ ಕುಂತಾಳೆಲ್ಲಮ್ಮ

ಸಮಾಜದಲ್ಲಿ ದೇವರಿರಲ್ಲಿ ದಿಂಡರಿರಲ್ಲಿ ಯಾರೇ ಇರಲಿ ಹೆಣ್ಣಾಗಿ ಹುಟ್ಟ ಮದುವೆ ಮಾಡಿಕೊಂಡು ನಾಲ್ಕು ಮಕ್ಕಳು ಹಡೆದರೆ ಅವಳಿಗೆ ಗೌರವವಿದೆ. ಇಲ್ಲವಾದರೆ ಸರ್ವಜ್ಞನ ವಚನ ನೆನಪಾಗುತ್ತದೆ. "ಬಸುರಾಗದವಳ ಬಾಳುವೆವು ಬೀಸುಗೆಯ ಬೀಸಲು ಕಾದಂತೆ" ಮಕ್ಕಳ ಹಡೆಯದಿದ್ದರೆ ಬೈಗಳು ಸುರುವಾಗಿ ಅವಳನ್ನು ಗೊಡ್ಡಿ (ಬಂಜೆ) ಎನ್ನುವರು. ಇತರೆ ಸಮಾರಂಭಗಳಲ್ಲಿ ಅವಳಿಗೆ ಭಾಗಿಯಾಗಲು ನಿಷಧವಿರುತ್ತದೆ.

ಅಂಗೈಯ ಗರಡಿ ಮುಂಗೈಯ ದೀವಟಿಗೆ
ಅರಮೂರ ಗಂಗಾಧಾರ್‍ಯೆಂಬ ದೀವಟಿಗೆ
ಆರಮೂರ ಗಂಗಾಧಾರ್‍ಯೆಂಬ ತ್ಯೆ ಚೆವರಿಗೆ
ಗಂಗನೆ ಧಾರೆಂಬ ಚೇವಡಿಕೆ ಎಲ್ಲಮ್ಮ ರಂಬಿ ಜೋಗೆಕ್ಕ ತಾ ನಡೆದಾಳ
ನಾಲ್ಕು ಬಾಜಾರ ತಿರಗ್ಯಾಳ
ನೆಲಕ್ಕೂ ಬಾಜರವ ತಿರಗ್ಯಾಡಿ ಎಲ್ಲಮ್ಮ
ಬಾಜರದಾಗ ಮಂದಿ ಏನನತಾರ
ಕೂಸಿನ ಅವದೀರೆ ಮಕ್ಕಳ ಅವದೀರೆ
ಬಂಜಿಯ ನೆಳ್ಳ ಬಿಳುಬ್ಯಾಡದ ಅಂತಾರ

ಈ ಹಾಡಿನಲ್ಲಿ ತಾಯಿ ಎಲ್ಲಮ್ಮನ ಚಿತ್ರಣ ಕಂಡುಬರುತ್ತದೆ. ಅವಳಿಗೆ ಕೊಟ್ಟ ಹಿಂಸೆ ಮುಂತಾದ ಕುರಿತು ಚಿಂತನೆ ವ್ಯಕ್ತಪಡಿಸುವಲ್ಲಿ ಜನಪದ ಕವಿಗಳು ತಮ್ಮ ಪ್ರತಿಭೆ ಅರಳಿಸುವಲ್ಲಿ ಜಾಣರಾಗಿದ್ದಾರೆ.

ಎಲ್ಲಮ್ಮ : ಅಯ್ಯೊಯ್ಯೋ ಶಿವ ಶಿವಾ ಶಂಕರಾ ಇನ್ನೇನು ಗತಿ? ಕುಟ್ಟುವರ ಮನೀಗಿ ಕುಟ್ಟಲು ಹೋದರ ಗೊಡ್ಡಿ ಹೊಂಟಾಳೆಂದು ತಟ್ಟಿ (ಬಾಗಿಲು) ಮುಚ್ಚಿದರು. ಬೀಸುವವರ ಮನಿಗಿ ಬೀಸುವಲ್ಲಿ ಹೋದರ ಬಂಜಿ, ಹೊಂಟಾಳೆಂದು ಬಾಗಿಲನ್ನು ಮುಚ್ಚಿದರು. ಇನ್ನೇನು ಗತಿ ಏನು ಮಾಡಲಿ? ಇವಾಗ ಹಿಂದಕ್ಕೆ ಮನಿಗಿ ಹೋಗುವೇನು. ಮನೆವಳಗೆ ಸೀತವ್ವನ್ನು ಇಲ್ಲ. ನಾನು ಈಗ ನೀರ ಭಾವಿಗೆ ನೀರು ತೆಗೆದುಕೊಂಡು ಬರುವೆನು

"ವಾರೀಗು ನಾರೇರು ನೀರೀಗಿ ಹೋದಾರ
ಬಂಜಿ ಹೊಂಟಾಳ ದಾರಿ ಬಿಡಿರಿ
ಬಂಜಿಯ ಹೊಂಟಾಳೆ ದಾರೀನೆ ಬಿಡರಿ
ಬಂಜಿಯ ನೆಳ್ಳ ಬಿಳಬ್ಯಾಡದು"

ಹೀಗೆ ತಾಯಿ ಎಲ್ಲಮ್ಮ ದೇವತೆಗೆ ಬಂಜಿಯೆಂದು ಕರೆದು ಆಕೆಯ ಮನ ನೋಯಿಸುವಲ್ಲಿ ಸಮಾಜದ ಜನರು ಬಂದುಬಳಗದವರು, ಗೆಳತಿಯರು ಕಾರಣವಾದಂತೆ

ಕಂಡುಬರುತ್ತದೆ. ಹೀಗೆ ಪ್ರಶ್ನೆ ಮತ್ತು ಉತ್ತರ ರೂಪದಲ್ಲಿ ಹಾಡು ಮುಂದುವರೆಯುತ್ತದೆ. ಕೇಳುಗರಾದ ಸಹೃದಯರಲ್ಲಿ ಇನ್ನೂ ಭೂತೇರ ಹಾಡು ಕೇಳಬೇಕೆನಿಸುತ್ತದೆ. ಭೂತೇರು ಹೆಚ್ಚಾಗಿ ಬೀದರ ನಗರದಲ್ಲಿ ಉಳಿದುಕೊಂಡು ತಮ್ಮ ಉಪಜೀವನ ನಡೆಸುತ್ತಿದ್ದಾರೆ.

ಮದುವೆಯ ಹಾಡು

ಮದಿವೆ ಜನಪದ ಸಮಾಜದಲ್ಲಿ ಒಂದು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಒಕ್ಕೂಟ, ಜೀವನಕ್ಕೆ ಪರಿಪೂರ್ಣತೆಯನ್ನೊದಗಿಸುವ ಈ ಸಮಾರಂಭ. ಹಾಡುಗಳ ವಸಂತ ಕಾಲ. ನಿಶ್ಚಯ ಕಾರ್ಯದಿಂದ ಹಿಡಿದು ಬೀಗರನ್ನು ಬೀಳ್ಕೊಡುಗೆವರೆಗೆ ಹೆಜ್ಜೆ ಹೆಜ್ಜೆಗೂ ಹಾಡಿನ ಮೋಡ ಹನಿಯೊಡೆಯುತ್ತದೆ. ಸ್ತ್ರೀಯರ ಜನಪದ ಸಾಹಿತ್ಯ ಜಲಾಶಯದ ಕಟ್ಟೆಯೊಡೆದು ವೈವಿಧ್ಯಪೂರ್ಣ ಹಾಡಿನ ತೊರೆ ಹತ್ತು ದಿಕ್ಕಿಗೆ ಹರಿದುಸೂಸುತ್ತದೆ. ಇಲ್ಲಿ ಜರುಗುತ್ತಲಿರುವ ಒಂದೊಂದು ಘಟನೆಯನ್ನು ಗರತಿಯರು ಸಾಹಿತ್ಯಗೊಳಿಸುತ್ತ ನಡೆಯುವುದರಿಂದ ಮದುವೆಯ ಹಾಡುಗಳು ಒಂದು ಇಡೀ ಮಹಾಕಾವ್ಯದ ಘಟ್ಟಗಳಿಂತೆ ಮುನ್ನಡೆಯುತ್ತವೆ.

ಸರಕ್ಕ ಸುರಿತಲ್ಪ ಸ್ವರೂಪ ತಿಳಿತಲ್ಲ
ಒಂಟಿ ಬರತಾವಂತ ಎಂಟ ಬಣವಿಕೊಂಡೆ
ಬಂಡಿಲ್ಲಿ ನಿಮ್ಮ ತಳವೆಲ್ಲ; ಬೀಗಾ
ಕುಂಟೆತ್ತಿನ ಮ್ಯಾಲ ಬರತಾನ ಸರಕ್ಕ
ಬಂದ ಅಡಕಿ ಒಡದು ಒಂಬತ್ತು ಮದಿವಿ ಮಾಡಿ
ಇಂದಿನ ಖರ್ಚು ಬಲು ಖರ್ಚು: ಬೀಗಾ
ಕಂಬಂದ ಲೆಕ್ಕ ಬಿಡುವಲ್ಲ: ಸರಕ್ಕ

ಈ ಬಗೆಯಲ್ಲಿ ಕೇವಲ ವಿನೋದವೇ ಹೊರತು ಟೀಕೆಯಲ್ಲ. ಮೊದಲು ಪರಿಚಯದಲ್ಲಿ ಸಲುಗೆಯ ಸತ್ತೆ ನಡೆಸುವ ಪರಿಚಯಿದ್ದು ಹಸೆಹೊಯ್ಯುವ ಹಾಡು ಸುರ್ಯೋದಯಕ್ಕೆ ಮುಂಚೆ ನಾಲ್ಕು ಸಲ ಹಸೆಹೊಯ್ಯ ಬೇಕಾಗುತ್ತದೆ. ಆಗ ಬಳಸುವ ನಾಲ್ಕು ವಿವಿಧ ಧಾನ್ಯಗಳು ಹೆಸರುಗೊಂಡು ಪದ್ಯಗಳನ್ನು ಹಾಡುತ್ತಾರೆ.

ಜೋಳದಾಸಿ ಹೊಯ್ಯರೇ ಹೋಳ ಕಟ್ಟಾದಿಗಳಿರ್ಯಾ
ಶೆಟ್ಯಾರ ಮಗನ ಎಡ್ಡೆ ಅರಸಿಣದ
ಹೊತ್ತದಾವ ಹಸೆಯ ಹೊಯರೆವ್ವ: ಸೋ . . .

ಮೇಲ್ಕಂಡ ಎರಡು ತರಹ ವಿಧಿ ವಿಧಾನಗಳಲ್ಲಿ ಹಸೆಹೊಯ್ಯುತ್ತಾ ಹಾಡು ಹೇಳುವುದುಂಟು.

ಮದುವೆ ಸಂದರ್ಭದಲ್ಲಿ ಹತ್ತಾರು ಪ್ರಕಾರದ ಹಾಡುಗಳು ಸಮಯಕ್ಕೆ ಔಚಿತ್ಯವಾಗಿ ಹಾಡುವ ಸಂಪ್ರದಾಯ ಇದೆ. ಉಡಿ ತುಂಬುವ ಹಾಡು, ನೈನ ಎರಿಸುವ ಹಾಡು, ಐರಾಣಿ ಹಾಡು, ಬಾಷಿಂಗ ಹಾಡು, ಮಂಗಳಸೂತ್ರ ಹಾಡು, ಸಂಡಿಗೆ ಕರಿಯುವ ಹಾಡು, ಹಂದರದ ಹಾಡುಗಳು, ಧಾರೆ ಎರೆಯುವ ಹಾಡು, ಅಡಕಿ ಆಡುವ ಹಾಡು, ಹೆಣ್ಣು ಒಪ್ಪಿಸುವ ಹಾಡು,

ಹೀಗೆ ಹಲವು ಹಾಡುಗಳ ಹಾಡಿ, ಮದುವೆಗೆ ಸಂಬಂಧಿಸಿದ ಸಂಸ್ಕಾರಗಳೆಲ್ಲ ಮುಗಿಸಿ ಮದುವೆ ಕಾರ್ಯಕ್ರಮ ಮಂಗಲಗೊಳಿಸುತ್ತಾರೆ.

ಹೆಣ್ಣ ಬೇಡಲಿ ಹ್ವಾದ್ರ: ಹೆಣ್ಣೇನು ಮಾಡತಿರಲೆ
ಹೆಣ್ಣೆ ಹಾಲಬಾನ ಉಣತಿರಲೆ: ಹೆಣ್ಣಿ ತಾಯಿ
ಉಮ್ಮಾಯದ ನಗೆಯ ನಗತಿರಲೋ
ವರಸುದ್ದನಿದ್ದರ ಕುಲಚೊಕ್ಕನಿದ್ದರ
ಫಣಿ ಸಾಲಿಗಿ ಸುದ್ದ ಮಕಸದ್ದ : ನಿದ್ದರ
ಕುಡಹೋಗ್ರಿ ನಮ್ಮ ಮಗಳನ್ನು
ಶುಕ್ರವಾರ ದಿನ ಸೂರ್ಯ ಉದಯಾದಂಗ
ಇಂದ ನಮ್ಮಳಿಯ ಉದಯಾದ ಹಡೆದವ್ವ
ಶಾವಿಗಿ ಸಯ್ದಾನ ಹದಮಾಡ
ಕಡಲಿಯ ಕಾಳ್ದಂಗ ಕಟದ ಮುತ್ತಿಟ್ಟಾನ
ಹಡದವ್ವ ನೋಡ ಅಳಿಯನಿಗೆ: ಚೆಲುವಿಕೆ
ದೊಡ್ಡವರಿಗೆ ತನ್ನ ಅಳಿಯನ

ಈ ಬಗೆಯಲ್ಲಿ ಹಾಡು ಹಾಡಿ ಆರತಿ ಬೆಳಗುತ್ತಾರೆ. ಎರಡು ಮನೆತನಗಳಿಗೆ ಶೇಯಸ್ಸು ಕೋರಿಕೆ ಆದರ್ಶ ವಧುವರರ ಗುಣರೂಪ–ನಿರೂಪಣೆ ಈ ಹಾಡುಗಳ ವಸ್ತುವಾಗಿರುತ್ತದೆ.

ಇದಾದ ನಂತರ ಕೆಲವು ಸಮಾರಂಭಗಳು ನಡೆಯುತ್ತಾವಾದರೂ, ಅಂಥ ಸಮಯದಲ್ಲಿ ಹಾಡು ಹೇಳುವ ಪದ್ಧತಿ ಬಳಕೆಯಲಿಲ್ಲಾ. ಆದರೆ ಸೋಬಾನೆ ಮಾಡುವಾಗ ಮಾತ್ರ ಸೋಬಾನೆ ಹಾಡುಗಳು ಹಾಡುವರು. ಮದಿವೆ ಜೀವನದಲ್ಲಿ ಪವಿತ್ರತೆ ಪಡೆದರೂ ಹಾಡಿನಲ್ಲಿ ನೀತಿಯತೆ ತುಂಬಿ ತುಳಕಿ ಅವರವರ ಬಾಳು ಹಸಿರಾಗಿಸಲು ಮದಿವೆ ಹಾಡುಗಳು ನವದಂಪತಿಗಳಿಗೆ ಪ್ರೇರಣೆ ಕೊಡುವಲ್ಲಿ ತುಂಬಾ ಮಹತ್ವದ ಸ್ಥಾನ ಪಡೆದುಕೊಂಡಿವೆ.

ಕೋಲಾಟದ ಹಾಡು

ಕೋಲಾಟ ಒಂದು ಜನಪದ ಕಲೆ. ಕೋಲಾಟ ಸಂದರ್ಭದಲ್ಲಿ ಹಾಡುವ ಪದಗಳು ಕೋಲು ಪದಗಳು. ಪಲ್ಲವಿ, ಚರಣ, ಅನುಪಲ್ಲವಿಗಳಿಂದ ಆರಂಭವಾಗುವ ಇವುಗಳಲ್ಲಿ ವೈವಿಧ್ಯತೆ ಇವೆ. ಪ್ರಾಸ, ರಾಗ, ಧಾಟಿ, ಇತ್ಯಾದಿ ಇಲ್ಲಿ ಪ್ರಾಶಸ್ತ್ಯ, ಕೋಲಾಟವಾಡುವಾಗ ದಮಡಿ ಬಾರಿಸುವರು ಹಾಡನ್ನು ಆರಂಭಸಿ ಮುಮ್ಮೇಳಕ್ಕೆ ಚಾಲನೆ ಕೊಡುವರು. ಅವನ್ನನುಸರಿಸಿ ಕೋಲಾಟದ ತಂದವರು ಹಿಮ್ಮೇಳವನ್ನು ಹಾಡುತ್ತಾ ಕೋಲು ಹಾಕುವರು. ನಮ್ಮ ಬೀದರಿನಲ್ಲಿ ಹೆಚ್ಚಾಗಿ ಯುಗಾದಿ ಹೋಳಿಹಬ್ಬ, ಸಂದರ್ಭದಲ್ಲಿ ಕೋಲಾಟವಾಡುವರು. ಸಾಹಿತ್ಯ ಸಂಗೀತಗಳನ್ನೊಳಗೊಂಡ ಈ ಕಲೆ ತುಂಬ ಆಕರ್ಷಕ ನೃತ್ಯವಾಗಿದೆ.

ಕಲಾವಿದರು ಪೌರಾಣಿಕ ನಾಟಕಗಳಲ್ಲಿನ ಪಾತ್ರಗಳ ವೇಷ ಭೂಷಣಗಳನ್ನು ಹಾಕುತ್ತಾರೆ. ರಾಧ–ಕೃಷ್ಣ, ರಾಮ–ಸೀತೆ ಪಾರ್ವತಿ–ಶಿವ, ಹನುಮಾನ–ಲಕ್ಷ್ಮಣ, ಗೋಸಾಯಿ ಆಧುನಿಕ ಬಗೆಯ ವೇಷ ಭೂಷಣಗಳಾದ ಲಂಬಾಣಿ, ಪೀರಪ್ಯಾಂಟ ಧರಿಸಿ ಕಣ್ಣಿಗೆ ಕಪ್ಪು ಕನ್ನಡಕ ಹಾಕುವ ಯುವಕ–ಯುವತಿಯರ ಇತ್ಯಾದಿ ಪಾತ್ರಗಳನ್ನು ಹಾಕುವರು. ಆಯಾ ಪಾತ್ರಗಳಿಗೆ ಹೋಲುವ ಎಲ್ಲಾ ಧರಿಸಿಕೊಳ್ಳುವರು. ಕಲಾವಿದರು ಒಂದೇ ಕೋಲನ್ನು ಮಾತ್ರ ಬಳಸುತ್ತಾರೆ. ಕೋಲು ಒಂದೂವರೆ ಅಡಿ ಉದ್ದವಾಗಿದ್ದು ಹಿಡಿಯಲು ಅನುಕೂಲವಾಗುವಂತೆ, ಕೆತ್ತಿ ನಯವಾಗಿರುವಂತೆ ಮಾಡಿಕೊಂಡಿರುತ್ತಾರೆ. ವೃತ್ತಕಾರವಾಗಿ ಪಾತ್ರಗಳಿಗನುಗುಣವಾಗಿ ರಾಮ ಪಾತ್ರಧಾರಿಯ ಪಕ್ಕದಲ್ಲಿ ರಾಧೆ, ಶಿವನ ಪಕ್ಕದಲ್ಲಿ ಪಾರ್ವತಿ ಹೀಗೆ ಜೋಡಿಯಾಗಿ ನಿಲ್ಲುತ್ತಾರೆ. ಕೋಲನ್ನು ಬಲಗೈಲಿ ಹಿಡಿಯತ್ತಾರೆ.

ಒಬ್ಬೊಬ್ಬ ಕಲಾವಿದ ಒಂದೊಂದು ಸ್ಥಳದಲ್ಲಿ ನಿಲ್ಲುತ್ತಾರೆ. ಒಬ್ಬ ಕಲಾವಿದ ನಿಲ್ಲು ಸ್ಥಳಕ್ಕೆ ‘‘ಖಾನೆ’’ ಎನ್ನುವರು ಕಲಾವಿದರ ಮಧ್ಯಭಾಗದಲ್ಲಿ ತಬಲ, ಪೇಟೆ, ತಾಳ ಹಿಡಿದು ವಾದ್ಯಗಳನ್ನು ಭಾರಿಸುತ್ತಿರುತ್ತಾರೆ. ಬೇರೆ ಕಡೆಗಳಲ್ಲಿರುವಂತೆ ಬೀದರ ತಾಲ್ಲೂಕಿನಲ್ಲಿ ಕೂಡ ಹತ್ತಾರು ಕೋಲಾಟ ಪ್ರಕಾರಗಳಿವೆ. ಗಣೇಶಸ್ತುತಿ ಕೋಲು, ಮೂರುಮನೆ, ಒಂಬತ್ತು ಮನೆ, ಏಳು ಚಿಟಕಿ, ಎಂಟು ಚಿಟಕಿ, ಬಾರಕೆಂಮ, ಚೌದಾಕೊಪ್ಪ, ಹೊರಗೋಲು ಒಳಗೋಲು ಇತ್ಯಾದಿ ಕೋಲಾಟ ಪ್ರಾರಂಭದಲ್ಲಿ ಕೆಳಗಿನ ಹಾಡು ಸಾಮಾನ್ಯ.

ಶರಣು ಶರಣು ಶರಣು ನಿಮಗೆ ಗಣನಾಥ
ನಿಮ್ಮ ಶರಣಕಮಲ ಭಜಿಸುವೆ ಗಣನಾಥ
ಕರಡಿ ಪತ್ತರಿ ಕಮಳದೂವ ಗಣನಾಥ
ತಂದು ಚರಣದಲ್ಲಿ ಅರ್ಪಿಸುವೆ ಗಣನಾಥ

ತಂದು ಚರಣದಲ್ಲಿ ಅರ್ಪಿಸುವೆನು ಗಣನಾಥ
ಹಸುರದಾಗಿ ಹಾಲಗಡಗ ಗಣನಾಥ
ಒಳೆ ಕುಶಳದ ಲೊಲಕಿಟ್ಟು ಗಣನಾಥ
ಶರಣು ಶರಣು ಶರಣು ನಿಮಗೆ ಗಣನಾಥ

ತಮ್ಮ ಕೇಳೋ ಲಕ್ಷ್ಮಣ ತಿಳಿಸುವೆ ಮಾತಿನ ಮರ್ಮ
ಅಣ್ಣ ಪೇಳೊ ಅಗ್ರಜ ಆತ್ಮದಲ್ಲಿ ಸಂಪೂರ್ಣ
ಮಾತಾಪಿತರರು ಮಾಡ್ಯರೋ ನೇಮ ಹೋಗುವರು
ಕಾಯಕಾಮ ಹದಿನಾಲ್ಕು ವರುಷ ಆರ್‍ಯಾವಾಸ
ಇದು ವಿರುವಾದೊ ಹಿಂದಿನ ದೋಷ
ಭಾಡಂದ ಸೀತಮ್ಮ ನಾನ ಹೇಲಿದರ ಕೇಳಲಿಲ್ಲ ನೀನ
ಅಡವಿಯದೊಳು ಸೀತಮ್ಮ ನಾನ ಹೇಳಿದರ ಕೇಳಲಿಲ್ಲ ನೀನ ಮೈದುನರಾಯ ಮುಗಿವೆನು ಕೈಯ ನಡಯಲಾಗದಯ್ಯ ಎನಗ ನಡಿಯಲಾಗದಯ್ಯ.

ಮಾಯಾದ ಮಿರಗಿದು ಮೋಸ ಮಾಡುವದು
ಇಸುವಾಗ ಇಲ್ಲಿ ಎನಗಾರ: ಘಾಸಿಯನು
ಮಾಡುವದು ಈ ಮಿರುಗಾರ
ಲಂಕಪಟ್ಟಣದ ರಾವಳನಾನೆ
ಸೀತನ ಪತಾಕ ಬಂದಿದನು
ಲಕ್ಷ್ಮಣ ಒಬ್ಬನ ಉಳಿದಿದನು
ಮತ್ತೊಂದು ಯೌಚಣಿ ಮಾಡಿದಿನಿ

ಕೋಲಾಟದ ಹಾಡುಗಳಲ್ಲಿ ಹಾಸ್ಯ, ಭಕ್ತಿ, ಪ್ರೇಮದ ನಾನಾ ರೂಪದ ಸಹಜ ನಿರೂಪಣೆ ಇದೆ. ತೀರ ಸಾಮಾನ್ಯರಾದ ಗಂಡು-ಹೆಣ್ಣುಗಳ ಸ್ನೇಹ, ವಿಶ್ವಾಸ, ಪ್ರೇಮ, ವಿರಹಗಳು ಇಲ್ಲಿ ಹಾಡಿನ ರೂಪ ಪಡೆದಿವೆ. ಕೋಲಾಟ ಮುಗಿವವರೆಗೆ ಕೋಲು ಪದಗಳು ಮುಂದುವರೆಯುತ್ತವೆ. ಆಟದ ಪ್ರಾರಂಭಕ್ಕೂ ಮತ್ತು ಮುಕ್ತಾಯಕ್ಕೂ ನಿಗದಿಯಾದ ಹಾಡುಗಳನ್ನು ಹೇಳುವದು ಸಂಪ್ರದಾಯ. "ಧಿಂ ತಕು" ಮುಂತಾದವುಗಳನ್ನು ಹೇಳಿ ಹಾಡನ್ನುಮುಗಿಸುವುದರೊಡನೆ ಅದಕ್ಕೆ ಸಂಬಂಧಿಸಿದ ಕೋಲಾಟದ ವಿಧವೂ ಮಂಗಲಗೊಳ್ಳುತ್ತದೆ. ಬೀದರ ತಾಲ್ಲೂಕಿನಲ್ಲಿ ಮತ್ತು ಜಿಲ್ಲೆಯಲ್ಲಿ ಗಂಡುಮೆಟ್ಟಿದ ಕಲೆಯೆಂದರೆ ಕೋಲಾಟ ಎನ್ನುವಲ್ಲಿ ಅತಿಶಯೋಕ್ತಿ ಎನಿಸದು.

ಮೊಹರಂ ಹಾಡು

ಧರಮಾಕ ಸತ್ತವರ ಸಿಗತಾರ ಕೋಟಿಗೆಲ್ಲಾ ಜನರಾ. . . . ಮುಸಲಮಾನ ಮಂದ್ಯಾಗ ದೋರೀತಾರ ಹಸರ–ಹುಸೇನ ಸಾಹೇಬರಾ . . . .

ಇಮಾಮ ಕಾಸೀಮ ಧಲಾ ಅತ ಮ್ಯಾಗ
ಮಣ್ಣದಾನು ಕೇವಲ
ಲಗ್ನದಸನಕೂಲ
ನಡಸ್ಯಾರ ಅನಕೂಲ
ಜೀತ ಅದ್ವಲ
ಪತ್ರ ಬರೆದಾರಲಿ
ಬಂದು ಮುಟ್ಟಿತೆಗಿ ಮಿಸಲ
ಓದಿಕೊಂಡರೆಲ್ಲ
ವಂದರಸಲ ಲಢೈಗೆ ಬರ್‍ರೆಲ್ಲ
ಸ್ವಾಮಿ ತಿಳಿದಾರೆಲ್ಲ ಹಾ
ಬಂತೊ ನಮದು ಹಂತಕಾಲ
ಭೂಮಿಮ್ಯಾಲ ನಿಂದ್ರಣಿಲ್ಲ
ಅರಶಿಣ ಮೈಯಲ್ಲ
ಕಂಕಣ ದರಸೇರ ವಿಳಸಣಿಲ್ಲ;

ಹಸನ ಹುಸೇನಿ ಸಭೆದಾಗ
ಪಗಡ್ಯಾಡುತ ಕುಂತಾರೊ ಬೇಗ. . . .
ಪಗಡಿಯ ನಾಡುತ ಜಗಳವ ಬಂದೀತ
ಸಾಲಿ ಹುಡುಗರು ಬೈತಾರೊ ಹೀಂಗ. . . .
ತಂದಿನಿಲ್ಲದ ಹುಟ್ಟೀದೋ ನೀನ. . . .

ಬಡ ಬಡ ಮೋಹಿನ ತಾಯಿನಲ್ಲಿಗೆ ಬಂದಾನ . . . .
ನಮ್ಮ ತಂದಿ ಎಲ್ಯಾನ ತೋರಿಸಿನ್ನ . . . .
ತಾಯಿ ಮ್ಯಾಲ ತಲ್ವಾಕ ಮ್ಯಾನ ಅನ್ನ. . . .
ನಿಮ್ಮ ತಂದಿ ಇರುವ ಸ್ಥಳವು ದೂರ . . .
ಮಕ್ಕ ಮೋದಿನದಲ್ಲಿ ಇರುತಾನ . . . .

ಬುತ್ತಿಯ ಕಟ್ಟೆಂದು ಕುದರಿಯ ಕುಣಿಂದ . . .
ಮಕ್ಕ ಮೋದೀನ ದಾಟ್ಯಾನ . . .
ನಮ್ಮ ತಾಯಿ ಹೇಳಿದ ಮಾತು ಮರೆತೇನ . . .
ಅಲ್ಲಿ ಹಾವುಗಳ ಇಳಿಸುತ ನಿಂತೇನ . . .
ದೇಶಕ್ಕ ದಿಕ್ಕಾದ ವಾಸುಳ್ಳ ನಾವದಗೇರಿ
ಈಗ ಕಾಡಿವೇರನ ಮುಂದ. . . .
ವರಸ ಆಗ್ತೋದು ಮೋರಾಮ ಚಂದ. . . .

ಎಂದು ಹಾಡು ಹಾಡುವರು ಮೊಹರಂ ಮುಸ್ಲಿಮರ ಹಬ್ಬ ಆದರೂ ಹಿಂದೂ ಮತ್ತು ಮುಸ್ಲಿಂರು, ಇತರ ಧರ್ಮದವರು ಕೂಡ ಹಬ್ಬವನ್ನು ಆಚರಿಸುವ ಪರಂಪರೆ ಬೆಳೆಸಿಕೊಂಡು ಬಂದಿದೆ. ಒಟ್ಟಿನಲ್ಲಿ ಮೊಹರಂ ಹಬ್ಬ ಹಿಂದು–ಮುಸ್ಲಿಂಮರಲ್ಲಿ ಐಕ್ಯತೆಯ ಗುರುತು ಎನ್ನಬಹುದು. ಹಬ್ಬದ ಸಮಯದಲ್ಲಿ ಹಾಡುವ ಹಾಡುಗಳೇ ಮೊಹರಂ ಹಾಡುಗಳು ಎನ್ನುವರು. ಈ ಹಬ್ಬದ ಆಚರಣೆಯ ಕಥೆ ಹೀಗಿದೆ. ಪ್ರವಾದಿ ಮಹಮ್ಮದನ ಕ್ರಿ.ಪೂ. ೬೨೨ರಲ್ಲಿ ತನ್ನ ವಾಸಸಥಾನವನ್ನು ಮೆಕ್ಕಾದಿಂದ ಮದೀನಕ್ಕೆ ವರ್ಗಾಯಿಸಿದ ಹೀಗೆ ವರ್ಗಾಯಿಸಲು ತೆಗೆದುಕೊಂಡು ಕಾಲವನ್ನು ಹಿಜಿರಾ ಎಂಬುದಾಗಿ ಕರೆಯುತ್ತಾರೆ. ಮೊಹರಂ ಹಬ್ಬದ ಮೂಲ ಹೆಸರು "ಹಷುರಾ" ಈ ದಿನ ಮೊಹರಂ ತಿಂಗಳಿನ ಹತ್ತನೆಯ ದಿನವಾಗಿದ್ದು ಹಿಜಿರಾ ತಿಂಗಳಿನ ಮೊದಲ ಶುಭದಿನವಾಗಿರುತ್ತದೆ.

ವಿಶ್ವದ ಧರ್ಮ ಕಾರ್ಯ ಅಂದೇ ಮಹಿಮಾವಂತ ಮುಸ್ಲಿಂ ಗುರುಗಳಿಂದ ಪ್ರಾರಂಭಿಸಲ್ಪಟ್ಟಿತು. ಗುರುಗಳು ಹೇಳಿದ ಸನ್ಮಾರ್ಗದಲ್ಲಿ ನಡೆಯುವುದು ಮುಸ್ಲಿಮರ ಕರ್ತವ್ಯ ದುರ್ದೈವದಿಂದ ಮಹಮ್ಮದನ ಮಗಳ ಮಗನಾದ ಹುಸೇನ ಮತ್ತು ಆತನ ಮಕ್ಕಳೂ ಆಪ್ತ ವಾದವರೂ ಕರ್ಬಲ ಎಂಬ ಭಾಗದಲ್ಲಿ ಅವರ ವಿರೋಧಿ ಗುಂಪಾದ ಯಾಜೀದ ತಂಡದವರಿಂದ ಅಮಾನುಷರಾಗಿ ಮೋಸದಿಂದ ಕೊಲ್ಲಲು ಪಡುತ್ತಾನೆ. ಈ ಪುಣ್ಯದಿನವನ್ನು ಹುತಾತ್ಮ ಹುಸೇನ ಆತ್ಮಶಾಂತಿಗಾಗಿ ಉಪವಾಸ ದಿನವಾಗಿ ಆಚರಿಸುತ್ತಾರೆ.

ಮೊಹರಂ ಹಬ್ಬ ತಲೆಯಿಂದ ತಲೆಗೆ ಮುಸ್ಲಿಂರ ಹಬ್ಬವಾದರೂ, ಆಚರಣೆಯಿಂದ ಸಾವರ್ಜನಿಕರ ಹಬ್ಬವಾಗಿದೆ. ಹಬ್ಬದ ದಿವಸ ಹಿಂದುಗಳು ಮತ್ತು ಮುಸ್ಲಿಂಮರು ಕೂಡಿಕೊಂಡು ಒಂದು ಮೂಲದಿ ಮಾಡುವರು. ಸಂತೋಷ ಕೂಟದಲ್ಲಿ ದುಃಖದಲ್ಲಿ ಇರುವರು ಅಲ್ಲದೆ, ಮೊಹರಂ ಕೂಡ ಕಕುಣಿಯುತ್ತಾ; ಹಾಡುತ್ತಾ ಆ ದಿನವನ್ನು ಕಳೆವರು. ಮೊಹರಂ ಹಾಡುಗಳಿಗೆ ಅಲಾವಿ ಹಾಡುಗಳೆಂದು ಹೆಸರು. ವೃತ್ತಾಕಾರ ಸ್ಥಳಕ್ಕೆ ವೃತ್ತಾಕಾರವಾಗಿ ನಿಂತು ಹಾಡು ಹೇಳುವರು. ಇದಕ್ಕೆ ಅಲಾವಿ ಹಾಡುಗಳೆಂದು ಕರೆಯುತ್ತಾರೆ. ಒಟ್ಟಿನಲ್ಲಿ ಮೊಹರಂ ಹಬ್ಬದ ಸಂತೋಷ ಕೂಟವಾದರೂ, ಹಾಡುಗಳು ಮಾತ್ರ ಸಂಪೂರ್ಣ ಶೋಕದ ಪ್ರತೀಕವಾಗಿದೆ ಎನ್ನಬಹುದು.

ಭಜನೆ ಹಾಡು

ದೇವರನ್ನು ಸ್ತುತಿ ಮಾಡುವುದೆಲ್ಲ ಭಜನೆ ಎಂದಾರ್ಥವಾಗುತ್ತದೆ. ಭಜನೆ ದೈವೀ ಉಪಾಸನೆಯ ಮಹತ್ವದ ಸಾಧನೆಗಳಲ್ಲಿ ಒಂದು. ಸೇವತ್ವವನ್ನು ನಂಬಿದ ಎಲ್ಲ ಮತೀಯರೂ ಭಜನೆಯನ್ನು ರೂಢಿಸಿಕೊಂಡಿದ್ದಾರೆ. ಭರಾಟೆಯಿಂದ ಭಜನೆ ಮಾಡುವರು. ಅದಲ್ಲದೆ ಪ್ರತಿ ಶನಿವಾರ ಹನುಮಾನ ಮಂದಿರಗಳಲ್ಲಿ ನಡೆದರೆ ಪ್ರತಿ ಸೋಮುವಾರ ಇತರ ಮಠ–ಪವಿತ್ರ ತೀಥ ಕ್ಷೇತ್ರಗಳಲ್ಲಿ ಭಜನೆ ಮಾಡುವರು. ಶಿವರಾತ್ರಿಯೆಂದು ಒಂದು ರಾತ್ರಿಯ ಮಟ್ಟಿಗೆ ನಡೆಯುವ ಭಜನೆ ಶ್ರಾವಣ ಮಾಸದಲ್ಲಿ ಒಂದು ತಿಂಗಳ ಪರ್ಯಂತ ಸಾಗುತ್ತದೆ. ಇದಕ್ಕೆ ಬೇಕಾಗುವ ವಾದ್ಯಗಳೆಂದರೆ

೧) ಏಕದಾರಿ
೨) ದಮ್ಮಡಿ
೩) ತಾಳ
೪) ತಬಲಾ
೫) ಜಾಗಟೆ
೬) ಹಾರ್ಮೋನಿಯಂ ಇತ್ಯಾದಿ ವಾದ್ಯಗಳು ಭಜನೆಯ ಸಮಯದಲ್ಲಿ ನುಡಿಸುವರು. ಭಜನೆ ಮೇಳದಲ್ಲಿ ಸಾಮಾನ್ಯವಾಗಿ ಹಾಡುಗಾರರು ನಾಲ್ಕೈದು ಜನರು. ಉಳಿದವರು ಶ್ರೋತೃಗಳು, ಹಾಡುಗಳು ಹಾಡುತ್ತಾರೆ. ತಾಯಿಯ ತವರ ಮನೆಯೊಂದು ಕುರಿತ ಕೆಳಕಂಡ ಭಜನೆ ಪದ ಬೀದರಿನಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದಿದೆ.

ತವರು ಮನೆನೋಡ ಬಂದೆ
ತಾಯಿ ನೆನಪಿಗಾಗಿ ಕಣ್ಣೀರ ತಂದೆ: ಪಲ್ಲ:
ಹತ್ತು ಹದಿನಾರು ವರುಷಗಳಲ್ಲಿ
ಹೆತ್ತ ತಾಯಿ–ತಂದೆ ಪ್ರೀತಿಯಲ್ಲಿ
ಮುತ್ತಿನಂತೆ ಜೋಪಾನವಾಗಿ ಬೆಳೆದೆ
ಎತ್ತೋ ಅದು ತಾನೆ ಕನಸಾಗಿ ಹೋಗಿದೆ:

ಎನ್ನುವ ಮೇಲಿನ ಹಾಡಿನಲ್ಲಿ ಮಗಳಾದವಳು ತನ್ನ ತವರ ಮನೆ ಮತ್ತು ಹೆತ್ತ ತಂದೆ ತಾಯಿಗೆ ಕುರಿತು ತನ್ನ ದುಃಖವನ್ನು ವ್ಯಕ್ತಪಡಿಸುವಲ್ಲಿ ಯಶಸ್ವಿಯಾಗಿದ್ದಾಳೆ. ಮದಿವೆ ಮುಗಿದು ಗಂಡನ ಮನೆಗೆ ಪ್ರವೇಶ ಪಡೆದರೆ ಆಯಿತು ನಂತರ ತನ್ನ ತವರ ಮನೆಗೆ ಹೋದಾಗ ಅಲ್ಲಿ ಯಾವ ರೀತಿಯಾಗಿ ವರ್ತಿಸುತ್ತಾರೆ. ಎನ್ನುವ ಬಗೆಯಲ್ಲಿ ಗರತಿಯಾದವಳು ತವರ ಮನೆಯೆನ್ನುವದು ಬರೀ ಕನಸು ಎನ್ನುವಳು.

ಈ ಬಾಗಿಲದ ಮುಂದೆ ರಂಗವಲ್ಲಿ
ಬಾಗಿ ಹಾಕುತ್ತಿದ್ದೆ ನಾನಾ ತರದಲ್ಲಿ
ಹೀಗೆ ಮರೆಯಲಿ ಈ ಮನಸಿನಲ್ಲಿ
ಮಾಸಿ ಹೋಗದು ಅದು ಬಾಳಿನಲ್ಲಿ
ಅತ್ತೆ-ಮಾವರ ಕಾಟದಲ್ಲಿ ಬಳಲಿ
ಬೇಸತ್ತು ಬಂದೆನು ಏನು ಹೇಳಲಿ
ಸತ್ತ ತಾಯಿಯನ್ನು ನಾನೆಂತು ಮರೆಯಲಿ
ಅತ್ತು ಕರೆದು ಮುಳಿಗೆದ್ದೆ ಕಣ್ಣೀರಲಿ

ಗರತಿ ತಾನು ಮದುವೆಯಾಗುವ ಪೂರ್ವದಲ್ಲಿ ಕಟ್ಟಿದ ಮನೆಯ ಮುಂದೆ ತರತರಹದ ರಂಗವಲ್ಲಿ ಹಾಕುತ್ತಿದೆ. ತಂದೆ ತಾಯಿಗಳು ಇರದ ಸಮಯದಲ್ಲಿ ಅಣ್ಣನ ಹೆಂಡರು ತವರ ಮನೆಗೆ ಹೋದಾಗ ಒಂದು ಲೋಟ ನೀರು ಸಹ ಕೊಡದೆ ಹೋದಾಗ ಗರತಿ ಹಿಂದಿನ ನೆನಪುಗಳೆಲ್ಲಾ ತರುವಲ್ಲಿ ಇಂದಿನ ಸ್ತ್ರೀಯರಿಗೆ ಮಾದರಿಯಾಗಿದ್ದಾಳೆ.

ತಾಯಿಯಿಲ್ಲದ ತವರು ಮನಿಗೆ
ಹಾಯ ಬರಬಾರದು ಎಂದಿಂದೀ ದಾರಿಗೆ
ತಾಯಿಯಿದ್ದರೆ ಸಂಪತ್ತು ಹೆಣ್ಣಿಗೆ
ಮಾಯವಾಗುವದು ಮನಸಿನ ಬೇಗ
ನಮ್ಮ ಅಣ್ಣನ ಹೆಂಡತಿ ಖೋಡಿ
ಕಣ್ಣಸನ್ನೆ ಮಾಡೆಳೆನ್ನ ನೋಡಿ
ಅಣ್ಣ ಮಾತಾಡಿದೆ ಒಳಗೆ ಓಡಿದ
ತನ್ನ ಸಿರಿಯಲ್ಲಿ ತಾನೆ ತಾ ಕೂಡಿದ

ಶ್ರೀಮಂತಿಕೆ, ಹೆಂಡತಿ, ಮಾವನವರು, ತನ್ನ ತಂಗಿಗಿಂತಲೂ ಹೆಚ್ಚಾಗುತ್ತಾಳೆ. ತನ್ನ ತಂಗಿಗೆ ಮರೆತು ತಮ್ಮ ಆನಂದದಲ್ಲಿ ತಾವು ನಲಿದಾಡುವರು. ಎಂದಾದರೂ ಅಣ್ಣನ ಮನೆಗೆ ಹೋದಾಗ ಅಣ್ಣನ ಹೆಂಡತಿ ಅಣ್ಣನಿಗೆ ಕಣ್ಣಸನ್ನೆ ಮಾಡಿ ಅವಳಿಗೆ ಮನೆಗೆ ಕರೆಯಬೇಡಿ ಎಂದಾಗ ಅಣ್ಣ ಹೆಂಡತಿ ಮಾತಿಗೆ ಸನ್ನೆಗೆ ಮರುಳಾಗಿ ಮನೆಗೆ ಬಂದ ತಂಗಿಗೆ ಮಾನಭಂಗ (ಅವಮಾನ) ಮಾಡುವಲ್ಲಿ ಯಶಸ್ವಿಯಾಗಿದ್ದಾನೆ.

ನಮ್ಮ ಅತ್ತಿಗೆಯ ಕೈಬೊಂಬೆ ಅಣ್ಣ ತಾ
ಎತ್ತಿ ಆಡಿಸಿದ ತಂಗಿಯ ಮರೆತ
ಕತ್ತು ಮೇಲೆತ್ತಿ ಸ್ವಲ್ಪ ತಾ ನೋಡದೆ
ಇತ್ತ ಬಾರಮ್ಮ ತಂಗಿ ಎನಬಾರದೆ

ಹುಟ್ಟಿ ಬೆಳೆದೆನ್ನ ಮನೆಯ ಬಾಗಿಲಿಗೆ
ಕೈಮುಟ್ಟಿ ಶರಣೆಂಬೆ ಎಂದೆಂದಿಗೆ
ಎಷ್ಟು ಕಷ್ಟವು ಇರಲಮ್ಮ ನಮಗೆ
ಕೊಟ್ಟ ಗಂಡನ ಮನಿಶ್ರೇಷ್ಠ ನಾರಿಗೆ

ಎಷ್ಟೇ ತವರು ಮನೆ ಶ್ರೀಮಂತಿಕೆಯಿಂದ ಕೂಡಿದರೂ ಕೊನೆಗೂ ಗಂಡನ ಮನೆಯ ಶ್ರೇಷ್ಠ ಏಕೆಂದರೆ ಬಡವ-ಬಲ್ಲಿದನಿದ್ದರೂ ಅವನೇ ನನಗೆ ಸರ್ವಸ್ವ ಎನ್ನುವಳು.

ಶಿವನ ಕೈಮುಗಿದು ಬೇಡುವೆನು
ತವರ ಮನಿ ಸಿರಿಯ ಬೆಳೆದು ನಮ್ಮಣ್ಣನಿಗೆ
ತಾಯಿ ನೆನಪಿರಲಿ ಮುಂದೆ ಎಂದೆಂದಿಗೆ
ಕಾಯಿ ಕರ್ಪೂರ ತರುವೆ ನಿನ್ನಗುಡಿಗೆ

ಎನ್ನುವಲ್ಲಿ ಗರತಿಯ ದೊಡ್ಡ ಗುಣ, ಚಾರಿತ್ರ್ಯ ಮೇಲಿನ ಹಾಡಿನಲ್ಲಿ ಎದ್ದಿಕಾಣುತ್ತದೆ.

ಹೀಗೆ ಭಜನೆ ಹಾಡುಗಳು ಹಾಡಿ ಭಜನೆ ಸಮಯದಲ್ಲಿ ಉಪಸ್ಥಿತರಿದ್ದವರೆಲ್ಲರೂ ಸಂತಸದಲ್ಲಿ ಚಿಂತನೆಯಲ್ಲಿ ಕುಳಿತಿರುತ್ತಾರೆ. ಹಾಡುಗಳ ಮಧ್ಯ ಮಧ್ಯದಲ್ಲಿ ಓಂ ನಮಃ ಶಿವಾಯ ಹರಾಯನಮ: ಓಂ ಎಂಬ ಮಂತ್ರದ ಮಾತುಗಳು ಪ್ರತಿಧ್ವನಿಸುತ್ತವೆ.

ತಾಳ-ಲಯ ಬದ್ಧವಾಗಿ ಹೊರಹೊಮ್ಮುವ ಈ ಹಾಡುಗಳ ಧ್ವನಿ ಕತ್ತಲೆಯನ್ನು ಭೇದಿಸಿ ತಾದಾತ್ಮ್ಯದ ಪರಿವೇಷ ಕಟ್ಟುತ್ತದೆ. ಹೀಗೆ ಹಲವು ಗಂಟೆ-ಗಂಟಲೆ ಇಲ್ಲವೆ ಬೆಳಗಾಗುವ ತನಕ ನಡೆಸುವ ಬಜನೆಯನ್ನು ಹೊತ್ತಾದ ನಂತರ ಅಥವಾ ಬೆಳಗಾದ ಜಾವದಲ್ಲಿ ಆರತಿ (ಮಂಗಲದ) ಹಾಡುಹಾಡಿ ಭಜನೆ ಮುಕ್ತಾಯಗೊಳಿಸುವರು. ಮಂಗಲಹಾಡು ಭಜನೆಯಲ್ಲಿದ್ದ ಸಕಲ ಭಕ್ತರು ಎದ್ದು ನಿಂತು ಸಾಮೂಹಿಕವಾಗಿ ಹಾಡುವರು. ಸಾಮೂಹಿಕವಾಗಿಯೇ ಜಯ ಘೋಷಗೈಯವರು. ಬಸವಣ್ಣನಿಗೆ ಜಯವಾಗಲಿ ಅಕ್ಕಮಹಾದೇವಿಯವರಿಗೆ ಜಯವಾಗಲಿ ಹೀಗೆ ತಮ್ಮ ಇಷ್ಟ ಬಂದ ದೇವ ದೇವತೆಯರನ್ನು ಸ್ಮರಿಸುವರು.

ಬೀದರ ತಾಲ್ಲೂಕಿನ ಹಳೆಂಬರ ಬಗದಲ್ ಅಲ್ಲಾಪುರ ಮುಂತಾದ ಹಳ್ಳಿಗಳಲಿ ಭಜನೆ ಮಂಡಳಿಗಳು ಭಜನೆ ಮಾಡುವದರಲ್ಲಿ; ಹಾಡುವದರಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದು ಕೊಂಡಿವೆ.

ಜೋಕುಮಾರನ ಹಾಡು

ಭಾದರಪದ (ಜೂನ) ಮಾಸದಲ್ಲಿ ಮಳೆಯಿಲ್ಲದೆ, ಪೈರು ಒಣಗ ಹತ್ತಿದ್ದಾಗ ಜೋಕುಮಾರನ ಹಬ್ಬವನ್ನು ಆಚರಿಸುವುದು ರೂಢಿ ಇದೆ. ಈ ಹಬ್ಬವನ್ನು ಆಚರಿಸಿದರೆ, ಮಳೆಯಾಗುತ್ತದೆಂಬ ನಂಬಿಕೆ ಇದೆ. ಹಳ್ಳಿಯ ಹೆಣ್ಣುಮಕ್ಕಳು ಜೋಕುಮಾರನನ್ನು ಹೊತ್ತುಕೊಂಡು ಮನೆ-ಮನೆಗೂ ಪೂಜೆ ಸಲ್ಲಿಸಿ ಅವನ ಕಥೆಯನ್ನೇ ಹಾಡಿನ ರೂಪದಲ್ಲಿ ಹಾಡುತ್ತಾರೆ. ಆ ಹಾಡು ಹೀಗೆ ಆರಂಭವಾಗುತ್ತದೆ.

ಅಡ್ಡ ಮಳೆ ಬಡಿದು ದೊಡ್ಡಡ್ಡ ಕೆರಿ ತುಂಬಿ
ಗೊಡ್ಡುಗಳೆಲ್ಲಾ ಹೈನಾಗಿ: ಜೋಕುಮಾರ: ಗೌಡರ
ಸೆಡ್ಡಿಯ ಮ್ಯಾಲೆ ಸಿರಿಬಂದು : ಜೋಕುಮಾರ
ಹಾಸಾಸಿ ಮಳೆ ಬಡಿದು ಬೀಸೀಸಿ ಕೆರೆ ತುಂಬಿ
ಬಾಸಿಂಗದಂತಾ ತೆನಿಬಾಗಿ ಜೋಕುಮಾರ: ಗೌಡರ
ಬಾಸಿಂಗದಂತಾ ತೆನೆಬಾಗಿ: ರಾಸಿಯ ಮ್ಯಾಲೆ ಸಿರಿಬಂದು ಜೋಕುಮಾರ
ಹುಟ್ಟಿದೇಳು ದಿವಸಕ ಪಟ್ನಾವ ತಿರುಗ್ಯಾನ
ದಿಟ್ನಾದೇವಿ ನಿನ ಮಗನ: ಕೊಮರಾಯ
ಕೊಟ್ಯಾರ ಏಳು ದಿನಗಳನು

ಜೋಕುಮಾರ ಇವನು ಗ್ರಾಮದೇವರುಗಳಲ್ಲಿ ಒಬ್ಬ. ಇವನ ಆಯುಷ ಕೇವಲ ಏಳು ದಿವಸ. ಈ ದೇವರನ್ನು ಪೂಜಿಸಿದರೆ, ಸ್ಮರಣೆ ಮಾಡಿದರೆ ಸುಖಃ ಸಂತಾನ ಮುಂತಾದ ಐಶ್ವರ್ಯಗಳನ್ನೆಲ್ಲಾ ಕೊಡುತ್ತಾನೆಂಬ ಗಾಢವಾದ ನಂಬಿಕೆ ಬೀದರ ತಾಲ್ಲೂಕಿನಲ್ಲದೆ ಉತ್ತರ ಕರ್ನಾಟಕದಲ್ಲಿದೆ.

ರಾಣೀದ ಹಟ್ಟಡ ಹೊತ್ತಾನ ಕೊಮರ
ರಾಯರ ಬಣ್ಣಾಗ ಸುಳದಾನ: ನನ ಕೊಮರ
ರಾಯರು ಹೆಂಡರು ತನಗೆಂದ
ಹಾರೂರಗೇರ್ಯಾಗ ಹೊಕ್ಕಾನ ನನ ಕೊಮರ
ಗಾರುಡಿಗಣ್ಣ ತಿರವೂತ: ತನ್ನಯ
ತಾಯಂದಿರಿದ್ದರು ಬಿಡಲಿಲ್ಲ
ಮಂಡರ ಮುಂಡಾಟ್ಕ ಹಿಂಡ ಮಂದಿ
ಕಂಡಲ್ಲಿ ಕಲ್ಲೀಗಿ ಬಡದಾರ: ರಾತ್ಯಾಗ
ಅಗಸಾರ ಕಲ್ಲಾಗ ತುರಕ್ಯಾರ

ಹೀಗೆ ಜೋಕುಮಾರನ ಹುಟ್ಟು, ಬೆಳವಣಿಗೆ ಕುರಿತಾದ ಹಾಡಿದೆ. ಜನಪದ ಸಾಹಿತ್ಯದಲ್ಲಿ ಒಂದೊಂದು ಪ್ರದೇಶದವರೂ ಒಂದೊಂದು ಕಥೆಯನ್ನು ಹೇಳುವರಾದರು ಜೋಕುಮಾರನೊಬ್ಬ ಕಾಮುಕ, ಆಯುಷ, ಏಳುದಿನ, ಅಗಸರಿಂದ ಹತನಾದನೆಂಬ ಪ್ರತೀತಿ ಇದೆ.

ಅಷ್ಟಮಿ ದಿನ ಹುಟ್ಯಾನ ನನ ಕೊಮರ
ಸೆಟ್ಟೇರ ನೋಡಿ ಬೆಸಗೊಂಡ: ಜೋಕುಮಾರ
ಹುಟ್ಟಿದೇಳು ದಿವಸಕ ಮರಣವ
ಒಕ್ಕಲಗೇರ್ಯಾಗ ಹೊಕ್ಕಾನ ನನ ಕೊಮರ
ಚಕ್ಕರಗಣ್ಣ ತರವ್ಹೊತೆ: ಜೋಕುಮಾರ
ಒಕ್ಕಲಿಗ ಹೆಣ್ಣ ನನಗೆಂದ
ಹಾಲಬೇಡಿ ಹರಿದತ್ತ ಕೋಲಬೇಡಿ ಕುಣಿದತ್ತ
ಮೊಸರ ಬೇಡಿ ಕೆಲಸರ ತುಳಿದತ್ತ: ನನ ಕೊಮರ
ಕುಸಲಾದ ಗೆಜ್ಜಿ ಕೆಸರಾಗ

ಎಂಬಂತ ಬೇರೆ ಪ್ರಸಂಗದ ಪದ್ಯಗಳನ್ನು ತಿರುಗಿಸಿಕೊಂಡು ಹೇಳುತ್ತಾರೆ. ಹೀಗೆ ಹಾಡುಗಳನ್ನು ಮುಗಿಸಿ ಮನೆಯೊಡತಿ ಮೊರದಲ್ಲಿ ತಂದ ಜೋಳ, ರೊಟ್ಟಿ, ಕೊಬ್ಬರಿ, ಉಪ್ಪುಗಳನ್ನು ಜೋಳಿಗೆಗೆ ಸುರವಿಕೊಂಡು, ಒಂದು ಹಿಡಿಜೋಳ ಬೇವಿನ ತಪ್ಪಲು ಹಾಕಿ ಮೊರವನ್ನು ತಿರುಗಿ ಕೊಡುತ್ತಾರೆ. ಈ ಜೋಳ ತಪ್ಪಲುಗಳನ್ನು ಹಗೆಯಲ್ಲಿ ಹಾಕಿದರೆ ನುಸಿಯಾಗುವುದಿಲ್ಲವೆಂದು ಜನರ ಭಾವಪ್ಪ ಇದೆ.

ಜೋಕುಮಾರನಿಗೆ ಆರು ದಿವಸ ಮನೆ–ಮನೆಗೆ ತೆಗೆದುಕೊಂಡು ಹೋಗಿ, ಏಳನೆ ದಿನ ರಾತ್ರಿ ಹೊಲಗೇರಿಯಲ್ಲಿಟ್ಟು ಬರುವರು. ಹೊಲೆಯರು ಜೋಕುಮಾರನನ್ನು ಪೂಜೆ ಮಾಡಿ, ಎತ್ತಿ ನೋಡಿ ಮಳೆ, ಬೆಳೆ, ಭವಿಷ್ಯ ಕೇಳಿ ಒನಕೆಯಿಂದ ಕುತ್ತಿಗೆಗೆ ಹೊಡೆಯುವರು. ರುಂಡ ಅಂಗಾತ ಬಿದ್ದರೆ ದೇಶಕ್ಕೆ ಸುಖ, ಇಲ್ಲವಾದರೆ ದುಃಖವೆಂಬದು ಜನರ ಭಾವನೆ ಆಮೇಲೆ ಈ ಒಡಕುಗಳನ್ನು ಹಳ್ಳಕ್ಕೆ ಒಯ್ದು ಚೆಲ್ಲುವರು. ಈ ಸಾವಿನಿಂದ ಜೋಕುಮಾರನು ನರಳುತ್ತಿರುವನೆಂದು ನಂಬಿದ ಅಗಸನು ಮೂರು ದಿನ ಹಳ್ಳದಲ್ಲಿ ಬಟ್ಟೆ ಒಗೆಯುವುದಿಲ್ಲ, ಜನಪದರಲ್ಲಿ ಜೋಕುಮಾರನು ಮಳೆ ತರುವ ದೇವತೆಯೆಂಬ ಭಾವನೆ ಜನರಲ್ಲಿದೆ. ಹೀಗಾಗಿ ಮಳೆ ಬೀಳದೆ ಹೋದರೂ ಜೋಕುಮಾರನ ಪೂಜೆ ಮಾಡಿದರೆ ಮಳೆ ತಾನಾಗಿಯೇ ತರುತ್ತಾನೆಂಬ ಒಕ್ಕಲಿಗರ ನಂಬಿಕೆ ಬೀದರ ತಾಲ್ಲೂಕಿನ ಹಳ್ಳಿಗರಲ್ಲಿದೆ. ಇತ್ತಿತ್ತಲಾಗಿ ಜೋಕುಮಾರನ ಹಾಡುಗಳು ಮೂಲೆ ಗುಂಪಾಗಿವೆ. ಅಗಸರು ಕೂಡ ಇಂಥ ಕೆಲಸ–ಕಾರ್ಯಗಳಲ್ಲಿ ಭಾಗಿಯಾಗುವುದಿಲ್ಲವೆಂದು ಧೈರ್ಯದಿಂದ ಹೇಳುವದು ಕಂಡುಬರುತ್ತಿದೆ. ಜೋಕುಮಾರನಿಗೂ ನಮಗೂ ಯಾವುದೇ ಸಂಬಂಧವಿಲ್ಲವೆಂಬ ಮಾತು ಅಗಸರು ಹೇಳುತ್ತಾರೆ.

ಸತ್ತವರ ಹಾಡು

ಜನಪದ ಹಾಡುಗಳಲ್ಲಿ ಸತ್ತವರ ಹಾಡು ಒಂದು ಪ್ರಕಾರ. ಆಂಗ್ಲದಲ್ಲಿ Dirge Songs ಮತ್ತು Sorrow Songs ಎನ್ನುತ್ತಾರೆ. ಸಾರೋ ಮತ್ತು ಡರ್ಜ ಪದದ ಅರ್ಥ ಶೋಕ, ಗೋಳು ಮತ್ತು ದುಃಖ ಎಂದಾಗಿದೆ. ಒಬ್ಬ ವ್ಯಕ್ತಿ ಸತ್ತೋದಾಗ ಅವನ ಸಂಬಂಧಿಕರು ಸ್ನೇಹಿತರು ಹೆಣದ ಮೇಲೆ ಬಿದ್ದು ಎದೆ ಗುದ್ದಿಕೊಳ್ಳುತ್ತ, ಹೊರಳಾಡುತ್ತ, ಚೀರುತ್ತ,ಬೊಬ್ಬೆಹೊಡಿಯುತ್ತ, ತಮ್ಮ ದುಃಖಶೋಕ ಲಯಬದ್ಧವಾಗಿ ಹೊರಹಾಕುವುದೇ 'ಸತ್ತವರ ಹಾಡು', ದುಃಖದ ಆವೇಶ ಹೆಚ್ಚಾದರೂ ರಾಗಲಾಪ ಮಾಡುತ್ತ ಲಯಬದ್ಧವಾಗಿ ಹಾಡುತ್ತಾರೆ. ಹೆಣದ ಸುತ್ತ ಮುತ್ತ ಕುಳಿತು ನೊಣ ಜಾಡಿಸುತ್ತ, ಅಳುತ್ತಾ, ಹಾಡು ಹೇಳುತ್ತಾರೆ. ಸತ್ತವರ ಸೇವೆ ಸಾಧನೆ ಉಪಕಾರ ನೆನಪು ಮಾಡಿಕೊಂಡು ಶೋಕ ವ್ಯಕ್ತಪಡಿಸುತ್ತಾರೆ. ಬದುಕಿದ್ದಾಗ ಕೆಟ್ಟ ಕೆಲಸ ಮಾಡಿದವನಿದ್ದರೂ ಸತ್ತಮೇಲೆ ಹೊಗಳುವ ಪದ್ಧತಿ ಅನುಸರಿಸುತ್ತಾರೆ. ಸಾವು ಪ್ರತಯೊಬ್ಬನಿಗೆ ಕೊನಯ ಘಟ್ಟ. ತೆಗಳುವುದಿರಿಂದ ಏನೂ ಪ್ರಯೋಜನವಿಲ್ಲವೆನ್ನುವ ಮನೋಭಾವ ಜನಪದರದಾಗಿದೆ.

ಸತ್ತವರ ಹಾಡು ಹೃದಯದ ತಳಮಳ ಅಕ್ರೋಶ, ನೋವು, ನಿರಾಶೆ ಮತ್ತು ಚಿಂತೆಯಿಂದ ತುಂಬಿಕೊಂಡಿದೆ. ಉಪಮೆ ಗಾದೆಗಳಂತೂ ಹಾಡಿನ ಮೇಟಿಯಾಗಿವೆ. ಈ ಹಾಡುಗಳು ಬಹು ಪ್ರಾಚೀನಕಾಲದಿಂದ ಬೆಳೆದು ಬಂದಿವೆ ಎಂಬುದಕ್ಕೆ ಅನೇಕ ದಂತ ಕಥೆಗಳಿವೆ. ಶೋಕ ಗೀತೆಗಳ ರಚನೆ ಕಾರ್ಯ ಕ್ರಿ.ಪೂ. ೩ನೆ. ಶತಮಾನದಲ್ಲಿ ಪ್ರಾರಂಭವಾಗಿದ್ದಕ್ಕೆ ಅನೇಕ ಆಧಾರಗಳಿವೆ. ಗ್ರೀಕ ಕವಿ ಥಿಯೋಕ್ರಿಟಸ್ ರಚಿಸಿದ ಸತ್ತು ಹೋದ ಕುರುಬನೊಬ್ಬನ ನೆನಪಿಗಾಗಿ ಎಂಬುದು ಅತ್ಯಂತ ಪ್ರಾಚೀನ ಶೋಕಗೀತೆಯಾಗಿದೆ. ೧೭೫೦ರಲ್ಲಿ ಇಂಗ್ಲೀಷ್ ಕವಿಗಳಲ್ಲಿ ಮಿಲ್ಟನ್, ಷೆಲ್ಲಿ, ಗಣ್ಯರು, ವಿಶ್ವಸಾಹಿತ್ಯದ್ಲಲಿ ಗೌರವದ ಸ್ಥಾನವನ್ನು ಗಳಿಸಿಕೊಂಡಿರುವಂಥದು ಆಂಗ್ಲ ಕವಿ ಥಾಮಸ್‌ಗ್ರೇ ರಚಿಸಿದ 'ಗ್ರಾಮ' ಸ್ಮಶಾನದಲ್ಲಿ ಬರೆದ ಶೋಕಗೀತೆ ಎನ್ನಲಾಗಿದೆ.

ಕನ್ನಡದಲ್ಲಿ ದಿ॥ ಬೇಂದ್ರೆ ಕವಿ ಬರೆದ (೧೯೪೬) 'ಹಾಡು ಪಾಡು' ಸಂಕಲದಲ್ಲಿ ಉತ್ತಮ ಶೋಕಗೀತೆಗಳಿವೆ. ಪಂಜೆ ಮಂಗೇಶರಾಯರ ಸಹೋದರ ಸತ್ತ ಮೇಲೆ ತನ್ನ ದುಃಖದ ಆತುರದಿಂದಾಗಿ 'ಅಣ್ಣನ ವಿಲಾಸ' ಎನ್ನುವ ಹಾಡು ರಚಿಸಿದ್ದಾರೆ. ಟಿ.ಎಸ್. ವೆಂಕಣ್ಣಯ್ಯನವರು ಗತಿಸಿದಾಗ ರಾಷ್ಟ್ರಕವಿ ಕುವೆಂಪು ಅವರು ದುಃಖದಲ್ಲಿ ಮುಳುಗಿ,

"ಬೆಂದ ನೆಲದಿಂದೊಡನೆ ಹೊಸ ಹಸಿರು ಹೊಮ್ಮುವುದೇ?
ಹಸಿ ನೋವಿನಿಂದೆ ಹಾಡಿನ ಚಿಲುಮೆ ಚಿಮ್ಮುವುದೆ?
ಮೌನವೇ ಮಹಾಸ್ತುತಿ ನಿಮಗೆ ನೀರವ ವ್ಯಕ್ತಿ

ಎನ್ನುವಲ್ಲಿ ಕವಿಯ ಭಾವನೇ ತೀವ್ರ ಆವೇದನೆಗೆ ಸಾಕ್ಷಿಯಾಗಿದೆ. ಇಂಥ ಅನೇಕ ಶೋಕಗೀತೆಗಳು ಅಲ್ಲಿ-ಇಲ್ಲಿ ಬಿಡಿ-ಬಿಡಿಯಾಗಿ ದೊರೆತರೂ, ಅವು ವೈಯಕ್ತಿಕ ಭಾವನೆಯ ಗುಡುಗಾಗಿವೆ. ಕರುಳು ಕತ್ತರಿಸುವ ಖಡ್ಗದಂತಿವೆ. ಗುಡುಗಿನಂತೆ ಗುಡುಗುವ ಕಾರ್ಮೋಡದಂತಿವೆ. ನೋವು ನಿರಾಶೆಯ ಬಿಸಿಲಿನಂತಿವೆ.

ಜನಪದರ ಸತ್ತವರ ಹಾಡುಗಳು ವಿವಿಧ ಅವಸ್ಥೆಯನ್ನು ಪಡೆದುಕೊಂಡಿವೆ. ಮುಸ್ಲಿಂ ಜನಾಂಗದ ವ್ಯಕ್ತಿ ಸತ್ತಾಗ ಮನೆಯಲ್ಲಿಯೇ ಅಳುವ ಪದ್ಧತಿ ಇದೆ.. ಇತರ ವರ್ಗದ ವ್ಯಕ್ತಿ ಸತ್ತಾಗ ಮನೆಯಿಂದ ಕುಣಿವರೆಗೆ ಅಳುವುದೇ ಹೆಚ್ಚು. ಇಂಥ ಸಮಯದಲ್ಲಿ ಹೆಣ್ಣುಮಕ್ಕಳ ಪಾತ್ರ ಪ್ರಮುಖವಾಗಿರುತ್ತದೆ. ಒಟ್ಟಿನಲ್ಲಿ ಚಿಂತೆ-ದುಃಖದ ಭಾರ ಇಳಿಸಿಕೊಳ್ಳುವ ದೃಷ್ಟಿಯಿಂದ ಸತ್ತ ಮೇಲೆ ಅಳುವ ಪದ್ಧತಿ ಇನ್ನೂ ಹಳ್ಳಿಗಳಲ್ಲಿ ಹಸಿರಾಗಿದೆ. ನಗರ ಪಟ್ಟಣಗಳಲ್ಲಿ ಕೊಂಚ ಕಡಿಮೆಯಾಗಿದೆ.

ದೇವ ದೇವತೆಗಳನ್ನು ಬಿಟ್ಟರೆ ಜಗತ್ತಿನಲ್ಲಿರುವ ಪ್ರತಿಯೊಂದು ಜೀವರಾಶಿಗೂ ಹುಟ್ಟು-ಸಾವು ಇದ್ದೇ ಇದೆ. ಹುಟ್ಟಿದ ಪ್ರತಿಯೊಂದು ಜೀವಪ್ರಾಣಿ ಸಾಯಲೇಬೇಕು. ಮನುಷ್ಯನಾಗಿ ಹುಟ್ಟಿದ ನಂತರ ಕೆಲವು ವಿಧಿ-ವಿಧಾನಗಳು ಇರುವಂತೆ, ಸತ್ತ ಮೇಲೂ ಕೆಲವು ಶವಸಂಸ್ಕಾರ ನೆರವೇರಿಸುವ ಪದ್ಧತಿಗಳು ಇವೆ.

ಒಬ್ಬ ವ್ಯಕ್ತಿ ಸತ್ತಾಗ ಶವಸಂಸ್ಕಾರದ ಕ್ರಿಯೆಗಳು ಈ ಮುಂದಿನಂತೆ ಸಾಮಾನ್ಯ ಸ್ವರೂಪ ಪಡೆಯುತ್ತವೆ. ಸತ್ತವನ ಹೆಣ ನಡುಮನೆಯಲ್ಲಿ (ಕೈಕಾಲುಗಳನ್ನು ಮಡುಚಿ) ಮಲಗಿಸಿ ಸುತ್ತ-ಮುತ್ತ ಕುಳಿತು ನೊಣ ಜಾಡಿಸುತ್ತಾ ಅಳುತ್ತಾರೆ. ಆ ದಿನ ಸತ್ತವನ ಹಾಗೂ ಅಕ್ಕಪಕ್ಕದ ಮನೆಯವರು (ಹೆಣ ಹೋಗುವವರೆಗೆ) ಒಲೆ ಹೆಚ್ಚುವುದಿಲ್ಲ. ಸತ್ತ ಹೆಣದ ಮುಂದೆ ಈ ಮುಂದಿನವೂ ಸೇರಿಕೊಳ್ಳುತ್ತವೆ. ಭಾವಾತಿರೇಕದಿಂದ ಚಿತ್ತಶೂನ್ಯವಾಗುವುದು, ಕಾಲು ಬಡಿಯುವುದು, ಕೊರಳಿಗೆ-ಕೊರಳಾಕಿ ಅಳುವುದು, ಧೂಳುಮಣ್ಣಿನಲ್ಲಿ ಹೊರಳಾಡುವುದು ಅಥವಾ ತಲೆಮೇಲೆ ಹಾಕಿಕೊಳ್ಳುವುದರ ಜೊತೆಗೆ,

ಅಯ್ಯೋ! ನನ ದೇವ್ರೆ ನಿಮಗೇನು ಬಂದಿತಪ್ಪಾ
ಆ ದೇವು ನಿನಗೆ ಯಾಕ ಕರಕೊಂಡ ಹ್ವಾದಪ್ಪಾ
ನಮಗಿನ್ಯಾರಪ್ಪಾ ದೇವ್ರೇ
ನಮ್ಮ ಬಾಯಿಗೆ ಮಣ್ಣು ಹಾಕಿದ್ಯಲ್ಲೊಪ್ಪಾ
ಮುತ್ತಿನಂಥ ಹೆಂಡ್ತಿ ಮಕ್ಕಿಗೆ ಬಿಟ್ಟು ನಡದಲ್ಲಪ್ಪಾ
ನಮಗ ಯಾರಾದ್ರೂ ಏನಾದ್ರೂ ಅಂದ್ರೆ ಆಡಿದ್ರೆ
ಒಣಕಿ ತಗೊಂಡ ಹೊಡಿತ್ತಿದ್ದಲ್ಲಪ್ಪಾ
ಇನ್ಯಾರ ಹೊಡಿತಾರೆ
ನೋಡಾ ನೋಡಾ ಕಣ್ಣಿಗೆ ಸುಣ್ಣ ಹುಯ್ದುಲ್ಲೊ ಶಿವಾ.

ಹೀಗೆ ಸತ್ತವನ ಕುರಿತು ಹೊಗಳುತ್ತ, ಸೇವೆ-ಸಾಧನೆ ಉಪಕಾರ ನೆನಪು ಮಾಡಿಕೊಂಡು ತಮ್ಮ ತಮ್ಮ ದುಃಖ ಲಯಬದ್ಧವಾಗಿ ಹೊರಹಾಕುತ್ತಿರುತ್ತಾರೆ. ಇಂಥ ಸಂದರ್ಭದಲ್ಲಿಯೇ ಹಳ್ಳಿಯ ಪ್ರಮುಖ ವ್ಯಕ್ತಿಗಳು ಕುಣಿ ಅಗಿಯಲು ಗ್ರಾಮದ ಕೆಳವರ್ಗದ ನಾಲ್ಕೈದು ಜನರಿಗೆ ಪಿಕಾಸಿ, ಸಲಕೆ(ಪಾವಡಿ) ಗುಸಿ, ಬುಟ್ಟಿ ಮತ್ತು ಬೆಂಕಿ ಕೊಟ್ಟು ಕಳಿಸುತ್ತಾರೆ.೧ ಇದಾದ ಮೇಲೆ ಬಂಧು-ಬಳಗದವರಿಗೆ ಸುದ್ದಿ ಮುಟ್ಟಿಸುವ ವ್ಯವಸ್ಥೆ ಮಾಡುತ್ತಾರೆ.೨ ಹಲಗೆ ವಾದ್ಯಗಳನ್ನು ತರಿಸುತ್ತಾರೆ. ಹಲಗೆಯ ನಾದ ಅಳುವವರ ಧ್ವನಿ ಮುಗಿಲಿಗೆ ಮುಟ್ಟುವಂತಿರುತ್ತದೆ. ಹೆಜ್ಜೆ ಹಾಕುತ್ತ; ಕುಣಿಯುತ್ತ, ಹಲಗೆ ಬಾರಿಸುತ್ತಾರೆ.೩ ಸತ್ತವನ ಕಡೆಯವರು ರೊಕ್ಕ ಹಾರಿಸುತ್ತಾರೆ. ನೆಲದ ಮೇಲೆ ಬಿದ್ದ ರೊಕ್ಕ (ನಾಣ್ಯಗಳು) ಹಲಗೆ ಬಾರಿಸುವವರು ಹಣೆಯಿಂದ ತೆಗೆದುಕೊಳ್ಳುತ್ತಾರೆ. ಇದಲ್ಲದೆ ಇನ್ನೊಂದು ಸ್ಪರ್ಧೆ ನಡೆಯುತ್ತದೆ. ಗುಲಾಲ-ಬುಕ್ಕುಟು ಮತ್ತು ಕುಂಕುಮ ನೀರಿನಲ್ಲಿ ಮಿಲಾಯಿಸಿ, ಕಬ್ಬಿಣದ ಬುಟ್ಟಿಯಲ್ಲಿ ಹಾಕುತ್ತಾರೆ. ಅದರೊಳಗೆ ಒಂದು ಇಲ್ಲವೆ ಎರಡು ರೂಪಾಯಿ ನಾಣ್ಯ ಹಾಕಿ ಅದನ್ನು ತೆಗೆದುಕೊಳ್ಳಲು ಹಲಗೆಯವನಿಗೆ ಸನ್ನೆ ಮಾಡುತ್ತಾರೆ. ಆಗ ಅವನು ಹಲಗೆ ಬಾರಿಸುತ್ತಾ ಕಣ್ಣು ಮುಚ್ಚಿಕೊಂಡು ತಲೆ ನೀರಿನೊಳಗೆ ಮುಳುಗಿಸಿ ಹಣೆಯಿಂದ ನಾಣ್ಯ ಹೊರತೆಗೆಯುತ್ತಾನೆ. ನೆಲದ ಮೇಲಿಟ್ಟ ನೋಟು ಇಲ್ಲವೆ ನಾಣ್ಯ ಕಣ್ಣಿನ ರೆಪ್ಪೆಯಿಂದ ತಗೆಯುವ ಸ್ಪರ್ಧೆ ಕೂಡ ನಡೆಯುತ್ತದೆ. ಇನ್ನೊಂದು ಸ್ವಾರಸ್ಯ, ರಂಜನೆ ನೀಡುವ ಸ್ಪರ್ಧೆ ಹೀಗಿದೆ. ಒಂದು ರೂಪಾಯಿ ನಾಣ್ಯ ಜನರ ಗುಂಪಿನ ಮಧ್ಯೆ ಅಥವಾ ಹತ್ತಿರದ ಸ್ಥಳದಲ್ಲಿಬಚ್ಚಿಟ್ಟು ಹಲಗೆಯ ಬಡಿತದ ಸಂಕೇತದಿಂದ ಅದನ್ನು ಹುಡುಕಿ ತೆಗೆಯುವುದನ್ನು ನೋಡಲು ಅದ್ಭುತ ಎನಿಸುತ್ತದೆ. ಈ ಸ್ಪರ್ಧೆಯಲ್ಲಿ ಒಬ್ಬನು ಹಲಗೆ ಬಾರಿಸುವವನಿಗೆ ಮಾತ್ರ ನಾಣ್ಯ ಬಚ್ಚಿಟ್ಟ ಸ್ಥಳ ಗೊತ್ತಿರುತ್ತದೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡವನು ನಾಣ್ಯ ಇರುವ ಸ್ಥಳ ಹುಡುಕಿಕೊಂಡು ತನ್ನ ಎರಡೂ ಕೈ ಮುಂದು ಮಾಡಿಕೊಂಡು ಹೋಗುತ್ತಾನೆ. ಹಲಗೆಯನ್ನು ವಿವಿಧ ಗತ್ತುಗಳಲ್ಲಿ ಕುಣಿ ಅಗಿಯಲು ಹೋಗುವವರು ದೆವ್ವ-ಪಿಶಾಚಿ ಎದುರಾಗಬಾರದೆಂದು ಬೆಂಕಿ ಹೊತ್ತಿಸಿದ ಕೆಂಡ ತೆಗೆದುಕೊಂಡು ಹೋಗುವರು.

---

೧. ಸತ್ತ ಸುದ್ದಿ ಮುಟ್ಟಿಸಿದವರಿಗೆ ಆಯಾ ಮನೆಯವರು ದವಸ ಧಾನ್ಯ ಇಲ್ಲವೆ ನಗದು ಹಣ ಕಾಣಿಕೆಯಾಗಿ ಕೊಡುವ ಪದ್ಧತಿ ಇದೆ.

೨. ಹಲಗೆ ಬಾರಿಸುವ ನಾನಾ ಗತ್ತುಗಳಿವೆ. ಸತ್ತ ಸಮಯದಲ್ಲಿ ಹಲಗೆಯಿಂದ ಈ ದನಿ ಹೊರಬರುತ್ತದೆ.

ಡೆಂಗ್, ಡೆಂಗ್ ಡೆಂಗ್, ಡೆಂಗು, ಕುಕ್ಕಡ್ (ಚುಕ್ಕಿ)
ಡೆಂಗ್ ಡೆಂಗ್ ಡೆಂಗು ಕುಕ್ಕಡ್
. ಹಾಗೂ
ಜಂಬಗಿ ತುಕಪ್ ತೆಂಬಗಿ ಕದ್ದೆ
ಜಂಬಗಿ ತುಕಪ್ ತೆಂಬಗಿ ಕದ್ದೆ
(ಹೀಗೆ ಹಲಗೆ ಹುಮ್ಮಸ್ಸಿನಿಂದ ಬಾರಿಸುತ್ತ ಕುಣಿದಾಡುತ್ತಾರೆ)

ಬಾರಿಸುವುದೇ ಅವನಿಗೆ ದಾರಿ ತೋರಿಸುವ ಸಂಕೇತ. ಸದ್ದು ಕಡಿಮೆಯಾಯಿತೆಂದರೆ ದಾರಿ ತಪ್ಪಿದನೆಂದರ್ಥ. ಸದ್ದು ಹೆಚ್ಚು ಮಾಡಿ ಎರಡು ಗುಣಕಿನಿಂದ ಬಾರಿಸಿದರೆ ಅದೇ ದಾರಿಯಲ್ಲಿ ಮುಂದುವರಿಯಲು ಸೂಚನೆ. ನಾಣ್ಯವಿರುವ ಸ್ಥಳದ ಹತ್ತಿರ ಹುಡುಕುವಾತ ಬಂದಂತೆಲ್ಲ ಹಲಗೆಯ ಸದ್ದು ಇನ್ನಷ್ಟು ಹೆಚ್ಚಾಗುತ್ತದೆ. ಆಗ ನಾಣ್ಯ ಪಡೆದು ಕಣ್ಣಿನ ಬಟ್ಟೆ ತೆಗೆಯುತ್ತಾನೆ.

ಇಷ್ಟೆಲ್ಲಾ ನಡೆಯುವುದರೊಳಗೆ ಬಂಧು-ಬಳಗದವರು ಮತ್ತು ಬೇಕಾದವರು ಅಳುತ್ತಾ, ಚೀರುತ್ತಾ, ಬರುತ್ತಿರುತ್ತಾರೆ. ಅಂಥದರಲ್ಲೀ ಊರಿನ ಗಣ್ಯವ್ಯಕ್ತಿಗಳ ಹೆಣದ ಶೃಂಗಾರಕ್ಕಾಗಿ ಬಟ್ಟೆ-ಬರೀ ಹೂವಿನ ಹಾರ (ಶವದ ಪಲ್ಲಕ್ಕಿ) ತರಿಸುತ್ತಾರೆ. ತರಿಸಿದ ಮೇಲೆ ನೀರಿನಲ್ಲೆ ಸುವಾಸನೆಯ ಎಣ್ಣೆ ಹಾಕಿ ಹೆಣಕ್ಕೆ ಮೈತೊಳೆದು, ಹೊಸ ಬಟ್ಟೆ ಬರಿಗಳಿಂದ ಅಲಂಕರಿಸಿ ಉಡಿ ತುಂಬುವರು ಗೋಡೆಗೆ ಗೂಟ ಹೊಡೆದು ಹೆಣದ ಗುಲಗಟ್ಟಭಾಗದೊಂದಿಗೆ ಗೂಟಕ್ಕೆ ಕಟ್ಟಿ ಹೆಣ ಕೂಡಿಸುವರು. ಕುಂಕುಮ ಗುಲಾಲಬುಕ್ಕಿಟು ಹಾರಿಸುವರು. ವಿಭೂತಿ ಅಗರಬತ್ತಿ ಹಚ್ಚುವರು. ಹೂವಿನ ಹಾರ ಹಾಕಿ ಆರುತಿ ಬೆಳಗುವರು. ಮಣ್ಣ (ಶವಸಂಸ್ಕಾರ) ಮಾಡಲು ಬಂದವರು ಇಚ್ಛಾನುಸಾರ ಎರಡು-ಐದು ಹತ್ತು ರೂಪಾಯಿಯ ನೋಟು ಎಲ್ಲರೂ ಒಟ್ಟಿಗೆ ಕೂಡಿಸಿ, ರೂಪಾಯಿಯ ಹಾರ ಮಾಡಿ ಹೆಣದ ಕೊರಳಿಗೆ ಹಾಕುವರು. ಗಂಡ ಸತ್ತರೆ ಶವದ ಹತ್ತಿರ ಹೆಂಡತಿಯನ್ನು ಕುಳ್ಳರಿಸಿ ಅವಳ ಮುತ್ತೈದೆತನದ ಕೊನೆಯನ್ನು ಸೂಚಿಸುವ ಮಂಗಳ ಕರವಾದ ವಸ್ತುಗಳನ್ನು ಅವಳಿಗಿಡುತ್ತಾರೆ.

ಇನ್ನು ಕೊನೆಗಳಿಗೆಯಲ್ಲಿ "ಓಂ ಭಲಾ ಶಂಕರ ಭಲಾ" ಎನ್ನುತ್ತಾ ಗೋಡೆಗೆ ಗೂಟ ಹೊಡೆದು ಕೂಡಿಸಿದ ಶವ ಎತ್ತಿ ಪಲ್ಲಕ್ಕಿಯಲ್ಲಿ ಕೂಡಿಸಿ ಅಲುಗಾಡದ ಹಾಗೆ ಹಗ್ಗದಿಂದ ಬಿಗಿಯಾಗಿ ಕಟ್ಟುವರು. ಎಂಟ್ಹತ್ತು ಜನ ಹೆಗಲು ಕೊಟ್ಟು ಪಲ್ಲಕ್ಕಿ(ಸಿದಿಗೆ) ಎತ್ತುವರು. ಪಲ್ಲಕ್ಕಿ ಮೊದಲಿಗೆ ಹಿರಿಯ ಮಗನಾದವನೇ ಹೆಗಲುಕೊಟ್ಟು ಹೊರಬೇಕು. ಮಕ್ಕಳು ಇರದ ಪಕ್ಷದಲ್ಲಿ ಹತ್ತಿರದ ಸಂಬಂಧಿಕರು ಹೊರಬಹುದು. ಇವರ ಜೊತೆಯಲ್ಲಿ ಪ್ರಥಮವಾಗಿ ಐದಾರು ಜನ ತಮ್ಮ ಸಮಾಜದವರೇ ಹೆಗಲು ಕೊಡಬೇಕು. ಮುಂದೆ ಹೆಗಲಿನಿಂದ ಹೆಗಲು ಬದಲಾಯಿಸುತ್ತಾ ಹೋಗುತ್ತಾರೆ. ಇಂಥ ಸಮಯದಲ್ಲಿ ಜಯಘೋಷಗಳನ್ನು ಹಾಕುತ್ತ, ದೇವರ ಕುರಿತ ಹಾಡುಗಳನ್ನು ಹಾಡುತ್ತ, ಭಜನೆ ಮಾಡುತ್ತ, "ಓಂ ಭಲಾ ಶಂಕರ ಭಲಾ" ಎನ್ನುತ್ತ, (ಹಲಗೆ ಜೋರಾಗಿ ಬಾರಿಸುತ್ತ) ಶವದ ಪಲ್ಲಕ್ಕಿಯೊಂದಿಗೆ ಮುಂದೆ-ಮುಂದೆ ಹೋಗುತ್ತಾರೆ. ಊರ ಸೀಮೆ ದಾಟುವಾಗ ಇಲ್ಲವೆ ಎರಡು ಸ್ಥಳದಲ್ಲಿ ಹೆಣದ ಪಲ್ಲಕ್ಕಿ ನೆಲದ ಮೇಲೆ ಇಟ್ಟು ಶವದ ಉಡಿಯಲ್ಲಿರುವ ಜೋಳ, ನವಣೆ, ಕಾರೆಳ್ಳು ಇನ್ನಿತರ ಕಾಳುಗಳು ನೆಲದ ಮೇಲೆ ಚೆಲ್ಲುವರು.

ಹೀಗೆ ಮಾಡಿದ ನಂತರ ಹೆಣದ ಪಲ್ಲಕ್ಕಿ ಎಲ್ಲಿಯೂ ಕೆಳಗಿಳಿಸದಂತೆ, ನೇರವಾಗಿ ಕುಣಿಯ ಜಾಗದ ಸ್ಥಳದಲ್ಲಿಯೇ ಇಳಿಸುವರು. ಇಲ್ಲಿ ಈ ಮುಂದಿನವೂ ನಡೆಯುತ್ತವೆ. ಹೆಣದ ಮೇಲಿದ್ದ ಬೆಲೆ ಬಾಳುವ ವಸ್ತ್ರ-ಆಭರಣಗಳನ್ನು ತೆಗೆದುಕೊಂಡು ಅದರ ಬಾಯಲ್ಲಿ ಸ್ವಲ್ಪ ಪ್ರಮಾಣದ ಬಂಗಾರ ಇಟ್ಟು, ಕೈಯಲ್ಲಿ ಲಿಂಗ ಕೊಟ್ಟು, ಕುಣಿಯಲ್ಲಿ ಶವ ಇಡುವರು. ಕೊನೆಗೆ

ಸಂಬಂಧಿಕರಾದವರು, ಇತರರು ಸತ್ತವನ ಮುಖ ನೋಡುವರು. ಗಂಡ ಸತ್ತರೆ (ಹೆಂಡತಿಯಾದವಳು) ಮುತ್ತೈದೆತನವನ್ನು ಸೂಚಿಸುವ ಕಾಲುಂಗರ, ಬಳೆ ಕುಂಕುಮ, ಮಂಗಲಸೂತ್ರ, ಮುಂತಾದವುಗಳನ್ನು ತಗೆಯುವಳು. ಅಲ್ಲಿಗೆ ಅವಳ ಮುತ್ತೈದೆತನದ ಅಂತ್ಯ ಮುಗಿದಂತೆ ಎಂದಾರ್ಥ.

ಕುಣಿಯಲ್ಲಿಟ್ಟ ಹೆಣದ ಮೇಲೆ ಉಪ್ಪು ಹಾಕಿದ ನಂತರ ಮಣ್ಣು ಹಾಕುವುದು ಸುರು ಮಾಡುತ್ತಾರೆ. ಆನಂತರ ಕುಣಿಯ ಮೇಲೆ ಸಲಕೆಯಿಂದ ಮಣ್ಣು ಎಳೆಯುತ್ತಾರೆ. ಇದೆಲ್ಲಾ ಮುಗಿದ ತಕ್ಷಣವೇ ಜಂಗಮನಾದವನು ಕುಣಿಯ ಮೇಲೆ ನಿಂತು ಸತ್ತವನ ಹೆಸರಿನೊಂದಿಗೆ ಅನ್ನ, ವಸ್ತ್ರ, ದಾನ ಧರ್ಮದಿಂದ ಕೈಲಾಸ ಸೇರಿದ ಎನ್ನುತ್ತಾನೆ. ಮುಂದೆ ಆತನ ಸಲಹೆಯಂತೆ ಎಲ್ಲರೂ ಬಿಲ್ವಪತ್ರಿ ಕುಣಿಯ ಮೇಲೆ ಹಾಕುತ್ತಾರೆ.

ಕುಣಿ ಸ್ಥಳದಿಂದ ಸ್ವಲ್ಪ ದೂರ ಬಂದು ಊರಿನ ಪ್ರಮುಖ ವ್ಯಕ್ತಿ, ಜಂಗಮ ಹಾಗೂ ಸತ್ತವನ ಮನೆಯ ಹಿರಿಯ ಮೂವರು ಕುಳಿತು ದಾನಧರ್ಮ ಮಾಡುತ್ತಾರೆ. ಹಲಗೆ ಬಾರಿಸಿದವರು. ಕುಣಿ ಹೊಡೆದವರು, ಸುದ್ದಿಮುಟ್ಟಿಸಿದವರು, ಮದ್ದುಗುಂಡು ಹಾರಿಸಿದವರು, ಕುಣಿದವರು, ಕೆಳವರ್ಗದವರು ಹಾಗೂ ಜಂಗಮರ ಪಾತ್ರ ಕಾಣಿಕೆ ಸ್ವೀಕರಿಸುವಲ್ಲಿ ಮುಖ್ಯವಾಗಿರುತ್ತದೆ. ಹಳ್ಳಿಯ ಇತರೆ ಕೂಲಿ ಕಾರ್ಮಿಕ ವರ್ಗದವರು ದಾನ ಪಡೆದ ಕೊಳ್ಳುವ ಸಂಪ್ರದಾಯ ಇದೆ. ದಾನ-ಧರ್ಮದ ಕಾರ್ಯ ಮುಗಿದ ಮೇಲೆ ಶವಸಂಸ್ಕಾರ ಮುಗಿಸಿದವರು ಕರಿಕೆ ಹುಲ್ಲ ತೆಗೆದುಕೊಂಡು ಸತ್ತವನ ಮನೆಗೆ ಬರುವುದರೊಳಗೆ ಆ ದಿನ ಮನೆಯಲ್ಲಿ ಹೆಣ ಮಲಗಿಸಿದ ಸ್ಥಳ ಸಾರಿಸಿ ತಂಬಿಗೆ ಮೇಲೆ ದೀಪ ಇಟ್ಟಿರುತ್ತಾರೆ. ಕರಿಕೆ ಹುಲ್ಲ ತಂದವರು ತಂಬಿಗೆ ಒಳಗೆ ಹಾಕಿ ನಮಸ್ಕಾರ ಮಾಡಿ ತಮ್ಮ ತಮ್ಮ ಮನೆಗೆ ಹೋಗುವರು. ಅಂದು ಸತ್ತವನ ಮನೆಯವರೆಲ್ಲರೂ ಸ್ನಾನ ಮಾಡಿ ಉಪ್ಪಿಲ್ಲದ ಅನ್ನ ಮಾಡುವರು. ಸಂಜೆ ಜಂಗಮನಿಗೆ ಮನೆಗೆ ಬರಲು ಹೇಳಿರುತ್ತಾರೆ. ಮನೆಗೆ ಬಂದ ಜಂಗಮ (ಹಿಂದೆ) ಹೆಣ ಮಲಗಿಸಿದ ಸ್ಥಳದ ಮೇಲೆ ಕುಳಿತು ಶಂಖ ಹೊಡೆದು ಊಟ ಮಾಡಿ ಕಾಣಿಕೆ ಪಡೆಯುತ್ತಾನೆ. ಆನಂತರ ಮನೆಯ ಸದಸ್ಯರು ಊಟ ಮಾಡುವರು. ಸತ್ತ ಮೂರು ದಿನಕ್ಕೆ ಸತ್ತವನ ಸಂಬಂಧಿಕರು ಕುಣಿಯ ಮೇಲೆ ಹಾಲು ಹಾಕುವುದರ ಜೊತೆಗೆಆತನ ಹಿಂದಿನ ಪ್ರೀತಿಯ ವಸ್ತು ಆಹಾರ ಪಾನೀಯಗಳಾದ ಉದಾ: ಬೀಡಿ, ಸಿಗರೇಟ್, ಜಾಮುನ್, ಸೀರಾ,ಪೂರಿ, ಹೋಳಿಗೆ-ತುಪ್ಪ ಚಿಕನ್-ಬಿರಾನಿ ಸರಾಯಿ-ವಿಸ್ಕಿ ಮುಂತಾದವುಗಳು ಗೋರಿಯ ಮೇಲೆ ಇಟ್ಟು ಮನೆಗೆ ಬರುವರು.

ಸತ್ತ ಐದನೆ ದಿನದಂದು ಮನೆಗೆ ಸುಣ್ಣ ಬಣ್ಣ ಬಳಿದು "ದಿನಾ" ಕರ್ಮ ಮಾಡುತ್ತಾರೆ. ಹಿಂದೆ ಶವಸಂಸ್ಕಾರ ಮಾಡಲು ಬಂದವರಿಗೆಲ್ಲಾ ಊಟ ಹಾಕುತ್ತಾರೆ. ಪಾಯಸ (ಹುಗ್ಗಿ) ಅನ್ನ, ಹುಳಿ ಅಂದಿನ ವಿಶೇಷ ಭೋಜನ ಆಗಿರುತ್ತದೆ. ಇಲ್ಲಿಗೆ ಸತ್ತವನ ಶವಸಂಸ್ಕಾರ ಕ್ರಿಯಾ ಪದ್ಧತಿಗಳು ಮುಗಿದಂತೆ. ಇನ್ನು ವರ್ಷಕ್ಕೊಮ್ಮೆ 'ಪುಣ್ಯತಿಥಿ ಕಾರ್ಯ' ಮಾಡುವುದು, ಬಿಡುವುದು ಸತ್ತ ವ್ಯಕ್ತಿಯ ಮನೆಯ ಹಿರಿಯನದಾಗಿರುತ್ತದೆ.

ಮಕ್ಕಳು ಮದುವೆ ವಯಸ್ಸಿಗೆ ಬಂದವರು ಹಾಗೂ ಮುತ್ತೈದೆಯರು ಸತ್ತಾಗ ಮಾಡುವ ಶವಸಂಸ್ಕಾರ ಪದ್ಧತಿಗಳು ಕೊಂಚ ಬೇರೆ ಬೇರೆಯಾಗಿವೆ. ಈ ಮೇಲಿನ ವಿಶ್ಲೇಷಣೆ ಇಡಿಯಾಗಿ ಹಿಂದು ಜನಾಂಗದ ಮುತ್ತೈದೆಯರ ಕುರಿತಾಗಿದೆ ಎನ್ನುವುದು ಓದುಗರು ತಿಳಿದುಕೊಳ್ಳಬೇಕು. ಮುಸ್ಲಿಂ, ಕ್ರಿಶ್ಚಿಯನ್, ಜೈನ ಮುಂತಾದ ಜನಾಂಗದವರ ಮರಣ ಸಂಸ್ಕಾರ ಕ್ರಿಯಾ ಪದ್ಧತಿಗಳು ಹಿಂದು ಜನಾಂಗದ ಪದ್ಧತಿಗೆ ಅನ್ವಯವಾದರೂ ಕೊಂಚ ಭಿನ್ನವಾಗಿರುತ್ತವೆ. ಆಯಾ ಜನಾಂಗದವರಿಗೆ ತನ್ನದೆ ಆದ ಕೆಲವು ವಿಶಿಷ್ಟ ಸಂಸ್ಕಾರಗಳಿವೆ ※ ಅವರವರ ಸಂಪ್ರದಾಯದಂತೆ ಮರಣ ಸಂಸ್ಕಾರ ಮಾಡಿ ಮುಗಿಸುತ್ತಾರೆ.

ಒಟ್ಟಿನಲ್ಲಿ ಸತ್ತವರ ಶವಸಂಸ್ಕಾರ ಪದ್ಧತಿ ಮತ್ತು ಹಾಡುಗಳು (ಶೋಕ ಗೀತೆಗಳು) ಆಯಾ ಸಮಾಜ ಜನಾಂಗ ಮತ್ತು ಸತ್ತ ವ್ಯಕ್ತಿಯ ವಯಸ್ಸಿನ ಮೇಲೆ ಪ್ರತಿಬಿಂಬಿಸುತ್ತವೆ. ದುಃಖ ಆವೇಶದ ರಾಗಲಾಪ ಮಾಡುವ ಬಗೆ ತೀರ ಭಿನ್ನವೆನಿಸಿದೆ.

※ ಯಾವನೇ ಮುಸ್ಲಿಂ ವ್ಯಕ್ತಿ ಸತ್ತರೆ 'ಅಲ್ಲಾರೆ' ಎಂದು ರೋದಿಸುತ್ತಾರೆ.
ಕ್ರಿಶ್ಚಿಯನರು 'ಸ್ವಾಮಿ' ಎನ್ನುವ ಪಲ್ಲವಿಯೊಂದಿಗೆ (ದುಃಖ) ಆವೇಶದ ರಾಗಲಾಪ ಮಾಡುತ್ತಾರೆ.

ಗೊಂದಲಿಗರ ಹಾಡು

ಜನಪದ ವೃತ್ತಿ ಕಲಾವಿದರಲ್ಲಿ ಗೊಂದಲಿಗರು ಮುಖ್ಯರಾದವರು. ಇವರು ನೀಡುವ ಪ್ರದರ್ಶನ ಗೊಂದಲದಿಂದ ಕೂಡಿರುವುದರಿಂದ ಇವರಿಗೆ ಗೊಂದಲಿಗರು ಎನ್ನುವರು. ಇವರ ಮೇಳದಲ್ಲಿ ಕನಿಷ್ಠ ಮೂರು ಜನ ಇರುತ್ತಾರೆ. ನಾಯಕನಾದವನು ತಾಳ ಹಿಡಿದರುತ್ತಾನೆ. ಇಬ್ಬರಲ್ಲಿ ಒಬ್ಬನು ಸಂಬಾಳ ನುಡಿಸಿದರೆ ಇನ್ನೊಬ್ಬ ತುಂತಿಣಿ ಬಾರಿಸುವನು.

ತಲೆಗೆ ಕೆಂಪು ಇಲ್ಲವೆ ಬಿಳಿ ರುಮಾಲು, ಧೋತಿ, ನಿಲುವಂಗಿ, ಅದರ ಮೇಲೆ ಕರಿಕೋಟು ಕೊರಳಲ್ಲಿ ಶಲ್ಯ ಇವು ಗೊಂದಲಿಗರ ಸಾಮಾನ್ಯ ಉಡುಪುಗಳು, ವೃತ್ತಿಯಿಂದ ಗೊಂದಲಿಗರಾದರೂ ಬಿಡುವಿದ್ದಾಗ ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಾರೆ. ಹರಕೆ ಹೊತ್ತ ಅಂದೇವಿಯ ಭಕ್ತರು ತಮ್ಮ ಮನೆಗೆ (ಗೊಂದಲಿಗರಿಗೆ) ಆಹ್ವಾನಿಸಿ, ಅವರಿಂದ ಇಡೀ ರಾತ್ರಿಯೆಲ್ಲಾ ಕಥೆ ಹೇಳಿಸಿ ಗೌರವಧನ ಕೊಡುವ ವಾಡಿಕೆ ಇದೆ. ಇವರು ಪೌರಾಣಿಕ ಹಾಗೂ ಐತಿಹಾಸಿಕ ಸಾಮಾಜಿಕ ಕಥೆಗಳನ್ನು ಹೇಳುತ್ತಾರೆ. ನಡು ನಡುವೆ ಹಾಡುವುದೂ ಉಂಟು. ಕಥೆ, ಹಾಡು ಸರಳ ಮತ್ತು ಭಾವಪೂರ್ಣವಾಗಿ ಸಾಗುತ್ತದೆ. ಶ್ರೋತೃಗಳ ಕಿವಿ ಕಣ್ಣು ಗೊಂದಲಿಗ್ಗರ ಮೇಲಿರುತ್ತವೆ. ರಾತ್ರಿಯೆಲ್ಲಾ ಕಥೆ ಹೇಳಿ ಮುಂಜಾನೆ ಮಂಗಳ ಪದ ಹಾಡಿ ಗೊಂದಲ ಹಾಕುವುದು ಮಂಗಳ ಮಾಡುವರು. ಅಂಬಾದೇವಿ ಅವರಿಗೆ ಒಳಿತು ಮಾಡಲಿ ಎಂಬ ಶುಭಾಶಯ ಹೇಳುವರು. ಆನಂತರ ಶ್ರೋತೃಗಳು ಪ್ರಸಾದ ಸ್ವೀಕರಿಸಿ ತಮ್ಮ ತಮ್ಮ ಮನೆಗೆ ಹೋಗುವರು.

ಗೊಂದಲ ಹಾಕುವ ಸಂಪ್ರದಾಯ ಬೀದರ ಜಿಲ್ಲೆ ಅಲ್ಲದೆ ಕರ್ನಾಟಕದ ಇತರೆ ಕಡೆಗಳಲ್ಲಿಯೂ ಇದೆ. ಪದ್ಧತಿ ಆಚರಣೆಗಳಲ್ಲಿ ಭಿನ್ನತೆ ಕಾಣಬಹುದಾಗಿದೆ. ಬೀದರ ಜಿಲ್ಲೆಯಲ್ಲಿ ಮಡಪಳ್ಳಿ, ಬೆನಕನಹಳ್ಳಿ, ಮಾಣಿಕನಗರ ಮುಂತಾದ ಹಳ್ಳಿಗಳಲ್ಲಿ ವಾಸವಾಗಿದ್ದಾರೆ.

ಕಾಲಜ್ಞನ ಹಾಡು

ಯಾವುದಾದರೂ ಕಾರ್ಯವನ್ನು ಮಾಡಲು ತಕ್ಕ ಸಮಯ, ಕಾಲ, ಋತುಮಾನಗಳನ್ನು ತಿಳಿದವನೇ ಕಾಲಜ್ಞ, ಮುಂದೆ ಆಗುವುದನ್ನೆಲ್ಲ ತಿಳಿಸುವುದೇ ಕಾಲಜ್ಞಾನ. ಇದರ ಬಗ್ಗೆ ಆಳವಾದ ಅಧ್ಯಯನ ಮಾಡಿದವನೆ, ತಿಳಿದುಕೊಂಡವನೆ ಕಾಲಜ್ಞಾನಿ. ಈ ಕಾಲಜ್ಞಾನಿ ಭವಿಷ್ಯವನ್ನು ಹೇಳುವುದರಲ್ಲಿ ಚುರುಕಾಗಿರುತ್ತಾನೆ. ಹೊಸದೊಂದು ಸತ್ಯಯುಗ ಬರುತ್ತದೆಂದು ಹೇಳಿ ಜನರನ್ನು ಎಚ್ಚರಿಸುತ್ತಾನೆ. ಚಿಂತನೆಗೆ ಒಳಗಾಗಿಸುತ್ತಾನೆ. ಕಾಲಜ್ಞ ಸಂಪ್ರದಾಯ ವಂಶಪರಂಪರೆಯಾಗಿ ಬಂದಿರುತ್ತದೆ. ಬೀದರ ಜಿಲ್ಲೆಯ ಬಸಂತಪುರ ಗ್ರಾಮದಲ್ಲಿ ಇವರಿದ್ದಾರೆ. ಸಾಧಾರಣ ಖಾದಿ ಬಟ್ಟೆ, ಹಣೆಗೆ ವಿಭೂತಿ, ಒಂದು ಕೈಯಲ್ಲಿ ಕಂದೀಲು ಇನ್ನೊಂದು ಕೈಯಿಂದ ಕಾವಿ ಬಟ್ಟೆಯ ಕೊಡೆ (ಛತ್ರಿ) ತಲೆಯ ಮೇಲೆ ಹಿಡಿದುಕೊಂಡು ಮನೆಮನೆಗೆ ಕಾಲಜ್ಞಾನ ಹೇಳುತ್ತ ದಾನ ಪಡೆದುಕೊಳ್ಳುತ್ತಾನೆ. ಕಾಲಜ್ಞಾನದ ಸ್ವರೂಪವನ್ನು ಹೇಳುವ ವಚನಗಳು ಇವು

೧) ಕ್ವಾಟಿ ಪಾಯ ಹಾಕಮುಂದ
ದಾರಿ ತಿಳಿದಾತಣ್ಣ
ಕರಿ ಮಸೀದಿ ಮುಂದ
ಏಳು ಕಂಡುಗ ಬಳಿ ಒಡೆವ
ನೋಡಿರಣ್ಣ
ಭಾಲ್ಕಿ ಸಿದ್ಧೇಶ್ವರನ ಸವಾರಿ
ಕ್ವಾಟಿಗಿ ಬಂದಾತಣ್ಣ

೨) ಚನ್ನಬಸವಣ್ಣ ಬರುವ್ಯಾಳ್ಯಾಕ
ಬಿಲ್ಲು ಬಾಣ ಹಾರ್‍ಯಾವಣ್ಣ
ಚನ್ನ ಬಸವಣ್ಣ ಬರು ವ್ಯಾಳ್ಯಾಕ
ಕಲ್ಲಕೋಳಿ ಕೂಗ್ಯಾವಣ್ಣ

೩) ಅತ್ತಿಗಿ ಸೊಸಿ ಬಂದು
ಕಾಲಲಿ ಒದ್ದಳೋ ನೋಡಿರಣ್ಣ

೪) ಬೊಮ್ಮಗೊಂಡನ ಕರಿ ಮ್ಯಾಲ
ಹುರದಳ್ಳು ಅದಾತಣ್ಣ
ಲೆಕ್ಕಿಲ್ಲದ ಕರಿ ಕಾಗಿ ಬಂದು
ಕೀಲಾದ(ಕೋಟೆ) ಮ್ಯಾಲ ನೀರ ಕೊಂಡಾತಣ್ಣ

ಈ ಬಗೆಯ ಹಾಡುಗಳನ್ನು ಹೇಳಿ ದಾನ ಪಡೆದುಕೊಳ್ಳುತ್ತಾರೆ. ಕಾಲಜ್ಞಾ ಹೇಳುವ ಪದ್ಧತಿ ಬೀದರ ಜಿಲ್ಲೆ ಅಲ್ಲದೆ, ಉತ್ತರ ಕರ್ನಾಟಕದ ವೀರಶೈವರಲ್ಲಿ ಹೆಚ್ಚಿಗೆ ಕಂಡುಬರುತ್ತದೆ.

ಬಾಳಸಂತರ ಹಾಡು

ಆಂಧ್ರದಿಂದ ವಲಸೆ ಬಂದ ಬಾಳಸಂತೂರ ಕಲಾವಿದರು ಬೀದರ ನಗರದ ವಡ್ಡರ ಕಾಲೋನಿಯಲ್ಲಿ ವಾಸವಾಗಿದ್ದಾರೆ. ಬಾಳಸಂತೂರ ಹೆಸರು ಹೇಗೆ ಬಂತೆಂಬ ಪ್ರಶ್ನೆಗೆ ನಿಖರವಾದ ದಾಖಲೆ ಇಲ್ಲ. ಬಾಳಸಂತೂರ ಕಲೆ ಪರಂಪರಾಗತವಾಗಿ ಬೆಳೆದುಕೊಂಡು ಬಂದಿದ್ದಕ್ಕೆ ಸಾಕಷ್ಟು ದಂತ ಕಥೆಗಳಿವೆ. ಹಣೆಗೆ ಕುಂಕುಮ ಹಚ್ಚಿಕೊಂಡು, ಬಗಲಿಗೆ ಜೋಳಿಗೆ ಹಾಕಿಕೊಂಡು ಮನೆಯಿಂದ ಮನೆಗೆ ಅಲೆದು ಭಿಕ್ಷೆ ಬೇಡುವಾಗ ಬಲಗೈ ಹೆಬ್ಬೆರಳಿಗೆ ಗಗ್ಗರ ಹಾಕಿಕೊಂಡು, ಗತ್ತು ಕೂಡಿಸಿಕೊಂಡು ಹಾಡು ಹೇಳುವರು. ಇವರು ಹಾಡುವ ಹಾಡುಗಳು ಪೌರಾಣಿಕ ಮತ್ತು ಸಾಮಾಜಿಕ ಅಂಶಗಳನ್ನು ಒಳಗೊಂಡಿವೆ.

ಉದಾಹರಣೆಗೆ ಒಂದು ಹಾಡು,

ಬಂಜೆಪಲ್ಲಿ ಊರಾಗ
ಗಂಡನ ಹೆಸರು ಲಿಂಗನಗೌಡ
ಮಗ ಹಣುಮಂತ ಹಾನ್
ಮಗಳು ನರಸಮ್ಮ
ತಾಯಿ ಎಲ್ಲಮ್ಮ
ತಾಯಿ ಎಲ್ಲಮ್ಮ
ಸಿಂದಿ ಮಾರತಾಳ
ಬಂಜೆಪಲ್ಲಿ ಊರಾಗ
ಈಗ ವಡ್ಡರು ಬಂದಾರ
ಕೆರಿ ಅಲ್ಲಿ ಕಟ್ಲತಾರೆ
ಬಂಜೆಪಲ್ಲಿ ಊರಾಗ

ಹೀಗೆ ಹಾಡು ಮುಂದುವರೆಯುತ್ತದೆ. ಅಷ್ಟರಲ್ಲಿ ಆಯಾ ಮನೆಯ ಒಡತಿ, ಹಿರಿಯರು ರೊಟ್ಟಿ ಅನ್ನ, ಪಲ್ಲೆ, ಇಲ್ಲವೆ ಜೋಳ, ಗೋದಿ, ಹಿಟ್ಟು, ಬಟ್ಟೆ ದಾನವಾಗಿ ಕೊಡುವರು. ಅನಂತರ ಬಾಳಸಂತ ಕಲಾವಿದರು ಮುಂದಿನ ಮನೆಗೆ ಹೋಗಿ, ಹಿಂದಿನಂತೆ ಹಾಡು ಹೇಳುವರು. ಹೀಗೆ ಸಮಯವಾಗುವರೆಗೆ ದಾನ ಬೇಡಿಕೊಂಡು ಮನೆಗೆ ಹೋಗಿ ಹೊಟ್ಟೆ ತುಂಬಿಕೊಳ್ಳುವರು. ಇದು ಬಾಳಸಂತ ವೃತ್ತಿಗಾಯಕರ ಜೀವನ. ಬಾಳಸಂತರಿಗೆ ಭಿಕ್ಷೆ ನೀಡುವುದರಿಂದ ಮಕ್ಕಳಾಗದವರಿಗೆ ಮಕ್ಕಳಾಗುತ್ತವೆಂಬ ಜನಪದ ನಂಬುಗೆ ಹಳ್ಳಿಯವರಲ್ಲಿದೆ. ಚಿಕ್ಕಮಕ್ಕಳು ರೋಗ-ರುಜಿನಗಳಿಂದ ಬಳಲುತ್ತಿದ್ದರೆ ಆ ಮಕ್ಕಳ ಮೇಲಿನ ಬಟ್ಟೆ, ಈ ಸಂತರಿಗೆ ಕೊಟ್ಟರೆ, ಮಕ್ಕಳ ರೋಗ ಕಡಿಮೆಯಾಗುತ್ತದೆಂಬ ಭಾವನೆಯೂ ಉಂಟು.

ಬುರ್ ಬುರ್ ಪೋಚಮ್ಮ ಹಾಡು

ಡೋಲಕದ ಮೇಲೆ ಬುರ್-ಬುರ್ ಎನ್ನುವ ಶಬ್ದ ಹೊರಬರುವಂತೆ, ಬಾರಿಸುತ್ತ ಮನೆಯಿಂದ ಮನೆಗೆ ಭಿಕ್ಷೆ ಬೇಡುತ್ತ, ಉಪಜೀವನ ನಡೆಸುವ ಇವರಿಗೆ ಬುರ್-ಬುರ್ ಪೋಚಮ್ಮ ಎಂಬ ಹೆಸರು ಬಂದಿದೆ. ಪೋಚಮ್ಮ ಈ ಕಲಾವಿದರ ಧರ್ಮದೇವತೆಯಾಗಿದ್ದಾಳೆ. ಇವರು ಪ್ರತಿನಿತ್ಯ ಸುರ್ಯೋದಯದ ಹೊತ್ತಿಗೆ ನಗರ ಇಲ್ಲವೆ ಹಳ್ಳಿಯ ಮನೆಮನೆಗೆ ಹೋಗಿ ಭಿಕ್ಷೆ ಬೇಡುವರು. ದಾನ ಕೊಟ್ಟ ಹರಕು-ಬರಕು ಬಟ್ಟೆ ಧರಿಸಿ, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕೈಯಲ್ಲಿ ಡೋಲಕ್ ಹಿಡಿದು ಬುರ್-ಬುರ್ ಶಬ್ದ ಮಾಡುತ್ತ ಕುಣಿಯುತ್ತ ಹಾಡು ಹೇಳುವರು.

ಏ ಎಮ್ಮೋ, ದಾನ ತಾರಮ್ಮ
ಬಾರಮ್ಮೋ ಬಾ ತಾಯಿ
ಕಲ್ಲಮ್ಮ ಮಲ್ಲಮ್ಮ
ಬೇಗ ಬಾರಮ್ಮ
ಹಿಟ್ಟು ತಾರಮ್ಮ

ಹಡೆದವ್ವ! ಮಕ್ಕಳು-ಮರಗುಳೆ ತಣ್ಣಗಿರಲವ್ವ! ಎನ್ನುವ ಚಟುಕು ಹಾಡುಗಳು ಇವರದಾಗಿವೆ. ಆಶುಕವಿಯಂತೆ ಅಲ್ಲಿಂದಲ್ಲೆ ಹಾಡು ಕಟ್ಟಿ ಹೇಳುತ್ತಾರೆ. ಇಬ್ಬರಿಂದ ಐದು ಜನರ ಮೇಳ ಇವರದಾಗಿರುತ್ತದೆ. ಡೋಲಕ್ ಬಾರಿಸುವ ಕಲಾವಿದನೆ ಹಾಡು ಹೇಳುವನು. ಇನ್ನೂಳಿದ ಕಲಾವಿದರು ಆ ಹಾಡನ್ನೆ ಪುನರಾವರ್ತನೆ ಮಾಡಿ ಕುಣಿದು ಕುಪ್ಪಳಿಸುವರು. ಕಾಣಿಕೆ ಸ್ವೀಕರಿಸಿ ಮುಂದಿನ ಮನೆ ಇಲ್ಲವೆ ಅಂಗಡಿಗೆ ಸಾಗುವರು. ಶಿವರಾತ್ರಿಯಲ್ಲಿ ಬೀದರಿನ ಪಾಪನಾಶಿನಿ ಜಾತ್ರೆಯಲ್ಲಿ, ದೀಪಾವಳಿ ಹಬ್ಬದ ಸಂದರ್ಭದಲ್ಲಿ ಅಂಗಡಿಗಳ ಮುಂದೆ ಇವರ ಕಲೆ ನೋಡಿ ಆನಂದಿಸಬಹುದಾಗಿದೆ. ಕೆಲವು ಸಲ ಬಾರಕೋಲಿನಿಂದ ತಮ್ಮನ್ನ ತಾವೇ ಬಡಿದುಕೊಂಡು ರಕ್ತ ಬರುವವರೆಗೆ ಹೊಡೆದುಕೊಳ್ಳುತ್ತಾರೆ. ಇವರ ಮೈಮೇಲಿನ ರಕ್ತ ಕಂಡು ಹಾದಿ ಬೀದಿಯಲ್ಲಿ ಹೋಗುವ ಜನರು ಕಾಣಿಕೆ ಕೊಟ್ಟು ಮುನ್ನುಗ್ಗುತ್ತಾರೆ. ಆ ಹಣವೇ ಈ ಕಲಾವಿದರ ಉಸಿರಾಗಿರುತ್ತದೆ. ಈ ಕಲಾವಿದರು ಬೀದರ ನಗರದ ಮೈಲೂರ್ ರಸ್ತೆ, ಹುಮನಾಬಾದ ನಗರದಲ್ಲಿ ಆದಿವಾಸಿಗಳಂತೆ ಉಪಜೀವನ ನಡೆಸುತ್ತಿದ್ದಾರೆ.

ಇಂಥ ವೃತ್ತಿ ಕಲಾವಿದರು, ಇಂದು ತಮ್ಮ ಕಲೆಗೆ ಕೈ ಮುಗಿದು ಇತರೆ ಕೆಲಸ ಕಸಬುಗಳಲ್ಲಿ ತಮ್ಮನ್ನೆ ತಾವು ತೊಡಗಿಸಿಕೊಂಡಿದ್ದಾರೆ. ಮಕ್ಕಳು ವ್ಯರಿಗಳಿಗೆ, ಕೂಲಿ-ನಾಲಿ ಕೆಲಸಕ್ಕೆ ಕಳಿಸುತ್ತಿದ್ದಾರೆ.

ಬುಲಾಯಿ ಹಾಡು :

ನಾರಿಯರ ಹಬ್ಬವೇ ನಾಗಪಂಚಮಿ ಹಬ್ಬ, ಈ ಹಬ್ಬದ ಸಂದರ್ಭದಲ್ಲಿ ನಾರಿಯರು ಹಾಡುವ ಹಾಡುಗಳೇ ಬುಲಾಯಿ ಹಾಡುಗಳು. 'ಬುಲಾಯಿ' ಅನ್ನುವ ಪದ ಉರ್ದುವಿನ 'ಬಹಲಾವ್' ಶಬ್ದದಿಂದ ಬಂದಿರಬೇಕೆಂದು ತೋರುತ್ತದೆ. 'ಬಹಲಾವ್' ಎಂದರೆ ಮನರಂಜನೆ ಎಂದರ್ಥ. ಮನರಂಜನೆಯ ಪ್ರತೀಕವಾದ ಬುಲಾಯಿ ಹಾಡುಗಳು ರಜಾಕಾರರ ಹಾವಳಿ, ಪೌರಾಣಿಕ ಕಥೆಗಳು ಹಾಗೂ ಐತಿಹಾಸಿಕ ಕಥೆಗಳು ಘಟನೆಗಳಿಂದ ಕೂಡಿವೆ. ರಜಾಕಾರ್ ಎಂದರೆ 'ಸ್ವಯಂ ಸೇವಕ' ಎಂದರ್ಥ. ೧೯೪೮ರ ರಜಾಕಾರರು (ಮುಸ್ಲಿಂ ಸ್ವಯಂ ಸೇವಕರು) ಹಿಂದೂಗಳ ಮೇಲೆ ಮಾಡಿದ ದಾಂಧಲೆ ಕುರಿತಾದ ಹಾಡುಗಳೇ ರಜಾಕಾರರ ಹಾವಳಿ ಹಾಡುಗಳು. ಇಂಥ ಹಾಡುಗಳು ಬೀದರ್ ಜಿಲ್ಲೆಗೆ ಮಾತ್ರ ಸೀಮಿತವಾಗಿವೆ.

ನಾಗಾರಾಧನೆಯ ನಾಗಪಂಚಮಿ ಹಬ್ಬ. ಇದು ಶ್ರಾವಣ ಮಾಸದ ಶುದ್ಧ ಪಂಚಮಿಯಂದು ಆಚರಿಸುವಂಥದು. ಶ್ರಾವಣ ತಿಂಗಳಲ್ಲಿ ಸುತ್ತ-ಮುತ್ತಲ್ಲೂ ಹಸುರು ಬೆಳೆದು ನಿಂತಿರುತ್ತದೆ. ಆ ಕಾಲದಲ್ಲೇ ಹಾವುಗಳ ಕಾಟವೂ ಹೆಚ್ಚು. ಈ ವಿಷಯದ ಕುರಿತು ಒಂದು ಜನಪದ ಕಥೆಯಿದೆ. ಬಡಪಾಯಿಯಾದ ಅಣ್ಣ ತಂಗಿಯನ್ನು ತವರಿಗೆ ಕರೆತರಲು ಬಂದ. ತಂಗಿ ಶ್ರೀಮಂತ ಮನೆತನದ ಸೊಸೆ. ತಂಗಿಯನ್ನು ಕರೆದುಕೊಂಡು ಹೋಗುತ್ತಿದ್ದ ಅಣ್ಣನಿಗೆ ತಂಗಿಯ ಮೇಲಿದ್ದ ಚಿನ್ನದ ಆಭರಣಗಳ ಮೇಲೆ ದುರಾಶೆಯುಂಟಾಯಿತು. ಅವನ್ನೆಲ್ಲ ಕೊಡು ಎಂದು ಕೇಳಿದ. ಆಕೆ ಸಂತೋಷದಿಂದ ಕೊಡಲು ಒಪ್ಪಿದಳು. ಅದಕ್ಕೂ ತಾಳದೆ ಆಕೆಯನ್ನು ಕೊಂದುಬಿಡಲು ಯೋಚಿಸಿ ಕಲ್ಲುಬಂಡೆಯನ್ನೊಂದು ಎತ್ತಿದ. ಅದರ ಕೆಳಗಿದ್ದ ಹಾವೊಂದು ಅವನನ್ನು ಕಚ್ಚಿ ಕೊಂದಿತು. ಇದನ್ನು ಕಣ್ಣಾರೆ ಕಂಡ ತಂಗಿ ನಾಗದೇವನನ್ನು ಪ್ರಾರ್ಥಿಸಿ ಅಣ್ಣನನ್ನು ಬದುಕಿಸಿದಳು. ಅಂದು ಶ್ರಾವಣ ಶುದ್ಧ ಚೌತಿ. ಅಂದಿನಿಂದ 'ನಾಗರದ ಪಂಚಮಿ' ಹೆಣ್ಣು ಮಕ್ಕಳಿಂದ ಆಚರಿಸಲಾಗುವ ನಾಗಾರಾಧನೆಯ (ನಾಗರ ಪಂಚಮಿ) ಹಬ್ಬದ ದಿನವಾಗಿ ಹಾಗೂ ತವರುಮನೆಗೆ ಹೆಣ್ಣು ಕರೆತರುವ ಹಬ್ಬವಾಗಿ ರೂಪ ಪಡೆಯಿತೆಂಬ ಕಥೆ ಇದಾಗಿದೆ.

ಈ ನಾಗರ ಪಂಚಮಿ ಹಬ್ಬದ ಕಥೆಯ ಜೊತೆಗೆ ಇನ್ನೊಂದು ಕಾರಣವೂ ಹೌದು. ಗಂಡನ ಮನೆಯಲ್ಲಿ ಅನುಭವಿಸಿದ್ದ ಕಷ್ಟಗಳ ಭಾರವನ್ನು ತವರುಮನೆಯಲ್ಲಿ ಹಾಡಿ ಪಾಡಿ-ಕುಣಿದು-ಕುಪ್ಪಳಿಸಿ ಉಯ್ಯಾಲೆಯಾಡಿ ಹಗುರು ಮಾಡಿಕೊಳ್ಳುವ ಭಾವವನ್ನು ಪ್ರತಿನಿಧಿಸುವ ಹಾಡು ಇದಾಗಿದೆ.

ನಾಗರಪಂಚಮಿ ನಾಡ ಹೆಣ್ಣಿಗೆ ಹಬ್ಬ
ನಾಗಪ್ಪಗ್ಹಾಲ ಎರಿಯೋಣ-ನನ್ಗೆಣತಿ
ನಾಗರ ಹೆಡಿಹಾಂಗ ಆಡೋಣ
ಅಳ್ಳಿಟ್ಟು ತಂಬಿಟ್ಟು ಮಾಡಿಟ್ಟ ಏಳ್ಳುಂಡಿ
ದಳ್ಳುರಿ ಕಣ್ಣ ಹಣೆಯಾನ ಕೊರಳಾನ

ನಾಗ ನಿನಗೆಡೆಯೋ ಕೈಮುಗಿರೋ

ನಾಗರ ಪಂಚಮಿ ಬಂತೆಂದರೆ ಗಂಡನ ಮನೆಯಿಂದ ಹೆಣ್ಣುಮಕ್ಕಳು ತವರು ಮನೆಗೆ ಹೋಗಲು ಆತುರಪಡುತ್ತಾರೆ. ಅಣ್ಣ ಯಾವಾಗ ಬರುವನೋ, ಇನ್ನು ಯಾಕೆ ಬಂದಿಲ್ಲ ಎಂದು ಚಿಂತಿಸುತ್ತಾರೆ. ಯಾರಾದರೂ ದೂರದಿಂದ ಬರುವುದು ಕಂಡರೆ ಸಾಕು, ತನ್ನನ್ನು ತವರಿಗೆ ಕರೆದೊಯ್ಯಲು ಬರುತ್ತಿದ್ದಾರೆಂದು ಭಾವಿಸುತ್ತಾರೆ. ಯಾರೂ ಕಾಣದೆ ಇದ್ದಲ್ಲಿ ತನ್ನನ್ನು ತವರಿನವರು ಮರೆತಿರಬಹುದೆಂದು ಊಹಿಸುತ್ತಾರೆ. ಅಷ್ಟರಲ್ಲಿ ಅಣ್ಣ ಬರುವುದು ಕಾಣಿಸುತ್ತದೆ. ಆಗ ಅವರ ಸಂತೋಷಕ್ಕೆ ಮಿತಿಯೇ ಇಲ್ಲ. ತಂಗಿ ತನ್ನ ತವರ ಮನೆಗೆ ಬಂದ ಮೇಲೆ ರಸಪಾಕದ ಅಡಿಗೆಗಳು ಹುಟ್ಟಿಕೊಳ್ಳುತ್ತವೆ. ಉಂಡು-ತಿಂದು ನಲಿಯುತ್ತ ಸಂಜೆ ಹೊತ್ತಿಗೆ ಗೆಳತಿಯೊಂದಿಗೆ ಆಪ್ತರೊಂದಿಗೆ ಬಂಧು-ಬಳಗದವರೊಂದಿಗೆ ತನ್ನ ನೋವು ನಲಿವಿನ ಮಾತುಗಳನ್ನಾಡಿ ಕಾಲ ಕಳೆಯುತ್ತಾರೆ. ಸರಸ-ಸಲ್ಲಾಪ ಚರ್ಚೆ ಮಾಡಿ ಉಲ್ಲಾಸ ಪಡುತ್ತಾರೆ. ಕಥೆ ಹೇಳಿ-ಕೇಳಿ ಸಂತೋಷಪಡುತ್ತಾರೆ. ಜೋಕಾಲೆ ಆಡುತ್ತಾರೆ. 'ಬುಲಾಯಿ' ಹಾಕುತ್ತಾರೆ. ಹಾಡು ಹೇಳಿ ಮೈಮರೆಯುತ್ತಾರೆ. ಇಂಥ ಪ್ರಸಂಗಗಳು ನಾಗರ ಪಂಚಮಿ ಹಬ್ಬದ ಸಂದರ್ಭದಲ್ಲಿ ನಡೆಯುತ್ತಿರುತ್ತದೆ.

ಬುಲಾಯಿ ಹಾಡುಗಳು ಬೀದರ ಜಿಲ್ಲೆಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮಾತ್ರ ಕೇಳಬಹುದು. ನಾಗರಪಂಚಮಿ ಹಬ್ಬಕ್ಕೆಂದು ತವರು ಮನೆಗೆ ಬಂದ ಹೆಣ್ಣು ಮಕ್ಕಳು ಹಾಗೂ ಊರಿನವರು ಅಥವಾ ಓಣಿಯ ಹೆಣ್ಣುಮಕ್ಕಳೆಲ್ಲ ಸೇರಿ ಬುಲಾಯಿ ಹಾಕುತ್ತಾರೆ. ನಾಗರಪಂಚಮಿ ಇನ್ನೂ ೧೫-೨೦ ದಿವಸಗಳು ಮುಂದಿರುವಾಗಲೇ ಬುಲಾಯಿ ಪ್ರಾರಂಭಿಸುತ್ತಾರೆ. ಪ್ರತಿ ದಿನ ರಾತ್ರಿ ಹೆಣ್ಣುಮಕ್ಕಳೆಲ್ಲ ಉಂಡು-ತಿಂದು ಮನೆಗೆಲಸ ಮುಗಿಸಿ ಬುಲಾಯಿಗೆ ಸಿದ್ಧರಾಗುತ್ತಾರೆ. ಆಯಾ ಹಳ್ಳಿಯಲ್ಲೆ ಅವರವರ ಓಣಿಗೆ ಅವರದೇ ಆದ ಒಂದು ಗುಂಪು ಕಟ್ಟಿಕೊಂಡಿರುತ್ತಾರೆ. ಆ ಓಣಿಯ ಸ್ತ್ರೀಯರು ಆ ಓಣಿಯ ಯಾರಾದರೊಬ್ಬರ ವಿಶಾಲದವಾದ ಮನೆಯ ಅಂಗಳದಲ್ಲಾಗಲಿ ಅಥವಾ ದೇವಾಲಯದ ಮುಂಭಾಗದಲ್ಲಾಗಲಿ ಬಂದು ಸೇರುತ್ತಾರೆ. ನಾಲ್ಕರಿಂದ ಹತ್ತು-ಹದಿನೈದು ಮಹಿಳೆಯರು ಅಲ್ಲಿರುತ್ತಾರೆ. ಎಲ್ಲರೂ ಗೋಲಾಕಾರದಲ್ಲಿ ನಿಂತ ಪ್ರತಿಯೊಬ್ಬರೂ ಕೈ ಕೈ (ಒಬ್ಬರ ಕೈ ಒಬ್ಬರು) ಹಿಡಿದುಕೊಂಡು ಹಾಡುವುದು ಪ್ರಾರಂಭಿಸುತ್ತಾರೆ. ಹಾಡು ಪ್ರಾರಂಭವಾದ ಕೂಡಲೇ ಗೋಲಾಕಾರದಲ್ಲೆ ಮೆಲ್ಲಗೆ ಸುತ್ತಲು ಪ್ರಾರಂಭಿಸುತ್ತಾರೆ. ಒಬ್ಬರು ಇಲ್ಲವೆ ಇಬ್ಬರು ಮಹಿಳೆಯರು ಮಾತ್ರ ಇಡೀ ಹಾಡನ್ನು ಹೇಳುವರು. ಆ ಹಾಡಿನ ಕೊನೆಯ ಎರಡು ಪಾದಗಳನ್ನು ಉಳಿದ ಮಹಿಳೆಯರು ಹೇಳುತ್ತಾರೆ. ಮುಂದೆ ಹಾಡುವ (ಮುಮ್ಮೇಳ) ಮಹಿಳೆಯರಿಬ್ಬರು ಸ್ವಲ್ಪ ಬಾಗುತ್ತಾರೆ. ಅದರಂತೆ ಹಿಂದೆ ಹಾಡುವ (ಹಿಮ್ಮೇಳ) ಮಹಿಳೆಯರು ಬಾಗುವರು. ಹಾಡಿನ ಪ್ರತಿ ನುಡಿಯ ಕೊನೆಗೆ "ಕೋಲೆಣ್ಣ ಕೋಲೆ" ಎನ್ನುತ್ತಾರೆ. ಆದರೆ ಯಾರೂ ಕೋಲು ಹಾಕುವುದಿಲ್ಲ. ಹಿಂದಿನ ಕಾಲದಲ್ಲಿ ಕೈಯಲ್ಲಿ ಹಿಡಿದ ಕೋಲನ್ನು ನುಡಿಸುತ್ತ ಹೇಳುತ್ತಿದ್ದ ಈ ಹಾಡುಗಾರಿಕೆಯಲ್ಲಿ 'ಕೋಲೆಣ್ಣ ಕೋಲು' ಎಂಬ ಪಾಠ ಉಳಿದುಕೊಂಡಿದ್ದರೂ ಇತ್ತೀಚೆಗೆ ಕೋಲು ಮಾಯವಾಗಿ ಹೋಗಿದೆ. ಬುಲಾಯಿ ಹಾಡುಗಳು ದೀರ್ಘವಾಗಿರುತ್ತವೆ. ಕೆಲವೊಂದು ಹಾಡುಗಳು ರಾತ್ರಿ ಹಾಡಲು ಸುರು ಮಾಡಿದರೆ ಬೆಳಗಿನವರೆಗೂ ಸಾಗುವುದುಂಟು.

ವಿಶ್ರಾಂತಿಗೆಂದು ಕುಳಿತಾಗ ಬುಲಾಯಿ ಹಾಕುವ (ಹಾಡುವ) ಮಹಿಳೆಯರಿಗಾಗಿ ಹತ್ತಿರದ ಮನೆಯ ಗರತಿಯರು ಚಹ ಚುಡಾದ ವ್ಯವಸ್ಥೆ ಮಾಡುತ್ತಾರೆ. ಇದಾದ ನಂತರ ಬುಲಾಯಿ ಮುಂದುವರಿಯುತ್ತದೆ. ಇಷ್ಟೇ ಹೊತ್ತು ಬುಲಾಯಿ ಹಾಕಬೇಕೆಂಬ ಯಾವ ನಿಬಂಧನೆಗಳು ಇಲ್ಲ. ಅವರವರ ಇಷ್ಟದಂತೆ ಬುಲಾಯಿ ಹಾಕಿ ಮನೆ ಸೇರಿ ಮಲಗುವ ಸಂಪ್ರದಾಯ ಇನ್ನೂ ಈ ಕೆಂಪು ಮಣ್ಣಿನ (ಬೀದರ ಜಿಲ್ಲೆಯ) ಮಹಿಳೆಯರು ಉಳಿಸಿಕೊಂಡು ಬಂದಿದ್ದಾರೆ.

ಬುಲಾಯಿ ಹಾಡುಗಳ ಧಾಟಿ ಒಂದೆ ಎನಿಸುತ್ತದೆ. ಕೇಳಲು ಕುಳಿತರೆ ಸಮಯವಾಗಿದ್ದು ತಿಳಿಯುವುದೇ ಇಲ್ಲ. ಈ ಹಾಡುಗಳಲ್ಲಿ ಉರ್ದು-ಹಿಂದಿ-ಮರಾಠಿ ಮತ್ತು ತೆಲಗು ಭಾಷೆಯ ಶಬ್ದಗಳು ಸೇರಿಕೊಂಡಿವೆ. ಇದಕ್ಕೆ ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದ ಸೀಮೆಯೇ ಕಾರಣವಾಗಿದೆ. ಹೀಗಾಗಿ ಸಮ್ಮಿಶ್ರ ಭಾಷೆಯ ಪ್ರತೀಕವಾದ ಬುಲಾಯಿ ಹಾಡುಗಳು ಭಾಷಾ ವೈವಿಧ್ಯದ ದೃಷ್ಟಿಯಿಮದಲೂ ಮುಖ್ಯವೆನಿಸಿವೆ. ಸೋಮರಾಯ, ಭೀಮರಾಯ, ನೀಲಕಂಠರಾಜನ ಕತೆ, ಹೇಮರೆಡ್ಡಿ ಮಲ್ಲಮ್ಮ, ಕುಮಾರ ರಾಮರಂಥ ಪ್ರಾಚೀನ ಚರಿತ್ರೆಗಳೂ ಕಡ್ಲೀಮಟ್ಟಿ ಕಾಶೀಬಾಯಿ, ರಜಾಕಾರರ ಹಾವಳಿಯಂಥ ಇತ್ತೀಚಿನ ಘಟನೆಗಳೂ, ಕಲ್ಪಿತ ಕಥೆಗಳೂ, ದೇವ ಸ್ತೋತ್ರಗಳೂ ಮುಂತಾದ ವಿಷಯಗಳ ಪ್ರಸ್ತಾಪ ಬರುವ ಈ ಹಾಡುಗಳು ಶೋಷಣೆ, ಅಸಹಾಕತೆ, ತ್ಯಾಗ, ಸಹನೆ, ಧೈರ್ಯ ಪ್ರತಿನಿಧಿಸುತ್ತವೆ. ಸತ್ಯಕ್ಕೆ ಸತ್ಯವೇ ಕೊನೆ. ದುಷ್ಟರಿಗೆ ಶಿಕ್ಷೆಯೇ ಕೊನೆ, ಎಂಬುದನ್ನು ಬುಲಾಯಿ ಹಾಡುಗಳು ಸಾರುತ್ತವೆ. ನಿಜ ಜೀವನದಲ್ಲಿ ಕಾಣುವ ನೋವು-ನಲಿವು-ನಿರಾಸೆ ಅಕಾಂಕ್ಷೆಗಳು ಈ ಹಾಡುಗಳಲ್ಲಿ ಹಾಸು ಹೊಕ್ಕಾಗಿದೆ. ನಿಸ್ವಾರ್ಥ, ನಿಷ್ಠೆ, ಸಹಬಾಳ್ವೆ, ಬಲಿದಾನ ತ್ಯಾಗ ಕುರಿತ ಬುಲಾಯಿ ಪದಗಳು ನಾವು ಮೆಲುಕು ಹಾಕಿದಂತೆಲ್ಲಾ ಜೀವನ ಸಾರ್ಥಕವಾಗುತ್ತದೆ.

ಬುಲಾಯಿ ಪದಗಳು ಇತಿಹಾಸ ಹಾಗೂ ಪುರಾಣಗಳಲ್ಲಿ ಕಾಣಿಸಿಕೊಳ್ಳುವ ಮಹಾಪುರುಷರ ಕುರಿತಾಗಿವೆ. ಸಂಭಾಷಣಾ ರೂಪದ ಸರಪಳಿಯಂತಿರುವ ಈ ಹಾಡುಗಳು ತುಂಬಾ ಸ್ವಾರಸ್ಯಕರವಾಗಿವೆ. 'ಕೋಲೆಣ್ಣ ಕೋಲೆ' ಎಂಬ ಪುನರಾವರ್ತನೆಯಾಗುವ ಪ್ರತಿ ನುಡಿಯೊಂದಿಗೆ ಈ ಹಾಡು ಹಾಡಲಾಗುತ್ತದೆ. ಬುಲಾಯಿ ಹಾಡುಗಳು ಕೇಳುವಾಗ ಯಾವುದೋ ಒಂದು ಘಟನೆಯು ನೆನಪಿಗೆ ಬಂದಂತಾಗುತ್ತದೆ. ಮೊಹರಂ ಹಾಡುಗಳು ಸ್ವರೂಪದಂತೆ ಇರುವ ಬುಲಾಯಿ ಪದಗಳು ಮುಂದೆ ಹಾಡುವವರ ಗತಿಗೆ ತಕ್ಕಂತೆ ಹಾಡಿನ ಧಾಟಿ ಇರುತ್ತದೆ. ಹಿಗ್ಗಿಸಿ ಕುಗ್ಗಿಸಿ ಹಾಡನ್ನು ಹೇಳುತ್ತಾರೆ. ಜೋಕು ಹಾಕುತ್ತಾರೆ.

ಸಾಮಾನ್ಯವಾಗಿ ಬುಲಾಯಿ ಪದಗಳು ಹಾಡುವಾಗ ಅದರ ಎರಡು ಸಾಲನ್ನು ಎರಡು ಸಲ ಹೇಳುವ ವಾಡಿಕೆ ಇದೆ.

ತಾಯಿ ಹೆಮ್ಮರಡ್ಡಿ ತಂದಿ ಕತ್ತಲರಾಯ
ಕಂದ ಅಯ್ಯನ ಹೆಸರು ಕಾಳಿಂಗರಾಯ

ಕೋಲೆಣ್ಣ ಕೋಲೆ

ಈ ಹಾಡನ್ನು ಮುಮ್ಮೇಳದವರು ಹಾಡುವಾಗ

ತಾಯಿ ಹೆಮ್ಮರಡ್ಡಿ ತಂದಿ ಕತ್ತಲರಾಯ
ಕಂದ ಅಚ್ಯುನ ಹೆಸರು ಕಾಳಿಂಗರಾಯ
ಕೋಲೆಣ್ಣ ಕೋಲೆ

ಎಂದು ಹಿಮ್ಮೇಳದವರು ಹಾಡುತ್ತಾರೆ. ಹೀಗೆ ಹಾಡಿನ ಪಾದಗಳು ಪುನರಾವರ್ತನೆಗೊಳ್ಳುತ್ತವೆ.

ಬುಲಾಯಿ ಹಾಡುಗಳು ದ್ವಿಪದಿಯಲ್ಲಿರುತ್ತವೆ. ದ್ವಿಪದಿ ಎಂದರೆ ಎರಡು ಪಾದಗಳುಳ್ಳ ಪದ್ಯಗಳು. ಈ ಗ್ರಂಥದಲ್ಲಿರುವ ಹಾಡುಗಳೆಲ್ಲ ಎರಡು ಪಾದದ ನ್ಮಡಿಗಳನ್ನು ಹೊಂದಿವೆ.

೧. ಜನಕ ರಾಜನ ಹೊಟ್ಟಿಲಿ ಹುಟ್ಯಾಳೆ ಸೀತಾದೇವಿ
ಸೂರ್ಯ ಹೊಳದಾಂಗ ಹೊಳದಾಳ ಕೋಲ.

೨. ಸೂರ್ಯ ಹೊಳದಾಂಗ ಹೊಳದಾಳೆ ಸೀತಾದೇವಿ
ಬಾಣೆತ್ತಿದವರಿಗೆ ಮಗಳ ಕೊಡುವೆ ಕೋಲ.

೩. ಮುತ್ತಲ ಎಲಿಮ್ಯಾಲ ಪತ್ರವ ಬರೆದಾರೆ
ದೊಡ್ಡ ದೊಡ್ಡ ರಾಜರಿಗೆ ಖಳವ್ಯಾರ ಕೋಲ.

ಈ ರೀತಿಯ ಎರಡು ಸಾಲಿನ ಪದ್ಯಗಳಿಗೆ 'ದ್ವಿಪದಿ' ಸ್ವರೂಪ ಪಡೆಯುತ್ತವೆ.

ಬುಲಾಯಿ ಹಾಡುಗಳು ಸ್ಥಳೀಯ ಸಜೀವ ಭಾಷೆಯಿಂದ ಕೂಡಿವೆ. ಮರಾಠಿ, ಹಿಂದಿ, ಉರ್ದು ಮತ್ತು ತೆಲಗು ಭಾಷೆಯ ಶಬ್ದಗಳು ಕನ್ನಡದೊಂದಿಗೆ ಕಳ್ಳುಬಳ್ಳಿಯಂತೆ ಬೆರೆತುಕೊಂಡಿವೆ. ಅನ್ಯಭಾಷೆಯ ಶಬ್ದಗಳೆಂದೆ ಹೆಕ್ಕಿ ತೆಗೆಯುವುದೇ ತಾಪತ್ರಯ ಕೆಲಸ. ಹೀಗಾಗಿ ಒಂದು ಪ್ರದೇಶದ ಆಡುನುಡಿ ಇನ್ನೊಂದು ಪ್ರದೇಶದವರಿಗೆ ಅರ್ಥವಾಗದಂತಹ ಪರಿಸ್ಥಿತಿಯೂ ಇದೆ.

ಉದಾಹರಣೆಗಾಗಿ : ಬೀದರ್ ಜಿಲ್ಲೆ ಅಥವಾ ಪ್ರದೇಶದ ಉತ್ತರಗಡಿಯ ಜನರಾಡುವ ಮಾತಿನ ರೀತಿ ಮಿಕ್ಕಕಡೆಯವರಿಗೆಲ್ಲ ಅಪರೂಪ ಇಲ್ಲವೆ ವಿಲಕ್ಷಣವಾಗಿ ಕಾಣಬಹುದು. ಕನಸ್ಯಾರೆ, ಬರಸ್ಯಾರೆ, ನೆರದಾರ, ಸಟ್ಟಂತ, ಝುಟ್ಟಂತ, ಬರಬ್ಯಾಡೆ, ನಡೆದಾರೆ, ಹುಡಕ್ಯಾರೆ, ಮಲಗ್ಯಾರೆ, ಬೆಳಗ್ಯಾರೆ, ಎಚ್ಚಟಾಗೇವ, ಖಳುಲಾಕ, ಹೊಗ್ಯಾರ, ಝುಡಿ ಝುಡಿ ಮಳೆ, ವಾಪೀಸು, ಮೋರಿ, ವ್ಯಾಗೀನ ಗಿರಿ, ಜ್ವಾಕೆ, ರಂಡೇರು, ಅಗ್ಯಾಳ, ರ್‍ವಾಡಿ, ಬಂಗುಲಾ, ಬಗಸ್ಯಾದೋ, ಖಾಯಿಲೆ, ಛೆಲ್ಲು, ತರುಕೂರು, ಹಲಾಸ್, ಬಾಹದ್ದೂರ್, ದಂಗಾ, ಕಾವುಣ, ಖಾಸ್, ಗಣಸಾ, ಹತಿಯಾರ್, ಅರಬಿ, ಜಂಗ, ಹುಕಂ, ಕಬ್ಜಾ, ಖಿಲ್ಲೆ, ರುಂಡಾ, ತೀನಕೋಟಿ, ಝುಂಡಾ, ದವತಿ,

ದಸತಿ, ಮಂಚೆಗಿ, ಕವಣಿ, ಅಡಗ್ಯಾರ, ಖಾಂಡ, ಬಳಸ್ಯಾರ, ಉಡಗ್ಯಾರ, ಹುರಿದಾಳ, ಕಳವಿ, ಕುಂತಾಳ, ಜಾಯದಾತು, ಅತ್ಯಾಚಾರ್, ಸಿಗಸ್ಯಾರ, ದೌಡ್, ಜೇಲ್, ದುಂಧಾ, ಫಾಟ್, ನೇಕಿ, ಕಾನೂನ, ಖುಲ್ಲಾ, ತಕತಾ, ಕಮಿನಿಷ್ಟ, ತೀರಂಗಿ ಝುಂಡಾ ಮತ್ತು ತಯ್ಯಾರ ಇಂಥ ನೂರಾರು ಅನ್ಯಭಾಷೆಯ ಶಬ್ದಗಳು ಈ ಬುಲಾಯಿ ಹಾಡುಗಳಲ್ಲದೆ ನಿತ್ಯದ ದಿನಚರಿಯಾಗಿ ಶ್ರೀಸಾಮಾನ್ಯರ ಬಾಯಲ್ಲಿ ಕುಣಿದಾಡುತ್ತವೆ. ಇದಕ್ಕೆಲ್ಲ ಆಂಧ್ರ, ಮಹಾರಾಷ್ಟ್ರದ ಗಡಿ ಹಾಗೂ ನಿಜಾಮನ ರಿಯಾಸತ್ ಕಾರಣವಾಗಿದೆ.

ಈ ಬುಲಾಯಿ ಹಾಡುಗಳು ಪ್ರಾದೇಶಿಕ ಭಾಷಾ ವೈಲಕ್ಷಣ್ಯ ವಿಕೃತಿಗಳಿಂದ ಕೂಡಿದ್ದಾಗಿದ್ದು, ಒಂದು ಪ್ರದೇಶದ ಸಾಹಿತ್ಯ ಇನ್ನೊಂದು ಪ್ರದೇಶದವರಿಗೆ ಸುಲಭ ಸಹಜವಾಗಿ ಅರ್ಥವಾಗಲಾರದು, ಹೀಗಾಗಿ ಎಲ್ಲ ಪ್ರಾದೇಶಿಕ ಭಾಷೆಗಳ ಪರಿಚಯ ಮಾಡಕೊಂಡಾಗ ಅದು ಸಾಧ್ಯವಾಗಬಹುದು.

ಕೆಂಪು ಮಣ್ಣಿನ ಬುಲಾಯಿ ಹಾಡುಗಳು ಕನ್ನಡಿಗರ ಜೀವದುಸಿರಾಗಿ ಹೊರಟು ಹಬ್ಬಿ ನಿಂತಿವೆ. ಬೀದರ್ ಜಿಲ್ಲೆಯ ನೆಲದಷ್ಟೇ ವಿಸ್ತಾರವುಳ್ಳದಾಗಿವೆ. ಪ್ರತಿಯೊಂದು ಹಟ್ಟಿಯಲ್ಲಿಯೂ, ಪ್ರತಿಯೊಮದು ಮನೆಯಲ್ಲಿಯೂ, ಪ್ರತಿಯೊಬ್ಬರ ಬಾಯಲ್ಲಿಯೂ ನಮಗೆ ಹೊಸ ಹೊಸ ಹಾಡುಗಳು ದೊರೆಯುತ್ತವೆ.

ಜೀವನವನ್ನು ಮುಖ್ಯ ತಳಹದಿಯಾಗಿ ಮಾಡಿಕೊಂಡ ವಿಚಾರಗಳಿಗೆ ಒತ್ತು ನೀಡುವ ಜನಪದ ಸಾಹಿತ್ಯದ ಪ್ರಮುಖ ಅಂಗವಾದ ಬುಲಾಯಿ ಹಾಡುಗಳಲ್ಲಿ ಕಷ್ಟ ಸಹಿಷ್ಣುತೆ, ಛಲ, ದ್ವೇಷ, ತ್ಯಾಗ, ಪ್ರೇಮ, ಸಾಹಸ, ನೋವು, ನಗೆ ಎಲ್ಲವು ಸೇರಿವೆ. ಹೈದ್ರಾಬಾದ ನೈಜಾಂ ಆಡಳಿತಕ್ಕೆ ಒಳಪಟ್ಟ ಬೀದರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ವಾಸವಾಗಿದ್ದ ಹಿಂದುಗಳು ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ತನು–ಮನ ಧನ ಸವೆಸಿ ದೇಶ–ನಾಡು–ನುಡಿಗಾಗಿ ಅಹೋರಾತ್ರಿ ಹೋರಾಡಿ ರಜಾಕಾರರ ಹೊಡೆತ ಮತ್ತು ತುಳಿತಕ್ಕೆ ಒಳಗಾಗಿ ಸಾವನ್ನೊಪ್ಪಿದ ಮಹನೀಯರುಗಳ ತ್ಯಾಗ ಕಡ್ಲಿಮಟ್ಟಿ ಕಾಶೀಬಾಯಿ ಹಾಗೂ ಸತಿ ಸಾವಿತ್ರಿಯ ಶೀಲದ ಮಹತ್ವ, ಬಸವಣ್ಣ, ಚೆನ್ನಬಸವಣ್ಣ, ಮಹಾದಾಸೋಹಿ ಶರಣಬಸವೇಶ್ವರ ಮುಂತಾದ ವಿಭೂತಿ ಪುರುಷರ ಸೇವೆ ಮತ್ತು ಸಾಧನೆ, ಸತ್ಯಹರಿಶ್ಚಂದ್ರ, ರಾಮಾಯಣ, ಮಹಾಭಾರತ ಮುಂತಾದ ಪೌರಾಣಿಕ ಮತ್ತು ಐತಿಹಾಸಿಕ ಕಥೆಗಳ ಕಲ್ಪನೆ ಮತ್ತು ದಾಖಲೆ, ನೂರಾರು ವರ್ಷಗಳ ಸಂಸ್ಕೃತಿಯ ಮೂಲಸ್ವರೂಪ ಈ ಬುಲಾಯಿ ಹಾಡುಗಳು ಇಂದಿನ ಸಮಾಜದ ಮೇಲೆ ಬೆಳದಿಂಗಳಂತೆ ಬೆಳಕು ಚೆಲ್ಲುತ್ತವೆ.

ಬುಲಾಯಿ ಹಾಡುಗಳು ಬದಲಾಗುತ್ತಿರುವ ಸಮಾಜದಲ್ಲಿ ಹಿಂದಿನ ಸಂಸ್ಕೃತಿಯನ್ನು ಪ್ರತಿಧಿಸಿ ಸಂಶೋಧನೆಗೆ ಆಕಾರವನ್ನು ಒದಗಿಸಿಕೊಡುತ್ತವೆ. ಆ ಕಾರಣಕ್ಕಾಗಿ ಅವುಗಳನ್ನು ಸಂಗ್ರಹಿಸದೆ ಬಿಡುವುದು ಸರಿಯಲ್ಲ. ಹಾಡು ಹೇಗೆ ಇದ್ದರೇನು? ಆ ಹಾಡಿನ ಆಶಯ ನಮಗೆ ಮುಖ್ಯವಾಗುತ್ತದೆ. ಆದ್ದರಿಂದ ಅವುಗಳನ್ನು ನಿರ್ಲಕ್ಷಿಸಿ ಕೈಬಿಡುವುದು ತಪ್ಪಾಗುತ್ತದೆ. ಜಾನಪದ

ಅಧ್ಯಯನ ಸಮರ್ಪಕವಾಗಿ ನಡೆಯಬೇಕಾದರೆ ಅದಕ್ಕೆ ಪೂರಕ ಸಾಮಗ್ರಿ ಇಡಿಯಾಗಿ ದೊರೆಯಬೇಕು. ಆ ನಿಟ್ಟಿನಲ್ಲಿ ಮೊದಲು ಸಂಗ್ರಹ ನಡೆಯಬೇಕು. ಈ ಬುಲಾಯಿ ಹಾಡುಗಳು ಹಿಂದಿನ ಸಾಹಿತ್ಯ-ಸಂಸ್ಕೃತಿಯ ಮೆಲಕು ಹಾಕಿ, ಅಧ್ಯಯನ ಮತ್ತು ಸಂಶೋಧನೆಗೆ ಸಾಮಗ್ರಿ ಒದಗಿಸುತ್ತವೆ.

ಅಧ್ಯಾಯ-ನಾಲ್ಕು

ಉಪಸಂಹಾರ

ಉಪಸಂಹಾರ :

ಬದುಕಿನ ಸಮಷ್ಟಿಯ ಒಂದು ಸಂಕೀರ್ಣ ಮೊತ್ತ ಜನಪದ ಹಾಡುಗಳು. ಸಾಮಾಜಿಕ ಧಾರ್ಮಿಕ ಸಾಂಸ್ಕೃತಿಕ ಸಂಗತಿಗಳಿಂದ ಸಮನಿತ್ವವಾದದ್ದು. ಕೆಲವು ವರ್ಷಗಳ ಹಿಂದೆ ಹಳ್ಳಿಗಳಲ್ಲಿ ಬೆಳಗಾದರೆ ಬೀಸುವ ಹಾಡು, ಕುಟ್ಟುವ ಹಾಡು, ಕೇಳಿಬರುತ್ತಿದ್ದವು. ಇಂದು ಹಿಟ್ಟಿನ ಗಿರಣಿಗಳು, ರೇಡಿಯೋ, ದೂರದರ್ಶನ ವಾಹಿನಿಗಳು ಮುಂತಾದವುಗಳು ಹಳ್ಳಿಗರ ಮೇಲೆ ಗಾಢವಾದ ಪ್ರಭಾವ ಬೀರಿದ್ದರಿಂದ ಇಂದು ಹಳ್ಳಿಗಳಿಗೆಲ್ಲಾ ಜನಪದ ಹಾಡುಗಳಿಂದ ವಂಚಿತವಾಗಿವೆ. ಹಳ್ಳಿಗಳು ಬಿಕೋ ಎನ್ನುತ್ತಿವೆ. ಇಂದಿನ ನಮ್ಮ ಹೆಣ್ಣು ಮಕ್ಕಳಿಗೆ ಒಂದೇ ಯಾವುದೇ ಜನಪದ ಹಾಡು ಹಾಡಿ ಎಂದಾಗ ನನ್ನಿಂದ ಸಾಧ್ಯವಿಲ್ಲವೆನ್ನುವ ಮತ್ತು ಕೇಳಿ ಬರುತ್ತಿದೆ. ಇನ್ನೂ ಕೆಲವು ಹಳ್ಳಿಗಳಲ್ಲಿ ಪ್ರಮುಖ ವಯಸ್ಸಾದ ಹಾಡುಗರರು ಇದ್ದರೂ ಅವರ ಹಾಡು ಕೇಳುಗರೇ ಇಲ್ಲದ್ದರಿಂದ ಅವರಿಂದ ಅವರ ಹಾಡು ಮಾಯವಾಗಿದೆ. ಮರೆತು ಹೋಗಿದ್ದಾರೆ. ಹಳ್ಳಿಗಳ್ಲಿ ತುಂಬಿ ತುಳುಕುತ್ತಿದ್ದ ಅಂದಿನ ಹಾಡುಗಾರೆಲ್ಲ ಎಲ್ಲಿ ಹೋದರು? ಲಾವಣಿ, ಭಜನೆ, ಭುಲಾಯಿ, ಮದಿವೆ ಹಾಡುಗಳು, ಹಾಡುವವರಿಲ್ಲ ಆದರೂ ಮದಿವೆ ಮುಂಜಿ ಮಾಡಿದರೆ, ಹಾಡುವವರು ಇಲ್ಲದ ಕಾರಣ ಅಂಥ ಸಮಯದಲ್ಲಿ ರೇಡಿಯೋ ಅಥವಾ ಟೇಪರಿಕಾರ್ಡರ ಸ್ಟಾರ್ಟ ಮಾಡಿ ಮಂಗಲ ಕಾರ್ಯ ಮುಗಿಸುತ್ತಾರೆ.

ನಾವು ಮತ್ತು ಹಳ್ಳಿಗಳು (ಜನಪದ ಹಾಡುಗಳಿಂದ) ಹದಗೆಡುತ್ತಾ ಹೊರಟು ಸಾಂಸ್ಕೃತಿಕ ಅವನತಿಯ ಅಂಚಿಗೆ ಬಂದು ನಿಂತಂತಾಗಿದೆ. ಪ್ರತಿಯೊಬ್ಬನಿಗೆ ಒಂದು ಆತ್ಮವಿರುವಂತೆ, ಪ್ರತಿ ಹಳ್ಳಿಗಳಲ್ಲಿ ಕೆಲವರಾದರೂ ಜನಪದ ಹಾಡುಗಾರರೂ ಇರುತ್ತಾರೆ. ಜಾತ್ರೆ–ಉತ್ಸವಗಳಲ್ಲಿ ಹಬ್ಬ–ಹರಿದಿನಗಳಲ್ಲಿ ಊರಿನ ರಥ (ತೇರು) ಎಳೆಯುವಾಗ ಅದೇನು ಸಾಮರಸ್ಯ. ಹಾಡುಗಳಿಂದ ಅಂದೂ ಹಳ್ಳಿ ಪಟ್ಟಣ ಗದಗದರಿಸುತ್ತಿತ್ತು. ಸ್ಪರ್ಧಾತ್ಮಕ ರೀತಿಯಲ್ಲಿ ಹಾಡಿ–ಹೊಗಳಿ ಕುಣಿದು ಕುಪ್ಪಳಿಸಿ ಬಹುಮಾನ ಪಡೆದುಕೊಂಡು ಆನಂದಿಸುತ್ತಿದ್ದರು. ಅಂದಿನ ಉತ್ಸಾಹ ಭಾವೈಕ್ಯತೆ, ಮತ್ತೆ ಇಂದು ತರಲು: ಸಾಧ್ಯವೇ? ಅದೇನೊ ಕನಸೊ . . .?

ಅಂದು ಹಾಡುಗಳು ಹಾಡುಗರಿಗೆ ಗೌರವ ಆದರಗಳು ಉಪಜೀವನ ಸಾಗಿಸಲು ಸಮಸ್ತ ಗ್ರಾಮಸ್ತರು, ದೇಣಿಗೆ ರೂಪದಲ್ಲಿ ಹಣ ದವಸ ಧಾನ್ಯಗಳು ನೀಡಿ ಅವರ ಉಪಜೀವನಕ್ಕೆ ಸಹಾಯಕರಾಗಿ ಅವರಿಂದ ಹಾಡುಗಳು ಹಾಡಲು ಕೇಳಲು ಹಾತೋರಿಯುತ್ತಿದ್ದರು. ಆದರೆ ಇಂದು ಅವರಿಗೆ ನಾಯಿಗಿಂತಲೂ ಕಡಿಮೆ ಎಂದು ತಿಳಿದು, ಜನಪದ ಸಾಹಿತ್ಯ ಸಂಸ್ಕೃತಿಗೆ ಮೂಗು ಮುರಿದು ಪಾಶ್ಚಾತ್ಯ ಸಂಸ್ಕೃತಿಗೆ ಮರುಳಾಗಿದ್ದಾರೆ.

ನಮ್ಮ ಸಂಸ್ಕೃತಿ ಬಗ್ಗೆ ಶಿಸ್ತು, ಒಗ್ಗಟ್ಟು, ಹುರುಪು, ನಂಬಿಕೆ, ನಿಷ್ಠೆ, ಕಳೆದು ಕೊಂಡಿದ್ದೇವೆ. ಇದಕ್ಕೆಲ್ಲಾ ಕಾರಣ ಯಾರು? ಸಮಾಜವೇ? ಇತರ ಮಾಧ್ಯಮಗಳೋ? ಜನರೋ? ಎನ್ನುವ ಕುರಿತು ಸಂಗ್ರಹ ಕಾರ್ಯ ಮತ್ತು ಸಂಶೋಧನೆ ನಡೆಯಬೇಕಾಗಿದೆ. ಇದರಿಂದ ನಮ್ಮ ಸಾಹಿತ್ಯ

ಸಂಸ್ಕೃತಿ ಉಳಿಸಲು ಬೆಳೆಸಲು ಸಹಾಯವಾದೀತು. ಕನ್ನಡ ನಾಡಿನ ಅತ್ಯಂತ ಜನಪ್ರಿಯ ಕಲೆಗಳಲ್ಲಿ ಕೋಲಾಟ ಬೀದರ ತಾಲ್ಲೂಕಿನ ಪ್ರಸಿದ್ಧಿ ಮತ್ತು ಪ್ರಮುಖ ಕಲೆಯಾಗಿದೆ. ಆದರೆ ಇಂದು ಕೋಲಾಟ ಕಲೆ ಕೂಡ ಕುಸಿದು ಬಿದ್ದಿದೆ. ಜಾನಪದ ಸಂಶೋಧಕರ ಕೂತೂಹಲವನ್ನು ಕೆರಳಿಸುವ ಕೋಲಾಟದ ವಿವರವಾದ ಸಾಹಿತ್ಯಿಕ, ಸಾಂಸ್ಕೃತಿಕ ಅಧ್ಯಯನ ರುವಾರಿಯಾಗಿದೆ.

ಜನಪದ ಗೀತೆ ಸಂಪ್ರದಾಯ ಜೀವಂತವಾಗಿರಬೇಕಾದರೆ, ನಾವೆಲ್ಲರೂ ಪ್ರಥಮದಲ್ಲಿಯೇ ಅಭಿಮಾನಿಗಳಾಗಬೇಕು. ಹಾಡುಗಾರರಿಗೆ ಸಹಕಾರ ಮತ್ತು ಸ್ಥಳೀಯರು ಗ್ರಾಮದವರು ಸೂಕ್ತ ಸಂಭಾವನೆ, ಕೊಡಲು ಮುಂದಾಗಬೇಕು. ಅಧ್ಯಯನ ಮುಂದುವರಿಸಬೇಕು. ರೇಡಿಯೋ, ದೂರದರ್ಶನ, ವರ್ತಮಾನ ಪತ್ರಿಕೆಗಳಲ್ಲಿ ಜನಪದ ಹಾಡುಗಳು ಹೆಚ್ಚಿನ ಪ್ರಮಾಣದಲ್ಲಿ ಪ್ರಸಾರ ಮಾಡಲು ಮುಂದಾಗಬೇಕು. ಇದರಿಂದ ಶಿಷ್ಟರಲ್ಲಿಯೂ ಕೂಡ ಜನಪದ ಹಾಡುಗಳ ಮೇಲೆ ಪ್ರೀತಿ ಅಭಿಮಾನ ಹುಟ್ಟಲು ಸಾಧ್ಯವಾಗುತ್ತದೆ.

ಇಂದು ಅನೇಕ ಜನಪದ ಕಲಾವಿದರೂ ಭಿಕ್ಷೆ ಬೇಡುತ್ತಿರುವದು ಕಂಡುಬರುತ್ತಿದೆ. ಸಮಯಕ್ಕೆ ಊಟ ಸಿಗುತ್ತಿಲ್ಲ. ಇಂಥವರ ಕುರಿತು ಪತ್ತೆ ಹಚ್ಚಿ ಅವರ ಆಶೆ ಮತ್ತು ಆಕಾಂಕ್ಷೆ ಈಡೇರಿಸಲು ಮುಂದಾಗಬೇಕಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ನಾನು ಸಾಧ್ಯವಾದ ಮಟ್ಟಿಗೆ ಪ್ರಮುಖ ಜನಪದ ಹಾಡುಗಳ ಸಂಕ್ಷಿಪ್ತ ವಿವರಣೆ ಮಾತ್ರ ಮಾಡಿದ್ದೇನೆ. ಇದು ಪರಿಪೂರ್ಣವಲ್ಲದೆ ಹೋದರೂ ಹಾಡುಗಳ ಸಾಂಸ್ಕೃತಿಕ ಹಿನ್ನಲೆಯಲ್ಲಿ ಅವುಗಳ ಪರಿಚಯ ಮಾಡಲಾಗಿದೆ ಎನ್ನುವದನ್ನು ಸಂಬಂಧಪಟ್ಟವರು ತಿಳಿದುಕೊಳ್ಳಬೇಕು. ಬೀದರ ತಾಲ್ಲೂಕಿನಲ್ಲಿ ಜನಪದ ಹಾಡುಗಳು ಮಾಯವಾಗುತ್ತಿವೆ. ಅವುಗಳನ್ನು ಹಿಡಿದಿಡಲು ಪ್ರಯತ್ನ ಮಾಡಬೇಕು. ತಾಲ್ಲೂಕಿನ ಕೆಂಪು ಮಣ್ಣು ಜನಪದ ಗೀತ ಸಾಹಿತ್ಯ ವೈವಿಧ್ಯಮಯವಾಗಿದೆ ಮತ್ತು ಶ್ರೀಮಂತಿಕೆಯಿಂದ ಕೂಡಿದೆ.

ಅಧ್ಯಾಯ-ಐದು

ಅನುಬಂಧ

೧) ಪ್ರಮುಖ ಜನಪದ ಹಾಡುಗಳು

೨) ಬೀದರನ ಪ್ರಮುಖ ಜನಪದ ಹಾಡುಗಾರರ ಸೂಚಿ

೩) ವಕ್ತಾರರ ಸೂಚಿ

೪) ಗ್ರಂಥ ಸಹಾಯ

ಪ್ರಮುಖ ಜನಪದ ಹಾಡುಗಳು

ಕುಟ್ಟುವ ಹಾಡು–೧

ಪಂಡರಿಗೋಗುಬೇಕೆ ಭಾವಿಟ್ಟ ನಡಿಬೇಕೆ
ಚಂದರ ಭಾಗಾದಾಗ ಇಳಿಬೇಕೇ ಸುವ್ವಯ್ಯ
ಚಂದರಬಾಗದಾಗ ಇಳಿಬೇಕೆ ಪಂಡರಿನಾಥ
ಭಜನ್ಯಾವ ನೋಡಿ ಬರಬೇಕೆ ಸುವ್ವಯ್ಯ
ಅಡಗಿಯ ಮನಿಯಾಗ ಅರವತ ಗಂಗಳ
ಬ್ಯಳಗೀದೆ ಅರ್ತಿ ಬೈಬ್ಯಾಡ ಸುವ್ವಯ್ಯ
ಅಡಗಿಯ ಸರಮುತ್ತ ಮಾಡಿದರೆ ಸರಗಿನೊನ್ ಕಟ್ಟಿಕೊಳ್
ಕ್ವಾಟಿ ಕೆಳಗಿ ಹ್ಯಂಡಿ ತಗಿವ್ರೋಗೆ ಸುವ್ವಯ್ಯ
ಹ್ಯಂಡಿಯ ತಗಿಲಾಕ ತೊತ್ತಿನ ಮಗಳೇನೆ
ಇಂದ್ರುಬೇಸೋಯಿ ಹಡದಪ್ಪ ಸುವ್ವಯ್ಯ
ಇಂದ್ರುಬೇಸೋಯಿ ಹಡದಪ್ಪ ಕೇಳಿದರ
ಭಳಗ್ಯಾಗ ತೊತ ಖಳವ್ಯಾರ ಸುವ್ವಯ್ಯ
ಗಂಡಗ ಬೈಬ್ಯಾಡೆ ಗಣಪತಿ ರಾಯಗ
ಚುಂಡುಮಲ್ಲಿವೀಗಿ ದುನಿಯಾಗೆ ಸುವ್ವಯ್ಯ
ಚುಂಡೊನೆ ಮಲ್ಲವೀಗಿ ದುನಿಯಾಗ ಬೈದಾರ
ವಂಥ ಎನ ಬಾಲಿ ಜನದೊಳು ಸುವ್ವಯ್ಯ
ವಂಥ ಎನ ಬಾಲಿ ಜನದೋಳು ಎಲೆಬಾಲಿ
ಸರಗದ ಹಾದಿ ಸಿಗೊಣಿಲ್ಲ ಸುವ್ವಯ್ಯ
ತಾಯಿ ಮಕ್ಕಳ ಜಗಳ ತಾಳಿಕೊಂಡರ ಹೊಯ್ತೆ
ಬಾಯಿಮಾಡಿದಾರ ಹೊರಗೋಯ್ತೆ ಸುವ್ವಯ್ಯ
ಬಾಯೀನೆ ಮಾಡಿದುರ ಹೊರಗೊಯ್ತೆ ಹಡೆದವ್ವ
ಅಯ್ ಅಂದರೋಯ್ತೆ ಅಭಿಮಾನ ಸುವ್ವಯ್ಯ
ಸುವ್ವಯ್ಯನಂಬದೆ ಸೂಗುರುಗ್ಯಾನ ಪಟ್ಟಣ
ರಾಗಬೀದಿದಾಗ ರಥಹೂಡೆ ಸುವ್ವಯ್ಯ
ರಾಗಾನೆ ಬೀದ್ಯಾಗ ರಥ ಹೂಡಿ ಮಾರ್ಯೇವ
ರಾಜಿಯೇರ ಮಗಳ ಕೈಬಳಿಯ ಸುವ್ವಯ್ಯ
ಧನಿಯವ ಕುಡಲಾಕ ಯಾರ ನನ್ನ ಸರಿನಿಲ್ಲೆ

ನಾನು ಗೋದಾವರಿ ಸರಿತೂಕ ಸುವ್ವಯ್ಯ
ನಾನೂನೆ ಗೋದಾವರಿ ಸರಿತೂಕನಾಡಿದರೆ
ಜೋಡ ಕಿನ್ನುವಾರಿ ನುಡಿದಾರೆ ಸುವ್ವಯ್ಯ

ಲಾವಣಿ ಹಾಡು–೨

ಪತಿವ್ರತೆ

ತಾಯಿ ಕುಂತ ಮಗಳಿಗೆ ಕಲಸ್ತಾಳ ಮಾಡಬೇಕು ಹಾದರ
ತಂಗಿ ಆಗಬಾರದು ಬ್ಯಾಸರ
ಪತಿವೃತ ಧರ್ಮ ನಿಜವಾಗಿ ಇಟ್ಟು ನೀ ಸುಲಿಯೇ ಮಗಳ ಗಂಡಸರು :ಜೀ ಜೀ :
ಹೇ ಮೋರಿ ರೂಪ ಎಷ್ಟಂತ ಹೇಳಲಿ ಚಲ್ವಿಕಿತ್ತ ಚಂದರಾ
ತಮ್ಮ ಬರದ ಬ್ರಹ್ಮ ದೇವರಾ
ಸೀರಿ ಉಡಸಿ ತನ್ನ ಮಗಳಿಗೇಳತಾಳ ತಾರೆ ನನ್ನ ಹೆಸರಾ : ಜೀ. . . ಜೀ. . .

ತನ್ನ ಮನೀಗೆ ತಾ ಹೊಂಟಾಳ ನಾರಿ ಆ ದಿನ ಇತ್ತ ಸ್ವಾಮಾರ
ತಮ್ಮ ಮಂದಿ ನೆರತ ಜುಮ್ಮಾರ
ಕಳೆಯುಳ್ಳ ಕಾಂತಿನ ನೋಡತಾರ ಸಾಹುಕಾರ ಬಟ್ಟ ಕಚ್ಚಿದ್ದರೆಲ್ಲಾ : ಜೀ . .

ವರನುಳ್ಳ ವಗತಾನ ಗಂಡ ಇದ್ದ ಸರಿಸಮಾನತಾ
ಅವರ ಮ್ಯಾಲ ಮಾಡಿದರ ನಾಳೆ ಕೇಳತಾರ ನನ್ನ
ಸಾಹುಕಾರ ಬಂದ ಮರುದಿನಾ, ವಡವಿ ವಸ್ತಾ ತಂದ ಡಾಗೀನಾ
ನಿನ್ನ ಸಲುವಿಕಿ ಚಂದ್ರನಂಗ ನಿನ್ನ ಮನಿಯ ನಡುಸತೀನಿ ನಾನ :
ಇಷ್ಟೆಲ್ಲ ತಗೊಂಡು ಹೇಳತಾಳ ನೀ ಬಾರ ಚಂಜೀಕಿ ಸ್ವಾಮಾರ ದಿನಾ : ಹಾ . . ಜೀ .

ಮರುದಿವಸ ಮುಂಜಾನೆ ಅಗಸಾಲಿ ಬಂದಾನ
ಗೆಜ್ಜೆಟಕ್ಕೆ ಸಾಮಾನು ಬಗಲಾಗ ಹಿಡದಾನ
ಅದು ಅಲ್ದೆ ಮತ್ತೆ ಬೇಡಿದರೆ ಕೊಡತೀನಿ ನಾನ
ನಿನ್ನ ಚಲ್ವಿಕೆ ಚಂದ್ರನಂದ, ನಿನ್ನ ಮನಿಯ ನಡಸತೀನಿ ನಾನ
ಇಷ್ಟೆಲ್ಲ ತಗೊಂಡು ಹೇಳತಾಳ ನೀ ಬಾರ ಚಂಜೀಕಿ ಸ್ವಾಮಾರ ದಿನಾ. . . ಜೀ. . ಜೀ.

ತಾಯಿ ಕುಂತು ಮಗಳಿಗೆ ಕಲಸ್ತಾಳ ಮಾಡಬೇಕು ಹಾದುರ
ತಂಗಿ ಆಗಬಾರದು ಬ್ಯಾಸ್ಯರ
ಪತಿವೃತ ಧರ್ಮ ದಿನಿಜವಾಗಿ ಇಟ್ಟು ನೀ ಸುಲಿಯೇ ಮಗಳ
ಗಂಡಸರಾ . . . : ಜೀ . . ಜೀ . . . : ಕೂಡವಲ್ಲ :

ಏ ಬೇಸ್ತಾರ ದಿನಸ ಬಡವ ಬ್ರಾಹ್ಮಣ ಸ್ನಾನ ಮಾಡುತ್ತಿದ್ದ ಭಾವಿಗೋಗಿ
ನಮ್ಮ ನಾರಿ ಹೋಗ್ಯಾಳೋ ನೀರಿಗಿ
ಸ್ನಾನ ಸಂಧ್ಯಾನ ಮಾಡುವ ಬಿಟ್ಟಗೊಟ್ಟು ಓಡಿ ಬಂತೊ ಮನಿಗಿ : ಜೀ . . ಜೀ . .

ಶುಕ್ರವಾರ ದಿವಸ ಪೋಲಿಸಗೌಡ ಹ್ವಾದ ಅಕಿಯ ಮನಿಗೀ
ಅವ ರೂಪಾಯಿ ಕೊಟ್ಟ ಅಸ್ತೀಗಿ
ಇಷ್ಟೆಲ್ಲ ತಗೊಂಡು ಹೇಳತಾಳ ನೀ ಬಾ ಸ್ವಾಮಾನರ ಚಂಜೀಗಿ ಜೀ .. ಜೀ . .

ಶನಿತ್ತಾರ ದಿವಸ ಕುರುಬನೆಯ್ಯುರು ಬಿಟ್ಟಕೇಸಿ
ತನ್ನ ಉಣ್ಣಗುರಿ ಮಾರಿ ರೂಪಾಯಿ ತಂದು ಕೊಟ್ಟತರಿ ಎಣ ಎಣಸಿ
ಕುಂಬಾರ ಬಂತರಿ ಅಡ್ರಾಸಿ
ಇದ್ದದ್ದೊಂದು ಕತ್ತಿ ಮಾರಿಕೇಸಿ
ರೂಪಾಯಿ ತಂದು ಕೊಡ್ತು ಎಣ ಎಣಸಿ
ಇದ್ದದ್ದೊಂದು ಕತ್ತಿ ಮಾರಿ ಮಣ್ಣ ಹೊರತಿತ್ತರಿ ಸನ್ನೇಸಿ : ಜೀ . . ಜೀ . . .

ಆಯ್ತಾರ ದಿವಸ ಅಗಸ ಬಟ್ಟೆ ಒಳಹಾಕಿ
ಅಕಿ ಮನಿಕಡಿ ಹೋಗತಿತ್ತು ತಿರುತಿರುಗಿ ಭರ್ರ ಭರಾಟ ಮಂಕಿ
ನಾ ಕೊಟ್ಟನಂದರ ನನ್ನ ಬಲ್ಲ ಇಲ್ಲ ಬಾಕಿ :
ನಿನ್ನ ಸಿರಿಯ ಒಗಿಯತೀನಿ ಜ್ವಾಕಿ
ನಿನ್ನ ಕುಬಸ ತೊಳಿಯತೀನಿ ಬೇಸಿ ಇದು ಒಂದು ಇರಲಿ ನಿನ್ನ ಬಾಕಿ
ಇದರಂತೆ ಇಪ್ಪತ್ತೆರಡು ಮಂದಿ ಆದರು ಅವರು ಎಣಕಿ ಜೀ . . ಜೀ . . .

ಹೇ ಸೋಮವಾರ ದಿವಸ ಓಸುಮಂದಿ ಕೂಡಿ ಹೋಗಬೇಕಂತಾರ
ಹೀಂಗ ಮೀಸಿಯ ಹುರಿಮಾಡತಾರ
ಪತಿವೃತಾ ಧರ್ಮ ನಿಜವಾಗಿ ಇಟ್ಟು ನೀ ಸುಲಿಯೇ ಮಗಳ ಗಂಡಸರಾ
ಜೀ. . . ಜೀ. . . : ಕೂಡವಲ್ಲ :

ಏ ಎಲ್ಲಾರಕಾ ಮುಂದಾಗಿ ಸಾಹುಕಾರ ಚನ್ನಮಲ್ಲ ಹ್ವಾದ ಆಕೆಯ ಮನೀಗಿ
ಅಂವ ಹೋಗಿ ನಿಂತ ಕೋಲಗಿ
ಅವನ ಹಿಂದೆ ಅಗಸಾಲೆ ಬಂದರಿ ಅಂಜಿನಿಂತ ಮೂಲಿಗಿ
ಏ ಅರತಾಸ ರಾತ್ರಿಗಿ ಪೋಲಿಸಗೌಡ ಹ್ವಾದ ಮನಿಗಿ
ಅಂವ ಹೋಗಿ ನಿಂತ ಸಂತ ಕೋಲಿಗಿ
ಅವನ ಹಿಂದೆ ಅಚೇರಿ ಬಂದಾನರಿ ಪಂಚಾಂಗ ಇತ್ತ ಬಗಲೀಗಿ : ಜೀ . . . ಜೀ . . .

ಎಲ್ಲಾರಕಾ ಹಿಂದ್ರಾಗಡಿ ಕುರುಬ ಕುಂಬಾರ ಹ್ವಾದರಕಿಯ ಮನಿಗಿ
ಗುರುಬಗ ಪಿರಕಿ ಇತ್ತರಿ ಬಗಲೀಗಿ
ಕುರಿಯ ಹೋಗ್ಲಿ ನನ್ನ ಮನಿಯ ಹೋಗುದ್ಯಾಕಪ್ಪ ಈ ಹೆಣ್ಣಿನ ಸಲುವಾಗಿ . . .

ಗಂಡ ಹೆಂಡತಿ ಕಲ್ತು ಮನಿಯಾಗ ಮಾತಾಡುವರ
ಮ್ಯಾಳೀಗಿ ಮ್ಯಾಲ ಎರ್‍ಯಾರ ಬಾಕಿಲ ಕದ ಹಾಕ್ಯಾರ
ಕಳ್ಳರು ಬಂದಾರಂತ ಹೀಂಗ ಗುಲ್ಲ ಎಬ್ಬಿಸ್ಯಾರು : ಹಾ ಜೀ . . . . .

ಇಷ್ಟು ಗಡಬಡ ಕೇಳಿ ಕುಂಬಾರಾದ ಹುಶಿಯಾಂ
ಬಾಕಿಲ ಕದ ಮುರಿದು ಹೋಗಬೇಕೆಂದ ಹಾರಿ
ದಾರ್‍ಯಾಗ ಕುರುಬ ಕುಂತಿದರಿ
ಅವನ ಮ್ಯಾಲ ಬಿದ್ದ ಕೈಯಾರಿ
ಬಾಯಾಗಿನ ಹಲ್ಲು ಮುರದಾವರಿ
ಅಚೇರಿ ಕೇಳತಾನ ರಂಡೆಗಂಡ ನೀವು ಯಾರೀರೀ. . . . ಜೀ. . . ಜೀ. . .

ಇಷ್ಟು ಗಡಬಡ ಕೇಳಿ ಪೋಲಿಸದವರು ಬಂದಾರಿ . . . .
ಕುಂಡಿ ಕುಂಡಿ ಹಿಡಿದು ಸಾಕೇಟು ಅವರಿಗೆ ಜಡದಾರಿ . . .
ಮಾಡಲಾರದೆ ಕಳುವ ಮಾಡೇನಿ ಅಂತ ಅನ್ನುವರಾ
ಬೇಡಿ ಹಾಕಸ್ಯಾರ ಮಂಗಳವಾರಾ
ಕಡ್ಲಿ ಒಡಿಯಲಕ್ಕ ಹಚ್ಚಾರಾ
ತಲ್ಲಿದ್ದವರು ಕಡ್ಲಿ ತಿಂತಿದ್ದರಾ
ಹಲ್ಲಿದ್ದವರು ತನ್ನೂದು ನೋಡಿ ಕಣ್ಣ ಬಡತಿತ್ತರೀ ಕುಂಬಾರಾ ಜೀ. . . ಜೀ. . . .

ಕತ್ತಿ ಹೋಗಿ ನನ್ನ ಹಲ್ಲೀರೆ ಉಳಿಯಲಿಲ್ಲ, ಹಲ್ಲ ಹೋಗಿ
ನನ್ನ ಕತ್ತಿಯರೆ ಉಳಿಯಲಿಲ್ಲ ಹೀಂಗಾಯ್ತು ನನ್ನ ಹಣಿಬಾರಾ
ಖರೇ ಬರೆದ ಬ್ರಹ್ಮ ದೇವರಾ
ಪತಿವೃತ ಧರ್ಮ ನಿಜವಾಗಿ ಇಟ್ಟು ನೀ ಸುಲಿಯೇ ಮಗಳಾ ಗಂಡಸರಾ : ಜೀ. . ಜೀ.

ದೇಶದೊಳಗ ನಮ್ಮ ಇಂಗಳಗಿ ಊರಾ ಮಲ್ಲಾ ಹಸನ ಶಾಣೇರಾ
ಹೀಂಗ ಕವಿ ಮಾಡ್ಯಾರ ಭರಮೂರಾ
ಪತಿವೃತ ಧರ್ಮ ನಿಜವಾಗಿ ಇಟ್ಟು ನೀ ಸುಲಿಯೇ ಮಗಳಾ ಗಂಡಸರಾ ಜೀ. . . ಜೀ

ತತ್ತ್ವದ ಪದ-೩

ಗುರುವರ್ಣನೆ :

ಎಷ್ಟು ವರಣಿಸಲಿ ಅಘಾದ ಗುರುವಿನ ಲೀಲ
ಬೇಧಿಸಿ ಪಾವನ ಮಾಡಿದ
ಅಂತರಂಗದೊಳಗೆ ಶಿವಲಿಂಗ
ನೀರೊಳಗೆ ಜ್ಯೋತಿ ಹೊಳದ್ದಂಗ
ತಿಳಿದಳದುಳಿಯೊ ಅಘಾದ ಗುರುವಿನ ಲೀಲ
ಈ ನರಜನ್ಮ ತಿರಗಿ ಬರುವುದಿಲ್ಲ ಮನಹ
ತಪ್ಪಿಸಿಕೊಳ್ಳ ಜನ್ಮ ಮರಣ
ಆ ಆರುಜನ್ಮದಲ್ಲಿ ಇರುವದೊ ಜ್ಞಾನ
ನೀ ತಿಳಿಯೊ ಆತ್ಮನ ಖೂನ
ತಿಳಿದಾವ ತಾನಿ ಪರಬ್ರಹ್ಮ
ತಿಳಿದಳದುಳಿಯೋ ಅಘಾದ ಗುರುವಿನ ಲೀಲ
ಸತ್ಯಶರಣರು ಮೂರುಲೋಕದೊಳಗೆ ಮಹತ್ವಿಕರು
ಪ್ರಾಣಪ್ರತಿಷ್ಠ ಮಾಡುವರು
ಹರಗುರು ಭಜನಿ ಹಗಲು ಇರುಳ ಮಾಡುವರು
ಪರಮಾತ್ಮನ ಮೀರಿದವರು
ಧರಿಯೊಳು ಬಿದರಿಯ ವಾಸ
ಗುರು ಹಾಸು ಬಸವೇಶ ಜಗದುದ್ಧಾರ
ಎಷ್ಟು ವರಣಿಸಲಿ ಅಘಾದ ಗುರುವಿನ ಲೀಲ
ಶೋಧಿಸಿ ಪಾವನ ಮಾಡಿದ

ಮದುವೆಯ ಹಾಡು-೪

ಬಾದ್ದೂರ ಬಂಡಿ ಹೊಡಿ, ಗೌರಮ್ಮ ರಥಯೇರಿ
ನೀಲಮ್ಮ ತಾಯ ದುದುಡುಗಳಾದರ
ಮದವೀಯ ಮಾಡಿದರು ಈ ಬಸವನ
ಮದವಿಯ ಮಾದರು ಈ ಬಸವೇಶ
ಮದವೀಯಮಾಡಿದರು
ಬಾದ್ದೂರ ಬಂಡಿಯ ಹೂಡಿ, ನಾವು ನಿಬ್ಬಣದವರು
ನೀಲಮ್ಮ ತಾಯ ಮದುಮಗಳಾದವರ
ಮದವಿಯ ಮಾಡಿದರು

ಕಲ್ಯಾಣ ಪುರದವರು ಅಣ್ಣ ಬಸವೇಶ್ವರರು
ಮದುಮಗನಾದರ ಮಡದಿಯ ಮಾಡಿದವರ
ಪಟ್ಟಿಮಾಲಿನ ಮುಂದ ಇಬ್ಟಾಳ ಹಂದರ
ಕಿರುತಾನದ ತ್ವಾರಣಕಟ್ಟಿ : ಮುತ್ತಿನ ಶಾಸಿಹೊಯ್ದು
ಕೈಯಲಿ ಕಂಕಣ ಕಟ್ಟಿ : ಹಣಿಯಲಿ ಬಾಸಿಂಗಧರಿಸಿ
ಧರ್ಮ ಇಟ್ಟಲಿ ಬಂದು : ಕರಮಣಿ ಕಟ್ಟಿದರು.

ಹಂತಿಯ ಹಾಡು–೫

ಊಲ್ಗ್ಯಿ ಊಲ್ಗ್ಯಿ
ಚಲಂ ಮೊಲ್ಗ್ಯಿ
ಖಳ ಹ್ಯಾಂಗ ಮಾಡುಬೇಕು
ಸೂರೆಚಂದ್ರಮಾಹಾಂಗ ಖಳ ಮಾಡುಬೇಕು
ಜೋಳ ಹ್ಯಾಂಗ ಕಿತ್ತಬೇಕು
ಸೂಡಹ್ಯಾಂಗ ಕಟ್ಟುಬೇಕು
ಸೂಳೇ ಟೊಂಕಿನಾಂಗ ಸೂಡು ಕಟ್ಟುಬೇಕು
ಭಣಮಿ ಹ್ಯಾಂಗ ಹಾಕುಬೇಕು
ಭಂಡೆಗಲ್ಯಂಗ ಭಣಮೆ ಹಾಕುಬೇಕು
ಗೂಡ್ಯಾಂಗ ಮುರಿಬೇಕು
ಕೈಲಿ ಬಾಯಲ್ಲಿ ಗೂ ಮುರಿಬೇಕು

ನೂರಾ ಒಂದು ಕೌರವರು ನೂರ ಹಿಡಿಮಣ್ಣ ತಂದು
ಮಣ್ಣಿನ ಸಿಂಗಾರೋ (ರ) ಮಾಡಿದರೆ
ತಾಯಿ ಗಂಧರಿನ ಮೆರಿಸಾರೊ

ಕಟ್ಟಾಕ ಅರ್ಜುನ ಹೋಗ್ಯಾನೊ ಭೀಮಸ್ಯೆನ
ಐರಾವತಿ ಆನಿ ತಂದಾನೊ : ಭೀಮಸ್ಯೆನ
ತಾಯಿ ಕೊಂತ್ಯಮನ ಮೆರುಸ್ಯಾನೊ
ನನ್ನಾನೀ ದೊಡ್ಡದೆಂದು ನಿನ್ನಾನಿ ದೊಡ್ಡದೆಂದು
ತುಂಬೀದ ಹೊಳಿಯಾಲಿ ಹೊಡುದಾರೊ
ಮಣ್ಣೀನ ಆನಿ ಕರಗೀನೆ ಹೋಗಿತ್ತು
ಐರಾವತಿ ಆನಿ ತಿರಿಗ್ಬಂತು : ಅಲ್ಲಿಂದ
ಲಾಡಾಯಿ ಸುರುವಾಯ್ತು

ಕಾಮಣ್ಣ ಕರಿ ಎತ್ತು ಭೀಮಣ್ಣ ಬಿಳಿ ಎತ್ತು
ಮಾಲಿಂಗನೆಂಬೊ ಮದಲಿತ್ತು : ಮಾರಿದರೆ
ಶಿವ ನಿನ್ನ ಸಾಲ ಹರಿಲಿಲ್ಲೊ
ಬೆಳ್ಳಾನ ಬಿಳಿ ಮತ್ತು ಬೆಳ್ಳೀಯ ಬಾರಕೋಲು
ಹಳ್ಳಾದ ಹೊಲ ಹರುಗ್ಯಾವೊ : ನಮ್ಮೆತ್ತ
ತೆಳ್ಳಾನ ಹೊಟ್ಟೆ ಹಸುದಾವೊ

ದುರ್ಯೋದಣನ ತಮ್ಮ ಸುಸುವಾಸಣ್ಣಾನ
ದ್ರೋಪತಿ ಸೀರಿ ಸೆಳುದಾನೊ : ದುಸುವಾಸ
ಪಾಂಡವ್ರ ಮಾನ ಕಳುದಾನೊ
ಕಲ್ಯಾಣ ಕಡಿಮಠ ಖಾಂಡ್ಯ ಮಾಡರೊ ರೇಟ
ಸಾವಿರ ಚೀಲ ಸಾತಿಲ್ಲೊ :: ಬಸಣ್ಣ
ಧರಿಮ್ಯಾಗಿನ ಬೆಲ್ಲ ಉಳದಿಲ್ಲೊ
ಹುಮನಾಬಾದಿಯ ಹುಟ್ಟಿ ಹೂವಿನ ಬಾಜರ ಹುಟ್ಟಿ
ವೀರಯ್ಯ ಹುಟ್ಟಿ ಹಟ್ಟಿಕಟ್ಟಿ : ಉಪರಣ್ಣ
ಕಳಸ ಮುರಿಯಟಿಕೆ ಕೈಬಟ್ಟೊ [೧]

---

೧. ಹಂತಿ ಪದಗಳನ್ನು ಪ್ರಾರಂಭಿಸುವ ಮುಂಚೆ ಈ ಹಾಡನ್ನು ಸಂಭಾಷಣಾ ರೂಪದಲ್ಲಿ ಹಾಡಲಾಗುತ್ತದೆ. ಇದಿಷ್ಟು ಮುಗಿದ ಮೇಲೆಯೇ ಮುಂದಿನ ಹಾಡುಗಳು ಪ್ರಾರಂಭವಾಗುತ್ತದೆ. ಪ್ರದೇಶದಿಂದ ಪ್ರದೇಶಕ್ಕೆ ಈ ಸಂಭಾಷಣೆ ವ್ಯತ್ಯಾಸವಾಗುವ ಸಾಧ್ಯತೆ ಇದೆ. ಆದರೆ ಪರಿಪಾಠ ಇದೇ ಬಗೆಯದು.

ಕುಂಕುಮ ಹಚ್ಚುವ ಹಾಡು-೬

ಹಸಿಯ ಹೊಯ್ಯಲ್ಲಿ ಕುಸುಮಲ್ಲೀನ ಕರಸೀರಿ
ಬಸವಣ್ಣನ ಮಡದಿ ಶಿವಶರಣಿ(೨) ನೀಲಮ್ಮ
ಹಸೀಯ ಹೊಯ್ಯಲಿ ಕರಸೀರಿ

ಅದನೆಗ್ಯಾನ ಮುತ್ತ ಗುದ್ದಿ ತಾ ತಕ್ಕೊಂಡು
ಗುದ್ದೂತ ಹಸಿಯ ಹೊಯ್ಯದಾಳ ಶಾರಮ್ಮ
ಬರೆಯುವ ಚನ್ನಬಸವನ
ಅಡಕೇಟ ಬಂಗಾರ ಅರವತ್ತು ವಾಲಿ ಬುಗಡಿ
ಚಂದ್ರಮುಖಿ ನನ್ನ ಅಗಸಾಲ್ಯಾ ಮಾಡ್ಯಾನ
ಕೂಸ ರಾಜಮ್ಮನ ಹೊಸನತ್ತ
ಚಾಣಿಯ ಬಂಗಾರ ಉದ್ದಿನ ಬಾಣೀಟು ತಿದ್ದೀದ ಬಂಗಾರ
ದೇಸಮುಕ ನನ್ನ ಅಗಸಾಲ್ಯಾ
ತದ್ಯಾನ ಕೂಸ ರಾಜಮ್ಮನ ಹೊಸ ಸರಗಿ
ಕಾಲುಂಗರಲ್ಲಿ ಕಾಲೆಸಳ ಪಿಲ್ಯಾ ಎಲ್ಲಿ
ವಾಣದ ಬವಳಿ ಸರ ನಮ್ಮ ಮಗಳಿಗೆ
ಮುತಬ್ಬೀದ ಸತ್ತೆಲ್ಲದ ನಮ್ಮ ಮಗಳೀಗಿ
ಬಟ್ಟುಂಗರೆಲ್ಲಿ ಬಟ್ಟೆಸಳ ಪಿಲ್ಯಾ ಎಲ್ಲಿ
ಚಿತ್ತರದ ಬವಳಿ ಸರ ಎಲ್ಲಿ
ಮುತ್ತಚ್ಚಿದ ವಾಲಿಲಲ್ಲದ ನಮ್ಮ ಮಗಳೀಗಿ
ಅತ್ತಿಂದ ಬಂದಾನ ಇತ್ತಿಂದ ಬಂದಾನ
ಬುಟ್ಟೀಲಿ ಬಂದಾವ ನೆನದಂಡಿ
ತೊಟ್ಟಿಲದಾಗಾಡಾ ಮಗಳೀಗಿ
ಅತ್ತಿಂದ ಬಂದಾದ ಇತ್ತಿಂದ ಬಂದಾವ
ತೋಳ ಮ್ಯಾಲ್ಯಾಡ ಮಗಳೀಗಿ

ಬಾಳಿಯ ಬನದಾಗ ಬಾಲ ಕೊಳಲೂದಿ
ಬಾಲಿ ನಿನ್ನಳಿಯ ಬರತಾನ: ಗಂಗಮ್ಮ
ಕ್ಯಾದಿಗಿ ಮುಡಸ ಮಗಳೀಗಿ :

ನಿಂಬಿಯ ಬನದಾಗ ಕೊಂಬಿಕೊಳಲೂದಿ
ರಂಭಿ ನಿನ್ನಳಿಯ ಬರತಾನ : ಗೌರಮ್ಮ
ಮಲ್ಲಿಗಿ ಮುಡಸ ಮಗಳೀಗಿ

ಆರತಿ ಹಾಡು-೭

ಆರತಿಯೆತ್ತಿರಿ ವಾರಿಜಮುಖಿ ಸೀತಾದೇವಿಗೆ
ಹದಿನಾಲ್ಕು ಲೋಕ ಆಳುವಂಥ ರಾಮಚಂದ್ರಗೆ :ಪಲ್ಲವಿ :

ಕಡಗ ಕಂಕಣ ಕಮಲ ಡ್ವಾರಾ ಸರಗಿ ಸರಗೋಳ
ವಂಕಿ ಬಾಮರಿನೀಡುವ ತೋಳಿಗಿ ಚಂದ್ರಕುಪ್ಪಸ

ಆರತಿಯೆತ್ತಿರಿ ಮರಿಜಮುಖಿ ಸೀತಾದೇವಿಗೆ
ರಮನರಸಿ ಜಾನಕೀಗೆ ಉಡಿಯ ತುಂಬಿರೆ
ಗೊಂಡೆ ಲಾಕುಟಿ, ಚಂದ್ರ ಖ್ಯಾದಿಗಿ ಹೆರಳು ಭಂಗಾರ
ಚುಂಡು ಮಲ್ಲಿಗಿ ದವನ ಖ್ಯಾದಿಗಿ ಹೆರಳುಸಿಂಗಾರ
ಮಲ್ಲಿಗೂವಿನ ನೆನಿಯ ದುಡಿ ಚೆಲ್ವ ಸೀತೆಗೆ
ಬಲ್ಲೆ ಭಾವಿ ಸೇತು ಕುಳಿತ ಸರಸಿಜಾಕ್ಷಿಗೆ

ಗಂಧ ಕುಂಕುಮ ಚಂದದಿಂದಲೆ ರಂಭಿಯೇರಿಗೆ
ರಂಗಲಕ್ಷ್ಮಿದೇವಿಗೀಗ ಉಡಿಯ ತುಂಬಿರೆ
ಸುತ್ತಿಸುತ್ತ ದೇವ ಬಂದು ಅಲ್ಲೆ ನಿಂತಾರ
ಸಲ್ಲಿ ಸೀತಾ ದೇವಿಗಾಗ ಮನವ ಸೋತಾರ
ಆರತಿಯೆತ್ತೀರಿ ವಾರಿಜಮುಖಿ ಸೀತಾದೇವಿಗೆ

ಬೀಸುವ ಹಾಡು–೮

ತಾಯಿ ಸತ್ತರ ಮಗ ಏನಂತ ಅಳತಾನ
ಚೆತ್ತಿಟ್ಟುಟ್ಟ ಕೇಳರಿ ಜನರೆಲ್ಲ ನೀತಿ : ಮಲ್ಲಿಗೇ ದಂಡು ಮಲ್ಲಿಗೆ

ಕಿರಿಕಿರಿ ಮಾಡುತ ಕಷ್ಟವು ಬೀಡುತ
ಎತ್ತಿಕೊಂಡು ಮುದ್ಧನಾಡುದಲ್ಲೀ ತಾಯಿ
ಹೆಪ್ಪ ಮರದ ಹಾಲ ಕುಡಿಸಿದಲ್ಲೀ
ಹಾಲಸಕ್ಕರಿಬೀನ ಮುಚ್ಚಿ ಮರ್ಯಾದಿನಿಂದ
ಕಿರಿಕಿರಿ ಬ್ಯಾಡಂತ ಸಮ್ಮನ್ನಣಂದಲ್ಲೇ ತಾಯಿ : ಮಲ್ಲಿಗೆ . . ..

ಜಾತ್ರಿಗಿ ಹೋಗುತೇತನಂತ ಅತ್ರೀಲಿ ನಾ ಬಂದ
ಪಂಚ ಪಾವಡ ಸುತ್ತಿಟ್ಟನಲ್ಲೀ ತಾಯಿ
ಜೋಗಿ ಜಂಗಮರೀಗ ಬೆಳಗಿದಲ್ಲೇ ತಾಯಿ
ಜೋಕಿ ಜೋಕಿನಂತ ಹೇಳಿದಲ್ಲೇ : ತಾಯಿ : ಮಲ್ಲಿಗೆ . . . .

ಮುಂದ ಮುಂದ ಕಂದ ಮಾಡಿ ಹಿಂದಹಿಂದ ಬೇಡಿಕೊಂಡು
ಕಂದನಮ್ಯಾಲ ದಯಾನಿರಲಂದಲ್ಲೇ ತಾಯಿ
ಜಾತ್ರೀಗಿ ಹೋಗದ ಕಂದ ತಿರುಗಿ ಬರೋತನ
ಮೋರಿಮ್ಯಾಲ ಆಸಿ ಇರಲಿಲ್ಲೇ ತಾಯಿ : ಮಲ್ಲಿಗೆ . . . .

ಹೇಸಿದ ಬಂದ ಕಂದಗ ಬಿಸಿಯ ನೀರವ ಕಾಸಿ
ಹಸನಾದ ಮಡಿಗೋಳು ಉಡಕೊಟ್ಟಲ್ಲೇ ತಾಯಿ
ಹಸನಾದ ಮಡಿಗೋಳು ಉಡಕೊಟ್ಟಲ್ಲೇ ತಾಯಿ
ನೊಸಳೀಗಿ ವಿಭೂತಿ ದರಸಂದಲ್ಲೇ ತಾಯಿ : ಮಲ್ಲಿಗೆ . . . .

ಬಿಸಿಯ ಹೋಳಾಗಿ ಮಾಡಿ ಬೆಣ್ಣಿ ಕಾಸಿದ ತುಪ್ಪ
ಸಣ್ಣ ತುತ್ತ ಮಾಡಿ ಉಣಂದಲ್ಲೇ ತಾಯಿ
ಗಂಡ ಸತ್ತಿದ ಮ್ಯಾಲ ಪುಂಡ ಭೀಮಸೇನ ಸಲವಿ
ಕಂಡವರ ಕೂಡ ಕದನ ಮಾಡಿದಲ್ಲೇ ತಾಯಿ : ಮಲ್ಲಿಗೆ . . . .

ಎಳ ಗಜದ ಕಂಬವೇರಿದಲ್ಲೀ ತಾಯಿ
ಸಿಟ್ಟೀಲಿ ಬಂದು ನಿಂತು ಭಟ್ಟಂತ ಹೊಡಿದುರ
ಮತ್ತೊಂದು ಜ್ಯಾವಿಗಿ ಮಗನಂದಲ್ಲೇ ತಾಯಿ : ಮಲ್ಲಿಗೆ . . .

ಸತ್ಯವಂತರ ಕತಿಯೇ ಬಿತ್ತಿಟ್ಟು ಕೇಳರಿ ಪ್ರೀತಿ
ವಿಶ್ವಾಮಿತ್ರ ದೇವ ಕಾಡೋಗರಿ ದೇವಾ : ರಾಮಚಂದಿರನೆ
ಬಡವರಿಗೀಗ ಕಾಡಿದರ ನಿಮಗೇನು ಸಿಗಣೆಲ್ಲ
ನಮ್ಮಂಥವರಿಗಿ ಕಾಡೋಗರಿ ದೇವಾ : ರಾಮ . . . .

ಹೊಲ ಮಾರಿ ಮನಿ ಮಾರಿ ಹೆಂಡರುಮಕ್ಕಳು ಮಾರಿ
ಅವರೂಚರಕುಮ ಅಳುದಾರೋ ದೇವ : ರಾಮ . . . .
ಅತ್ತುವಿಂದನೇ ಒಬ್ಬ ಹಾರೂನೆ ಹೊಂಟಿದಾನೆ
ವ್ಯಾಪಾರ ಮಾಡಿಕೊಂಡೆ ಬರತಾನೋ ದೇವ : ಹಾರಮ . . .
ಹಾರುವ ಪೂಜಾಕ ನಿತ್ಯ ಪುಷ್ಪವ ಬೀಕ
ಹೊವ ತರುಲಾಕ ನಡುದಾರೋ ದೇವ : ರಮ
ಒಂದ ಸುಗ್ಗಿ ಕಡಿಯಳಗೆ ಎಳಹೆಡಿ ಸರ್ಪಾವು ಕುಂಡ
ಹಾವ ಕಂತ್ರಿ ರೋಹಿದಾಸ ದೇವ : ರಾಮ
ರಾಮಣ್ಣ ಲಕ್ಷ್ಮಣ ತಾಯಿ ನನ್ನ ತಾರಾಮತಿ
ಹಾವ ಕಚ್ಚಿತ್ರಿ ರೋಹಿದಾಸ ದೇವ ರಾಮ
ತಾಯಿ ನನ್ನ ತಾರಾಮತಿ ಹೊಡಕೋತ ಬಡಕೋತ
ಮಾತ ಧಗಿಯಾಯಿತ್ರಿ ದೇವ ರಾಮ . . . .
ಸ್ಮಶಾನದೊಳಗ ಯರಿದ್ದೀರಿ ಗುರುವೇ
ಮಾತ ಧಗಿಯಾಯಿತ್ರಿ ದೇವ : ರಾಮ
ಸ್ಮಶಾನದೊಳಗ ಯಾರಿದ್ದೀರಿ ಗುರುವೇ
ತಾಳೀಯ ಕೊಡಲಾಕ ಮೊದಲೀಗೆ ಸವರಾಪಾಯಿ
ತಾಳಿ ತಕ್ಕೊಂಡೇ ಕಿಚ್ಚ ಕುಡರಿ ದೇವ : ರಾಮ . . . .
ತಾಳೀಯ ಹೊರತ ಎನ ಇಲ್ಲರಿ ತುತ್ತ
ತಾಳಿ ತಕ್ಕೊಂಡೇ ಕಿಚ್ಚ ಕುಡರಿ ದೇವ : ರಾಮ . . . .
ಯಾವನೇ ಊರಿನಾಕಿ ಯಾವನೇ ದೇಶದಾಕಿ
ಖೂನ ಹೇಳೇ ನಿನ್ನ ಗುರುತೇಳಿ ದೇವ: ರಾಮ . . . .
ನನ್ನ ಹೆಸರು ತಾರಾಮತಿ ಮಗನ ಹೆಸರು ರೋಹಿದಾಸ
ಪುರುಷಾನ ಹೆಸರು ಹರಿಶ್ಚಂದ್ರ ದೇವ: ರಾಮ .. . .
ಮಡದಿ ಹೆಸರು ತಾರಮತಿ ಮಗನ ಹೆಸರು ರೋಹಿದಾಸು
ನಾನು, ನಿನ್ನ ಪುರುಷ ಹರಿಶ್ಚಂದ್ರ ದೇವ : ರಾಮ . . . .

ಏನ ಬೇಡುವೆ ನೀನೆ ಬಿಡೋಗ ಹರಿಶ್ಚಂದ್ರ
ನಿನ್ನ ಭಕ್ತೀಗಿ ಭಕ್ತೀಗಿ ದೇವ : ರಾಮ
ಹೊಲ ಇರಲಿ ಮನಿ ಇರಲಿ ಹೆಂಡರ ಮಕ್ಕಳಿರಲಿ
ಮಗ ರೋಹಿದಾಸ ಬದುಕಿರಲಿ ದೇವಾ : ರಾಮ . . . .

ಬುಲಾಯಿ ಹಾಡು-೯

ತಾಯಿ ಹೆಮ್ಮರಡಿ ತಂದಿ ಕತ್ತಲರಾಯ
ಕಂದು ಅಯ್ಯನ ಹೆಸರು ಕಾಳಿಂಗರಾಯ : ಕೋಲೆಣ ಕೋಲೆ ೧

ಬಾರ ವರುಷದ ಮಗ ಹರದು ಬೀದಿಗೆ ಬಂದ
ತಾಯಿ ಹೆಮ್ಮರಡಿ ತರಬಿದ್ದಳಂತ
ಬಾರ ವರುಷದ ಮಗ ಹರದು ಬೀದಿಗೆ ಬಂದ
ತಂದಿ ಕತ್ತಲುರಾಯ ತರಬಿದ್ದರಂತ
ತಾಯಿ ಮಾತು ಕೇಳೆವಲ್ಲ ತಂದಿ ಮಾತು ಕೇಳೆವಲ್ಲ
ತಯಾರಾಗಂದನ ತನ ದಂಡಿಗಿ
ಮೂರುಂಬು ಗುಟುಕಿಗಿ ಮ್ಯಾಲಕ ನೋಡ್ಯಾರ
ಚಿತ್ರದ ಹುಲಿಯುವ ಕಂಡು ಮಡದಿದನಂತ

ಕಾಳಿಂಗರಾಯ ಸತ್ತ ಸುದ್ದಿ ಅಗಳಿ ಕೇಳ್ಯರೆ
ಬಿಂದಗಿಲಿ ಹೊನ್ನ ತೈಗದಿಟರೆ
ಹತ್ತ ಹಾವಿರ ಹೊನ್ನು ಎತ್ತಿನಮ್ಯಾಳ ಹೇರಿಕೊಂಡು
ವತಲಗರಿ ವಳಗೆಲ್ಲ
ಹತ್ತೂ ಸಾವಿರ ಹೊನ್ನ ನಿ . . ವ . . ರ . ತೊಕ್ಕೊರವ
ಸತ್ತ ಕಾಳಿಂಗರಾಯ ಹೆಣ್ಣಕುಡರಿ
ಹತ್ತು ಸಾವಿರ ಹೊನ್ನ ನಾವರ ವಲೆವು
ಸತ್ತ ಕಾಳಿಂಗ್ರಾಯಗೆ ಹೆಣ್ಣ ಕುಡೆವು
ಬಿಂದುಗಿಲ್ಲಿ ಹೊನ್ನ ಹೆಗಳ ಮ್ಯಾಳ ಹೇರಿಕೊಂಡು
ಹಾರುರಗೇರಿ ವಳಗೆಲ್ಲ
ಬಾಳಿಗಿಲಿ ಹೊನ್ನ ನಿವನ ತೊಕ್ಕರವ
ಸತ್ತ ಕಾಳಿಂಗ್ರಾಯಗ ಹೆಣ್ಣಕುಡರಿ
ಹಾರರಗೇರ್ಯಾಗ ಬಡವ ಉಪದ್ಯ ಹಾನ
ಮಗಳ ಚೆನ್ನಮ್ಮಗ ಕುಡತೇವು ಅಂದ
ಬಾಳಿಗಿಲೆ ಹೊನ್ನ ತೊಕೊಂಡು ಮನಿಗರ ಬಂದನೆ
ನಾಗಿ ಚನ್ನಮಗ ನಡಿ ಅಂತಾನೆ
ಅಡ್ಯಾಡಿ ಚನ್ನಮ್ಮ ಓಡಿ ವಳಿಯಾಕ್ಯ ಬಂದು
ಯಾಕೆ ಹಡದಮ್ಮ ದುಕಮಾಡಿ
ನಿಮ್ಮಪ್ಪ ಬುದ್ದಗೆಡಿ ಹೊನ್ನಿಗಾಶವ ಮಾಡಿ

ಸತ್ತ ಹೆಣಕ ನಿನಗ ಕುಡುತಾರಂತ
ಹಣೆಬಾರದಾಗ ಬರೆದಿದ್ದು ಹರಿಭ್ರಮ್ಮಾರಿ ತಪ್ಪದು
ಅಳುಬ್ಯಾಡ ನನ್ನ ಹಡದಮ್ಮ
ಅನೆರ ತಂದಾರೆ ಅಂಬಾರಿ ಬಿಗದಾರೆ
ನಾರಿ ಚನ್ನಮಗ ನಡಿ ಅಂತರೆ
ಪತಿವರತಿ ಚನ್ನಮ್ಮ ಸುಮ್ಮನೆ ಬಂದಿದ್ದೈಲನೆ
ಕೂಡುಬಾರೆ ಅವನ ಎಡದಲ್ಲಿ
ಸಿರ್ರ್ಯಾರ ತಂದಾರ ಅವರು ದುರಿಂದ್ಯ ಇಟ್ಯಾರೆ
ತೊಟುಕೊ ನಿನಗ್ಯಾರು ತೊಡುಸವರು
ದಂಡ್ಯಾರ ತಂದಾರ ಅವರು ದುರಿಂದೆ ಇಟ್ಟಾರೆ
ಕಟಿಕೊ ನಿನಗ ಕಟ್ಟವರ್‍ಯಾರು
ಕೂಕಮ್ಮ ತಂದರ್‍ೈ ಅವರು ದೂರಿಂದೆ, ಇಟ್ಟಾರೆ
ಕಟಿಕೊ ನಿನಗ ಕಟ್ಟವರ್‍ಯಾರು
ಕೂಕಮ್ಮ ತಂದರ್‍ೈ ಅವರು ದೂರಿಂದೆ ಇಟ್ಟಾರೆ
ಹಚ್ಚೀಕೊ ನಿನಗ್ಯಾರು ಹಚ್ಯಾರು
ಉಡಿಯಕ್ಕಿ ತಂದಾರೆ ಅವರು ದುರಿಂದ್ಯ ಇಟ್ಟಾರೆ
ಹೊಯಕೊ ನಿನಗ ಹೊಯ್ವರಾರು
ಡಾಬರ ತಂದಾರೆ ಅವರು ದೂರಿಂದ್ಯ ಇಟ್ಟಾರೆ
ಇಟಕೊ ನಿನುಗ್ಯಾರು ಇಕ್ಕವರ್‍ಯಾರು
ಮಗಳಸುತರ ತಂದಾರೆ ಅವ್ರು ದೂರಿಂದೆ ಇಟ್ಟಾರೆ
ಇಟ್ಟುಕೋ ನಿನಗ ಇಕ್ಕವರ್‍ಯಾರು
ಸೀರಿಯ ಉಟಕೊ ಅಂದ್ರು ಸೀರೀ ನಾ ಉಟುಕೊಂಡ
ಜನರೆಲ್ಲಾ ನೋಡುತಾರ ತಾಯಕ ನೋಡವಲ್ಲಿ
ಅವ್ರು ಮಟ್‌ಟಿ ಕಟ್ಯಲಿಲ್ಲ ಬಸವ
ನಾ ಕಟ್ಟಿಕೊಂಡನ ಬಸವ
ಜಯದೇವ ಜಯಗುರು ಬಸವ
ನನ ದೈವ ಕೇಳರಿ ಚನ್ನಬಸವ
ಉಡಿಯಕ್ಕಿ ತಂದರೊ ಬಸವ
ಅವ್ರು ದೂರಿಂದ್ಯೆ ಇಟ್ಟರೊ ಬಸವ
ಅವ್ರು ಮಟ್ಟಿ ಹೊಯಲಿಲ್ಲ ಬಸವ
ನಾ ಹೊಯ್ಕೊಂಡನ ಬಸವ
ಜಯದೇವ ಜಯಗುರು ಬಸವ
ಜಯದೇವ ಜಯಗುರು ಬಸವ
ನನ ದೈವ ಯಾರೀಟಸಗಿ ಹೇಳಲಿ ಬಸವ

ಮಗಳಸೂತ್ರ ಮುರಸೆನಿ ಬಸವ
ಕೋರೆಮೀಶೆ ಮಾಡಸೆನಿ ಬಸವ
ನನ ಪುರಷಾನ ಜೀವಪಡಿಸು ಬಸವ
ನನ ಜಯಗುರು ಬಸವ
ನೆನಿಅಕ್ಕಿ ನೆನಿಗಡಲಿ ಬಸವನ ಬಾಯಿಗಾಕಿ
ಹಸು ಆಗವರಸು ಮೆಲ್ಲಬಾರದ್ಯಾಕ : ಕೋಲೆಣ ಕೋಲೆ
ಬಸವನ ಬಾಯಿಯ ಬರುಗು ಪುರಷನ ಬಾಯಿಗಾಕಿ
ಶಿವಶಿವನಂತ ಎದ್ದೆಕುಂತ
ನಡುದು ಬಾ ಪುರಷಾರೆ ನಿಮ ನಡಗಿ ನಾ ನೋಡುವೆ
ತಡ ಇಲ್ಲದ ನೀರು ಬೆರಸೂವೆ
ಎದ್ದು ಬಾ ಪುರುಷಾರೆ ನಿಮ ನಡಗಿ ನಾ ನೋಡುವೆ
ತಡ ತಲ್ಲದ ನೀರು ಬೆರಸೂವೆ
ಎದ್ದು ಬಾ ಪುರಷಾರೆ ನಿಮ ಹೆಜ್ಜಿ ನಾ ನೋಡುವೆ
ತನ ಇಲ್ಲದನ್ನ ಬೆರಸೂವೆ

– ೨ –

ಗುಡ್ಡದ ಬಸವಾ ಗುಡ್ಡಿಯ ಕಟ್ಸೆರೆ
ಸಣ್ಣಗುಡ್ಡಿ ಮುಂದ್ಯೆ ನಿರಿಂದ್ಯೆ ಹರಳ : ದೇವರ ಬಸವಣ್ಣ
ಗುಡ್ಡಡಿ ಮುಂದ್ಯೆ ನಿರಿಂದ್ಯೆ ಹರಳ ಗುಡ್ಡಿ ಮುಂದ್ಯೆ ನಿರಿಂದ್ಯೆ ಹರಳ
ಖೊಂಬಿಘಾಕ್ಯಾರೆ ಖೊಂಬ ಚವರ್‍ಯ ಖೊಂಬಿಘಕ್ಯಾರೆ ಖೊಂಬ ಚವರ್‍ಯ
ಹಣೆಯಲ್ಲಿ ಹಣೆಪಟ್ಟಿ ಬಿಗದಾರೆ
ಹಣೆಯಲ್ಲಿ ಹಣೆಪಟ್ಟಿ ಬಿಗದಾರೆ
ಹಣೆಯಲ್ಲಿ ಹಣೆಪಟ್ಟಿ ಬಿಗದಾರ ಹಣೆಯಲ್ಲಿ ಹಣೆಪಟ್ಟಿ ಬಿಗದಾರ
ಕೊಳ್ಳಾಗಾಕ್ಯಾರ ಹುರಗೆಜ್ಜಿ
ಕೊಳ್ಳಾಗಾಕ್ಯಾರ ಹುರಗೆಜ್ಜಿ ಕೊಳ್ಳಾಗಾಕ್ಯಾರ ಹುರಗೆಜ್ಜಿ
ಎನ್ನಗುಂದಿ ದಾರಿ ಹಿಡಿದ . . .ರೆ:
ಕೊಳ್ಳಾಗಾಕ್ಯಾರ ಹುರಗೆಜ್ಜಿ ಕೊಳ್ಳಗಾಕ್ಯಾರ ಹುರಗೆಜ್ಜಿ
ಊರಸುತ್ತ ತಿರುಗ್ಯಾರೆ ಊರಸುತ್ತ ತಿರುಗ್ಯಾರೆ
ಊರಸುತ್ತ ತಿರುಗ್ಯಾರೆ
ಊರಸುತ್ತ ತಿರುಗ್ಯಾರೆ ಊರಸುತ್ತ ತಿರುಗ್ಯಾರೆ
ಎನ್ನಗುಂದಿ ಅಗಸಿ ಮಾಮುರ್‍ಸೆ
ಎನ್ನಗುಂದಿ ಅಗಸಿ ಮಾಮುರ್‍ಸೆ ಎನ್ನಗುಂದಿ ಅಗಸಿ ಮಾಮುರ್‍ಸೆ
ಕಮತಾಣ ದಾರಿ ಹಿಡುದಾರೆ :

ಕಮಠಾಣ ದಾರಿಡುದಾರೆ ಕಮಠಾಣಾ ಧಾರಿಡುದಾರೆ
ಕಮಠಾಣದೂರ ಸುತ ತಿರುಗ್ಯಾರೆ :
ಕಮಠಾಣದೂರಸುತ್ತ ತಿರುಗ್ಯಾರೆ ಕಮಠಾಣದೂರಸುತ ತಿರುಗ್ಯಾರೆ
ಕಮಠಾಣದಗೆಸಿ ಮಾಮುರ್ಸೆ
ಕಮಠಾಣದೂರಸುತ್ತ ತಿರುಗ್ಯಾರೆ ಕಮಠಾಣದೂರಸುತ ಮಾಮುರ್ಸೆ
ಹಿಂದಕ ತಾನು ತಿರುಗ್ಯಾರೆ :
ಹಿಂದಕ ತಾನು ತಿರುಗ್ಯಾರೆ ಹಿಂದಕ ತಾನು ತಿರುಗ್ಯಾರೆ
ಖಬಿನ ಮಳದಾಗ ಹುಕ್ಯಾರೆ
ಖಬಿನ ಮಳದಾಗ ಹುಕ್ಯಾರೆ ಖಬಿನ ಮಳದಾಗ ಹುಕ್ಯಾರೆ
ಒಂದ ಖಬ್ಯಾ ಅವರು ಮುರುದಾರೆ ಒಂದ ಖಬ್ಯಾ ಅವ್ರು ಮುರುದಾರೆ
ಏಳ ಮಂದಿ ಬಿನ್ನ ಹತ್ಯಾರೆ
ಎಳ ಮಂದಿ ಹತ್ಯಾರೆ ಏಳ ಮಂದಿ ಬೆನ್ನ ಹತ್ಯಾರೆ
ಎನ್ನಗುಂದಿ ದಾರಿ ಹಿಡಿದಾರೆ
ಎನ್ನಗುಂದಿ ದಾಡಿ ಹಿಡಿದಾರೆ ಎನ್ನಗುಂದಿ ದಾರಿ ಹಿಡಿದಾರೆ
ಎನ್ನಗುಂದಿ ಊರಸುತ್ತ ತಿರುಗ್ಯಾರೆ
ಎನ್ನಗುಂದಿ ಊರಸುತ್ತ ತಿರುಗ್ಯಾರೆ ಎನ್ನಗುಂದಿ ಊರಸುತ್ತ ತಿರುಗ್ಯಾರೆ

---

೧. ಕಮಠಾಣ ಎಂಬುದು ಬೀದರಿನಿಂದ ೯ ಕಿಲೋ ಮೀ ದೂರವಿರುವ ಹಳ್ಳಿಹೆಸರು
೨. ಎನ್ನಗುಂದಿ ಕೂಡ ಹಳ್ಳಿಯ ಹೆಸರು

ವಕ್ತಾರರ ಸೂಚಿ

ಕ್ರ.ಸಂ.	ವಕ್ತಾರರ ಹೆಸರು	ಹಾಡಿನ ಹೆಸರು	ಊರು	ವಯಸ್ಸು	ಶಿಕ್ಷಣ	ವೃತ್ತಿ
೧.	ತೇಮಮ್ಮ ಮಾಳಗೆ	ಭುಲಾಯಿ ಹಾಡು	ನಾವದಗೆರಿ	೪೮	೫ನೇ	ಮನೆಗೆಲಸ
೨.	ಸರಸ್ವತಿ ಮಾಳಗೆ	ಭುಲಾಯಿ ಹಾಡು	ನಾವದಗೇರಿ	೫೫	–	ಮನೆಗೆಲಸ
೩.	ಶರಣಪ್ಪ ಭೂತೇರ	ಭೂತೇರ ಪದ	ಚೌಬಾರ	೫೫	–	ವೃತ್ತಿಗಯನ
೪.	ಚಂದ್ರಶೇಖರ ಹೆಬ್ಬಾಳೆ	ಭಜನೆ ಹಾಡು	ನಾವದಗೇರಿ	೩೦	೭ನೇ	ವ್ಯಾಪಾರ
೫.	ಸುಭಾಷ ಅಲ್ಲಾಪೂರ	ಭಜನೆ ಹಾಡು	ಅಲ್ಲಾಪೂರ	೪೫	೬ನೇ	ಸರ್ಕಾರಿ ನೌರರಸ್ಥ
೬.	ಕಲ್ಲಪ್ಪ ಹರಿಜನ	ಭಜನೆ ಹಾಡು	ಜನವಾಡ	೫೯	–	ವ್ಯವಸಾಯ
೭.	ಶ್ರೀಮತಿ ತೇಜಮ್ಮ	ಮದಿವೆ ಹಾಡು	ಹಲಬರ್ಗಾ	೪೦	೭ನೇ	ಮನೆಗೆಲಸ
೮.	ರತ್ನಮ್ಮ ಹೆಬ್ಬಾಳೆ	ಭುಲಾಯಿ ಹಾಡು	ನಾವದಗೇರಿ	೫೮	–	ಮನೆಗೆಲಸ
೯.	ಬಾಬು ಸಂಬಪ್ಪಾ	ಲಾವಣಿ	ಬಗದಲ	೬೦	–	ಮನೆಗೆಲಸ
೧೦.	ಗುಂಡಮ್ಮ	ಜೋಗುಳಪದ	ಬಗದಲ	೪೨	–	ಮನೆಗೆಲಸ
೧೧.	ಸುಭಾಷ ಮುನಿಮ	ಕೋಲಾಟ ಪದ	ಅಲ್ಲಾಪೂರ	೩೫	–	ಸರ್ಕಾರಿ ನೌಕರಸ್ಥ
೧೨.	ನರಸಿಂಗ ಮಚಕೂರಿ	ಮೊಹರಂ ಪದ	ನಾವದಗೇರಿ	೪೫	–	ಕೂಲಿ
೧೩.	ಬೀರಪ್ಪಾ ಧನಗರ	ಡೊಳ್ಳಿನ ಪದ	ಆಲೂರ	೪೫	–	ವ್ಯವಸಾಯ
೧೪.	ಪಾರವ್ವ ಸಿಂಗೆ	ಬೀಸುವಹಾಡ	ಮರಖಲ	೪೦	–	ಅಗಸರು
೧೫.	ಸುಶಿಲಮ್ಮ ಎಸ್.	ಬೀಸುವಹಾಡ	ಮರಖಲ	೫೦	–	ಕೂಲಿ

ಬೀದರನ ಪ್ರಮುಖ ಜನಪದ ಹಾಡುಗಾರರ ಸೂಚಿ

ಕ್ರಮ. ಸಂಖ್ಯೆ	ಜನಪದ ಹಾಡುಗಾರರ ಹೆಸರು	ವಯಸ್ಸು	ಸ್ಥಳ	ಹಾಡಿನ ಹೆಸರು
೧.	ಬಾಬಣ್ಣ	೧೯೨೨	ಮೋರಗಿ	ಮೊಹರಂ ಪದ
೨.	ಶರಣಪ್ಪಾ	೧೯೦೦	ಬೀದರ	ಭೂತೇರ ಪದ
೩.	ಸೈದಪ್ಪಾ	೧೯೦೦–೧೯೫೦	ಬೀದರ	ಭೂತೇರ ಪದ
೬.	ಮಾಣಿಕಗೌಳ	೪೨ ವರ್ಷ	ಕಾರಮುಂಗಿ	ತತ್ವಪದ
೭.	ದಶಮುಖಯ್ಯ	೪೫ ವರ್ಷ	ಕಾರಮುಂಗಿ	ತತ್ವಪದ
೮.	ಸದಾಶಿವರಾವ	೪೫ ವರ್ಷ	ಕಾರಮುಂಗಿ	ತತ್ವಪದ
೯.	ಫಾಳೆಮ್ಮ ಹರಿಜನ	೪೫ ವರ್ಷ	ಬೀದರ	ಭುಲಾಯಿ ಪದ
೧೦.	ವಿರೋಬಾಯಿ	೪೫ ವರ್ಷ	ಬೀದರ	ಭುಲಾಯಿ ಪದ
೧೧.	ಕಂಟೆಪ್ಪಾ	೪೦ ವರ್ಷ	ಕಾರಮುಂಗಿ	ಹಂತಿಪದ
೧೨.	ಸಿದ್ರಾಮ ಚೌದರಿ	೮೨ ವರ್ಷ	ಕಾರಮುಂಗಿ	ಹಂತಿಪದ
೧೩.	ಸಿದ್ರಾಮ ಹರಿಜನ	೫೫ ವರ್ಷ	ಮಲಕಾಪುರ	ಲಾವಣಿಪದ
೧೪.	ಸುಭಾಷ ಅಲ್ಲಾಪೂರ	೪೦ ವರ್ಷ	ಅಲ್ಲಾಪೂರ	ಭಜನೆಪದ
೧೫.	ಚಂದ್ರಶೇಖರ ಹೆಬ್ಬಾಳೆ	೨೮ ವರ್ಷ	ನಾವದಗೇರಿ	ಭಜನೆಪದ
೧೬.	ವಿಶ್ವನಾಥ ಧನ್ನೂರೆ	೩೫ ವರ್ಷ	ನಾವದಗೇರಿ	ಭಜನೆಪದ
೧೭.	ರತ್ನಮ್ಮ ಹೆಬ್ಬಾಳೆ	೬೦ ವರ್ಷ	ನಾವದಗೇರಿ	ಭಜನೆಪದ

೧೮.	ಚಂದ್ರಮ್ಮ ಬಿರಾದಾರ	೫೫ ವರ್ಷ	ಗುನ್ನಳ್ಳಿ	ಕುಟ್ಟುವ ಹಾಡು
೧೯.	ಶಾಮರಾವ ಪಡಕಂಚಿ	೫೦ ವರ್ಷ	ನಾವದಗೇರಿ	ಭಜನೆಪದ
೨೦.	ಬಸಲಿಂಗಮ್ಮ ಹಿಪ್ಪಳಗಾಂವ	೭೫ ವರ್ಷ	ಹಿಪ್ಪಳಗಾಂವ	ಸೋಬಾನೆ ಪದ
೨೧	ಶ್ರೀಮತಿ ಸಂಗಮ್ಮ	೩೦ ವರ್ಷ	ಹಿಪ್ಪಳಗಾಂವ	ಭಜನೆ–ಜೋಗುಳ ಪದ
೨೨.	ರೇವಮ್ಮ	೫೦ ವರ್ಷ	ಚಿಟ್ಟಾ	ಲಾವಣಿಪದ
೨೩.	ದ್ಯಾವಮ್ಮ ಸಂಗೋಳ	೫೦ ವರ್ಷ	ಚಿಟ್ಟಾ	ಲಾವಣಿಪದ
೨೪.	ಸಿದ್ಧಣ್ಣ ಭೂರಿ	೫೦ ವರ್ಷ	ಮಲಕಾಪೂರ	ಕೋಲುಪದ

ಗ್ರಂಥ ಸಹಾಯ

೧) ಕಲ್ಬುರ್ಗಿ ಜಿಲ್ಲೆಯ ಜನಪದ ಕಥೆಗಳು ಮಾದರಿ ಸೂಚಿ
ಲೇಖಕರು : ಡಾ. ವೀರಣ್ಣ ದಂಡೆ
ಮೂಡಲ ಪ್ರಕಾಶನ ಕಲಬುರ್ಗಿ ೧೯೮೬

೨) ಕನ್ನಡ ಜಾನಪದ ವಿಶ್ವಕೋಶ ಸಂ.–೧
ಸಂಪಾದಕರು: ಚಂದ್ರಶೇಖರ ಕಂಬಾರ
ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೧೯೮೫

೩) ಕನ್ನಡ ಜಾನಪದ ವಿಶ್ವಕೋಶ ಸಂ–೨
ಸಂಪಾದಕರು : ಚಂದ್ರಶೇಖರ ಕಂಬಾರ
ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೧೯೮೫

೪) ಗರತಿಯ ಹಾಡು
ಬಿ.ಎಂ.ಶ್ರೀ, ಬೇಂದ್ರೆ, ಮಾಸ್ತಿ
ಸಿಂಪಿ ಲಿಂಗಣ್ಣ
ಸಮಾಜ ಪುಸ್ತಕಾಲಯ ಧಾರವಾಡ, ೧೯೩೧, ೩೬, ೫೬, ೭೧, ೭೮

೫) ಜನಪದ ಸಾಹಿತ್ಯ
ಲೇಖಕರು ಡಾ. ಎಲ್.ಆರ್. ಹೆಗಡೆ
ಕ.ಸಾ.ಪ. ಬೆಂಗಳೂರು ೧೯೭೨

೬) ಕರ್ನಾಟಕ ರಾಜ್ಯ ಗ್ಯಾಸೆಟಿಯರ ಬೀದರ ಜಿಲ್ಲೆ
ಲೇಖಕರು ಕರ್ನಾಟಕ ಸರ್ಕಾರ ಬೆಂಗಳೂರು
ಪ್ರಕಾಶನ : ಸರ್ಕಾರಿ ಪ್ರೆಸ್ ಬೆಂಗಳೂರು ೧೯೪೪

೭) ಬೀದರ ಜಿಲ್ಲಾ ಸಾಂಸ್ಕೃತಿಕ ಅಧ್ಯಯನ
ಲೇಖಕರು ಡಾ. ಬಸವರಾಜ ಸಬರದ
ಪ್ರಕಾಶನ ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೮೨

೮)	ಜನಪದ ವೈಜ್ಞಾನಿಕ ಕ್ಷೇತ್ರಕಾರ್ಯ
ಲೇಖಕರು : ಸಿ.ಪಿ.ಎ.ಪೈ.ಎಸ್.ಜಿ.
ಸಂಪಾದನೆ : ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೭೮

೯)	ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ
ಲೇಖಕರು : ಡಾ. ನಂ. ತಪಸ್ವಿಕುಮಾರ
ಸಂಪಾದಕರು : ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು ೧೯೮೨

೧೦)	ಬೀದರ ಜಿಲ್ಲೆಯ ಜನಪದ ಗೀತೆಗಳು
ಸಂಪಾದಕರು : ಕ್ಯಾತನಹಳ್ಳಿ ರಾಮಣ್ಣ
ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು ೧೯೭೦

೧೧)	ಜಾನಪದ ವಿಜ್ಞಾನ
ಲೇಖಕರು : ಡಾ. ಸೋಮಶೇಖರ ಇಮ್ರಾಪೂರಪಿ
ಚೇತನ ಪ್ರಕಾಶನ ಧಾರವಾಡ ೧೯೭೯

೧೨)	ಕನ್ನಡ ರತ್ನಕೋಶ
ಕ.ಸಾ.ಪ. ಬೆಂಗಳೂರು ೧೯೭೭

೧೩)	ಜನಪದ ಕವಿ ಚರಿತೆ ಸಂ–೧
ಲೇಖಕರು : ಡಾ. ಮಲ್ಲಿಕಾರ್ಜುನ ಲಠ್ಠೆ
ಶ್ರೀ ಶರಣಬಸಪ್ಪಾ ಬಿ. ಮಾಲಿಪಾಟೀಲ
ಧಂಗಾಪೂರ ತಾ. ಆಳಂದ
ಜಿಲ್ಲಾ ಗುಲಬರ್ಗಾ–೧೯೭೮

೧೪)	ಕೆಂಪು ಮಣ್ಣಿನ ವಾಸನೆ
ಲೇಖಕರು : ಡಾ. ಹೆಬ್ಬಾಳೆ ಜಗನ್ನಾಥ ಎಸ್.
ಅಕ್ಕಮಹಾದೇವಿ ಪ್ರಕಾಶನ ೧೯೯೦
ನಾವದಗೇರಿ ಬೀದರ.